ಹಿತ್ತಲಗಿಡ

Vol. 1. (ಪೈರು ೧) No. 1. (ಕೊಯಿಲು ೧), 1996

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.



ಹಿತ್ತಲ ಗಿಡ

ಚಾತುರ್ಮಾಸಿಕ

Vol. 1. (ಪೈರು ೨) No. 1. (ಕೊಯಿಲು ೧), 1996

ಹಿತ್ತಲಗಿಡ ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಈ ಸಂಚಿಕೆಯಲ್ಲಿ

ಹಳೇ ಬೇರುಗಳು

ಹಿತ್ತಲ ಗಿಡದ ಈ ಸಂಚಿಕೆಯ ಮುಖಪುಟವನ್ನು ಅಂದವಾಗಿ ಚಿತ್ರಿಸಿಕೊಟ್ಟವರು ನಮ್ಮ ಹಿರಿಯ ಕಲಾವಿದರಾದ ಕೆನ್ ಕಲಾ ಶಾಲೆಯ ಶ್ರೀ ಹಡಪದ್‌ರವರು. ತಾವೇ ಖುದ್ದಾಗಿ ಚಿತ್ರಿಸಿ ಹಿತ್ತಲ ಗಿಡದ ಒಳಿತಿಗೆ ಹಲವು ಸಲಹೆ ಸೂಚನೆಗಳನ್ನು ಶ್ರೀ ಹಡಪದ್‌ರವರು ನೀಡಿರುವರು. ಹಾಗೆ ಈ ಸಂಚಿಕೆಯ 'ಲೇಖನ ಪರಿಷ್ಕಾರ' (Vetting) ಜವಾಬ್ದಾರಿಯನ್ನು ನಮ್ಮ ಹಿರಿಯ ವಿಜ್ಞಾನಿಗಳು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಗಣ್ಯ ಸದಸ್ಯರು ಆದ ಪ್ರೊ. ಎಂ.ಆರ್. ನಾಗರಾಜ್‌ರವರು ವಹಿಸಿಕೊಂಡಿರುವರು. ಈ ಇಬ್ಬರು ಹಿರಿಯರ ಸೇವೆಗೆ ಹಿತ್ತಲಗಿಡ ಕೃತಜ್ಞತೆ ಸಲ್ಲಿಸುತ್ತದೆ.

ಹಿತ್ತಲ ಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಬಳಸಬಯಸುವ ರೈತರು ಮೊದಲು ಅವನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ. ಕೋರಲಾಗಿದೆ.

ಹಾಗೇ, ಹಿತ್ತಲಗಿಡದಲ್ಲಿ ದಾಖಲಿಸಿರುವ ಯಾವುದೇ ಮಾಹಿತಿ, ತಂತ್ರಜ್ಞಾನ ಮತ್ತು ವಿಚಾರಗಳನ್ನು ವಾಣಿಜ್ಯ ದೃಷ್ಟಿಯಿಂದ ಉಪಯೋಗಿಸುವವರು, ಮೊದಲು ಅದನ್ನು ಹಿತ್ತಲಗಿಡದ ಮತ್ತು ಅದರ ಮೂಲ ವ್ಯಕ್ತಿಗಳು, ಸಮುದಾಯದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ಸಂಪಾದಕ

ಗೌರವ ಸಂಪಾದಕ

ಟಿ.ಎಸ್. ಪ್ರಕಾಶ್ ಕಮ್ಮರಡಿ,
ಸಹಾಯಕ ಪ್ರಾಧ್ಯಾಪಕ, ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ,
ಬೆಂಗಳೂರು -560 024

ಹಿತ್ತಲ ಗಿಡದ ಪೋಷಕರು :

ಪ್ರೊ. ಅನಿಲ್ ಕೆ.ಗುಪ್ತ, ಮತ್ತು ಸೃಷ್ಟಿ. (SRISTI - Society for Research and Initiatives for Sustainable Technologies and Institutions)
ಐ.ಐ.ಎಂ. ಅಹಮದಾಬಾದ್

ಸಂಪಾದಕೀಯ

ಹಿತ್ತಲಗಿಡ ಇದೀಗ ಎರಡನೇ ವರ್ಷಕ್ಕೆ ಕಾಲಿಟ್ಟಿದೆ. ಪತ್ರಿಕೆ ಒಂದನ್ನು ಸಮಯಕ್ಕೆ ಹೊರತರುವಾಗ ಎದುರಾಗುವ ಎಲ್ಲಾ ಅಡತಡೆಗಳನ್ನೂ ಈ ನಮ್ಮ ಹಿತ್ತಲ ಗಿಡ ಎದುರಿಸಬೇಕಾಗಿದೆ. ಜೊತೆಗೆ, ಹಿತ್ತಲಗಿಡ ರೈತರಿಗೆ "ಹೇಳುವ" ಪತ್ರಿಕೆಯಲ್ಲ, ಬದಲಿಗೆ ಅವರನ್ನು "ಕೇಳುವ" ಪತ್ರಿಕೆ. ಹಾಗಾಗಿ ಒಂದೊಂದು ದೇಶೀಯ ಕ್ರಮವನ್ನೂ, ಅದು ಎಷ್ಟೇ ಚಿಕ್ಕದಾಗಿ, ಸರಳವಾಗಿದ್ದರೂ ಕೂಡ ಅರಿತು, ದಾಖಲು ಮಾಡುವ ಮಹತ್ವವನ್ನೂ, ಆ ನಿಟ್ಟಿನಲ್ಲಿ ಬರುವ ತೊಂದರೆಗಳನ್ನೂ ಸಹೃದಯ ಓದುಗರು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಸಹಕರಿಸುತ್ತಾರೆಂದು ಆಶಿಸುತ್ತೇವೆ. ರೈತ ಸಮುದಾಯ ಹಿತ್ತಲಗಿಡದ ಬಗ್ಗೆ ತೋರುತ್ತಿರುವ ಆಸಕ್ತಿ ನಮಗೆ ಅಪಾರ ಹೆಮ್ಮೆ ತಂದಿದೆ ಮತ್ತು ಇದನ್ನು ವ್ಯವಸ್ಥಿತಗೊಳಿಸಲು ಶಕ್ತಿಮೀರಿ ಶ್ರಮಿಸುತ್ತೇವೆಂದು ಮತ್ತೊಮ್ಮೆ ಹೇಳ ಬಯಸುತ್ತೇವೆ.

ಮತ್ತೊಂದೆಡೆಯಿಂದ, ದೇಶ, ವಿದೇಶಗಳಲ್ಲಿ ದೇಶೀಯ ಜ್ಞಾನ, ತಂತ್ರಜ್ಞಾನ, ಪಾರಂಪರಿಕ ವಿಜ್ಞಾನಗಳ ಬಗ್ಗೆ ಏಳುತ್ತಿರುವ ಆಸಕ್ತಿ ನಡೆಯುತ್ತಿರುವ ಚಟುವಟಿಕೆಗಳು "ಹಿತ್ತಲಗಿಡ"ದಂತಹ ಪ್ರಯತ್ನಗಳಿಗೆ ಮತ್ತಷ್ಟು ಶಕ್ತಿಕೊಡುತ್ತಿದೆ. "ಜೀವ ಚಾಲಕ ಕೃಷಿ" (Bio Dynamic Farming) ಬಗ್ಗೆ ಪೀಟರ್ ಪ್ರಾಕ್ಟರ್ ಮೇಲ್ವಿಚಾರಣೆಯಲ್ಲಿ ಬೆಂಗಳೂರಿನ ಇಕ್ರಾ ಸಂಸ್ಥೆಯವರು ಈಗಾಗಲೇ ಎರಡು ಕಾರ್ಯಾಗಾರವನ್ನು ಮುಗಿಸಿದ್ದು ಮತ್ತೊಂದನ್ನು ಈಗ ಯೋಜಿಸಿರುವರು. ಇದಕ್ಕೆ ನಮ್ಮ ರೈತರು ಎಲ್ಲಿಲ್ಲದ ಉತ್ಸಾಹ ತೋರಿರುವರು. ಕಳೆದ ಡಿಸೆಂಬರ್‌ನಲ್ಲಿ ಮದ್ರಾಸಿನಲ್ಲಿ "ಪಾರಂಪರಿಕ ವಿಜ್ಞಾನ ಮತ್ತು ಭಾರತೀಯ ತಂತ್ರಜ್ಞಾನಗಳ" ಬಗ್ಗೆ ದ್ವಿತೀಯ ಸಮ್ಮೇಳನ ಜರುಗಿತ್ತು. ಇದರಲ್ಲಿ ದೇಶೀಯ ಕೃಷಿ ಮತ್ತು ಪಶುಪಾಲನೆ ಕ್ರಮಗಳ ಬಗ್ಗೆ, ಅರಣ್ಯಶಾಸ್ತ್ರ, ನೀರು ಸಂರಕ್ಷಣೆ, ಮತ್ಸ್ಯಗಾರಿಕೆ, ಆಹಾರ ಮತ್ತು ಜೀವ ವೈವಿಧ್ಯತೆಗಳ ಬಗ್ಗೆ ನೂರಾರು ಪ್ರಬಂಧಗಳು ಮಂಡಿಸಲ್ಪಟ್ಟು ಸತತ ಚರ್ಚೆ, ಸಂವಾದಗಳು ನಡೆದಿರುತ್ತದೆ. ಇದೇ ಸಮಯದಲ್ಲಿ ಥೈಲ್ಯಾಂಡಿನ ಬ್ಯಾಂಕಾಕ್‌ನಲ್ಲಿ, ಪಾರಂಪರಿಕ ಕೃಷಿಯ ಬಗ್ಗೆ, ಅದರಲ್ಲಡಗಿರುವ ಸಾಂಸ್ಕೃತಿಕ ವಿಚಾರಗಳ ಬಗ್ಗೆ ಮತ್ತು ಈ ರೀತಿಯ ಕೃಷಿ ಪದ್ಧತಿಯನ್ನು ಸ್ಥಳೀಯ ಮತ್ತು ಜಾಗತಿಕ ಮಟ್ಟಗಳಲ್ಲಿ ಗಟ್ಟಿಮಾಡುವ ಬಗ್ಗೆ ಏಶಿಯಾ ಮಟ್ಟದ ವಿಚಾರ ಸಂಕಿರಣ ಒಂದು ನಡೆದಿರುತ್ತದೆ. ಕಳೆದ ಸಾರಿಯ 'ಅಂತರರಾಷ್ಟ್ರೀಯ ಸಸ್ಯ ಸಂರಕ್ಷಣೆ ಮಹಾಮೇಳ' ನೆದರ್‌ಲ್ಯಾಂಡಿನಲ್ಲಿ ನಡೆದಿದ್ದು, ಇದರಲ್ಲಿ ದೇಶೀಯ ಸಸ್ಯಸಂರಕ್ಷಣೆ ಕ್ರಮಗಳ ಬಗ್ಗೆ ಒಂದು ಪ್ರತ್ಯೇಕ ಗೋಷ್ಠಿಯನ್ನೇ ಏರ್ಪಡಿಸಲಾಗಿತ್ತು. ಈ ಎಲ್ಲಾ ವಿದ್ಯಮಾನಗಳಲ್ಲಿ ಹಿತ್ತಲಗಿಡ ಬಳಗದ ಸದಸ್ಯರುಗಳು ಸಕ್ರಿಯವಾಗಿ ಭಾಗವಹಿಸಿರುತ್ತಾರೆ ಮತ್ತು ಇದರ ವಿಚಾರಗಳನ್ನು ಎತ್ತಿ ಹಿಡಿದಿರುತ್ತಾರೆಂಬುದು ಅತ್ಯಂತ ಹೆಮ್ಮೆಯ ಸಂಗತಿಯಾಗಿರುತ್ತದೆ.

ಈ ಎಲ್ಲಾ ವಿದ್ಯಮಾನಗಳಲ್ಲಿ, ಚರ್ಚೆ, ಸಂವಾದಗಳಲ್ಲಿ ಒಮ್ಮತ ಅಭಿಪ್ರಾಯಗಳು, ಅಂತಿಮ ತೀರ್ಮಾನಗಳು ಏರ್ಪಾಡಾಗಿಲ್ಲದಿರಬಹುದು. ಹಾಗೇ, ಈ ದೇಶೀಯ ಜ್ಞಾನ, ತಂತ್ರಜ್ಞಾನ ವ್ಯವಸ್ಥೆಗಳು ಆಧುನಿಕ ವಿಜ್ಞಾನ, ತಂತ್ರ ಜ್ಞಾನಗಳಿಗೆ ಪರ್ಯಾಯವಾಗಬಹುದು ಎನ್ನುವ ಸರಳ ತೀರ್ಮಾನವನ್ನು ಒಪ್ಪಲು ಹಲವರು ಸಿದ್ಧರಿರಲಿಲ್ಲ. ಆದರೆ, ಈ ಆಧುನಿಕ ವಿಜ್ಞಾನ, ತಂತ್ರಜ್ಞಾನಗಳ ಮೂಲಕ ಎದ್ದಿರುವ ಅಭಿವೃದ್ಧಿ ಪ್ರಕ್ರಿಯೆಯ ಇತಿಮಿತಿಗಳ ಅರಿವು ಎಲ್ಲರಲ್ಲೂ ಸ್ಪಷ್ಟವಾಗಿದ್ದು, ಈ ನಿಟ್ಟಿನಲ್ಲೆ, ದೇಶೀಯ ವ್ಯವಸ್ಥೆಗಳು ಭರವಸೆಯ ಬೆಳಕನ್ನು ಹೊತ್ತಿಸಲು ಯಶಸ್ವಿಯಾಗಿರುವುದರಲ್ಲಿ ಅನುಮಾನವಿರದು.

ಈ ಸಂಚಿಕೆಯಲ್ಲಿ ಎರಡು ಬುಡಕಟ್ಟು ಜನಾಂಗಗಳ ಕೃಷಿ ಪದ್ಧತಿಗಳನ್ನು ವಿವರವಾಗಿ ದಾಖಲು ಮಾಡಲಾಗಿದೆ. ದೇಶೀಯ ಜ್ಞಾನ, ತಂತ್ರಜ್ಞಾನ ವ್ಯವಸ್ಥೆಗಳ "ವಿಶ್ವದೃಷ್ಟಿಕೋನ" (Cosmovision) ಈಗ ಅತ್ಯಂತ ಪ್ರಸ್ತುತವಾಗುತ್ತಿದ್ದು, ಇದನ್ನು ಅರಿಯಲು ಈ ಬುಡಕಟ್ಟು ಕೃಷಿ ಪದ್ಧತಿಗಳು ಸಹಾಯವಾಗುತ್ತದೆ ಎಂಬುದು ನಮ್ಮ ಅಭಿಪ್ರಾಯ. ಈ ಬುಡಕಟ್ಟು ಕೃಷಿಪದ್ಧತಿಗಳ ಹಿಂದಿನ ವಿಶ್ವದೃಷ್ಟಿಕೋನ ವಾದರೂ ಅತ್ಯಂತ ಸಮಗ್ರವಾಗಿರುತ್ತದೆ. ಇದು ಬರಿದೇ ವಸ್ತುಜಗತ್ತಿಗಾಗಲೀ, ಮಾನವ ಜಗತ್ತಿಗಾಗಲೀ ಸೀಮಿತವಾಗಿರದೇ ಅರಣ್ಯ, ಪಶು, ಪಕ್ಷಿ, ಕೀಟಾದಿಗಳ ಇಡೀ ಪ್ರಕೃತಿ ಜಗತ್ತನ್ನೂ, ಇವೆರಡರ ಮೇಲಿನ ಆಧ್ಯಾತ್ಮಿಕ ಜಗತ್ತು, ಇವೆಲ್ಲವನ್ನೂ ಒಳಗೊಂಡಿರುವುದನ್ನು ಗಮನಿಸಬೇಕಾಗಿದೆ. ಸಂಕೀರ್ಣತೆ, ಜೀವ ವಿವಿಧತೆಯೇ ಇವುಗಳ ಜೀವಾಳವಾಗಿರುತ್ತದೆ. ಇಲ್ಲಿ ಪ್ರಕೃತಿಯನ್ನು ಕೈವಶಮಾಡಿಕೊಳ್ಳುವ, ನಿಯಂತ್ರಿಸುವ ಪ್ರಯತ್ನವಿರದೇ, ಅದರ ಒಂದು ಅಂಗವಾಗಿ ತಮ್ಮನ್ನು ತಾವು ಕಂಡುಕೊಳ್ಳುವ ಮನೋಪ್ರವೃತ್ತಿ ಗಟ್ಟಿಯಾಗಿರುತ್ತದೆ. ಸೋಲಿಗ ಕೃಷಿ ಪದ್ಧತಿಯಲ್ಲಿ ಈ ವಿಶ್ವದೃಷ್ಟಿಕೋನ ಸ್ಪಷ್ಟವಾಗಿದ್ದರೆ, ಸಿದ್ದಿಕೃಷಿಪದ್ಧತಿಯಲ್ಲಿ ಪ್ರಕೃತಿ ಮತ್ತು ಮಾನವಜಗತ್ತುಗಳ ಬಗೆಗಿನ ಕಾಳಜಿಯಲ್ಲಿ ಸಮತೋಲನ ಏರ್ಪಾಟಾಗಿ, ಆ ಮೂಲಕ ಸುಸ್ಥಿರ ಕೃಷಿಯ ಹಲವು ಲಕ್ಷಣಗಳು ಮೈಗೂಡುವಂತಾಗಿರುವುದು ಅತ್ಯಂತ ಮಹತ್ವದ ವಿಚಾರವಾಗಿರುತ್ತದೆ. ಅಂದ ಮೇಲೆ, ನಾವು ದಾಖಲುಮಾಡುತ್ತಿರುವ ದೇಶೀಯ ತಂತ್ರಜ್ಞಾನಗಳನ್ನು ಈ ವಿಶ್ವದೃಷ್ಟಿಕೋನದ ಮೂಲಕ ಅರ್ಥೈಸಿಕೊಳ್ಳಲು ಸಾಧ್ಯವೇ ? ಹಾಗೆ ನಮ್ಮ ಕೃಷಿ ಅಭಿವೃದ್ಧಿಗೆ ಅತ್ಯಗತ್ಯವಾಗಿರುವ ಪರ್ಯಾಯ ತಂತ್ರಜ್ಞಾನ ವ್ಯವಸ್ಥೆ ಈ ವಿಶ್ವದೃಷ್ಟಿಕೋನವನ್ನು ಹೊಂದುವಂತೆ ಮಾಡುವ ಬಗೆ ಹೇಗೆಂಬುದು ನಮ್ಮ ಮುಂದಿರುವ ದೊಡ್ಡ ಸವಾಲಾಗಿರುತ್ತದೆ.

ಈ ರೀತಿಯಾಗಿ, ಜ್ಞಾನ ಮತ್ತು ವಿಶ್ವದೃಷ್ಟಿಕೋನಗಳ ಬಗ್ಗೆ ಚರ್ಚೆ ಏರ್ಪಡಿಸುತ್ತಾ, ದೇಶೀಯ ವಿಜ್ಞಾನ ಮತ್ತು ಆಧುನಿಕ ವಿಜ್ಞಾನ ವ್ಯವಸ್ಥೆಗಳೆರಡನ್ನೂ ಗಟ್ಟಿಮಾಡಿ, ಹತ್ತಿರತರುವ ಸಾಧ್ಯತೆಯ ಬಗ್ಗೆ ಸಂವಾದ ಏರ್ಪಡಿಸುವುದೇ ಹಿತ್ತಲಗಿಡದಂತಹ ಪತ್ರಿಕೆಯ ಉದ್ದೇಶವಾಗಬೇಕಾಗಿದೆ.

ಈ ನಿಟ್ಟಿನಲ್ಲಿ ನೆದರ್‌ಲ್ಯಾಂಡ್ ದೇಶದ COMPAS (Comparing &

Supporting Indigenous Agricultural System) ಯೋಜನೆ ಗಮನಾರ್ಹ ಪ್ರಯತ್ನವನ್ನು ಪ್ರಾರಂಭಿಸಿದ್ದು, ಹಿತ್ತಲಗಿಡ ಅದರ ಸಲಹೆ, ಮಾರ್ಗ ಸೂಚಿಗಳ ನೆರವಿಗೆ ಪ್ರಯತ್ನಿಸುತ್ತಿದೆ. ಇದರ ಮೂಲ ಉದ್ದೇಶವಾದರೂ ಹೊಸತೊಂದು ಅಭಿವೃದ್ಧಿ ಪರಿಕಲ್ಪನೆ - "ಜನತಾ ಮೂಲದಿಂದಲೇ, ವ್ಯವಸ್ಥೆಯ ಒಳಗಿನಿಂದಲೇ ಏಳುವ ಅಭಿವೃದ್ಧಿ" (Endogenous Development)ಕಲ್ಪನೆಯನ್ನು ಪ್ರಚುರಪಡಿಸುವುದಾಗಿರುತ್ತದೆ. ಇಲ್ಲಿ ವ್ಯಕ್ತಿಗಳನ್ನು ಬದಿತಳ್ಳುವುದಿಲ್ಲ, ಅವರ ಮೇಲೆ ಹೊರಗಿನಿಂದ ಅಭಿವೃದ್ಧಿ ಕ್ರಿಯೆಗಳನ್ನು ಹೇರಲು ಅವಕಾಶವಿರುವುದಿಲ್ಲ. ಬದಲಿಗೆ ಜನರ ಸಂಸ್ಕೃತಿಯನ್ನೂ ಅವರ ಸುತ್ತಲಿನ ಪರಿಸರವನ್ನು ರಕ್ಷಿಸುತ್ತಾ, ಅವರ ಲೌಕಿಕ ಬದುಕನ್ನೂ ಆರ್ಥಿಕ ಸಾಮರ್ಥ್ಯವನ್ನೂ ಉತ್ತಮ ಪಡಿಸುವಂತಹದ್ದು ಈ ಅಭಿವೃದ್ಧಿ ಮಾದರಿ. ಇಲ್ಲಿ ದೇಶೀಯ ಜ್ಞಾನ, ಆಧುನಿಕ ವಿಜ್ಞಾನಗಳಲ್ಲಿ ಒಂದು ಕೀಳು ಮತ್ತೊಂದು ಮೇಲೆಂಬ ಮಾತಿರುವುದಿಲ್ಲ. ಬದಲಿಗೆ ವಿವಿಧಜ್ಞಾನ ವ್ಯವಸ್ಥೆಗಳ ನಡುವೆ ಸಾಮರಸ್ಯ (Synergy) ಏರ್ಪಾಟಾಗುವಂತೆ ಮಾಡುವುದು ಪ್ರಸ್ತುತವಾಗಿರುತ್ತದೆ. ಹಾಗೇ ಇಲ್ಲಿ ದೇಶೀಯ ಜ್ಞಾನ ಮತ್ತು ಆಧುನಿಕ ವಿಜ್ಞಾನಗಳನ್ನು ಸಂಕರಣಗೊಳಿಸಿ, ಹೊಸತೊಂದು ತಂತ್ರಜ್ಞಾನ ಪದ್ಧತಿಯನ್ನು ಸೃಷ್ಟಿಸುವುದಲ್ಲ. ಬದಲಿಗೆ ವ್ಯಕ್ತಿಗಳ ದೃಷ್ಟಿಕೋನ, ಅಗತ್ಯ, ಸಂಸ್ಕೃತಿ, ಪರಿಸರ, ಆರ್ಥಿಕ ಗುರಿ, ಸಾಮಾಜಿಕ ಮೌಲ್ಯಗಳಿಗೆ ಹೊಂದಿಕೊಂಡಿರುವಂತೆ 'ವಿವಿಧ' (Variety) ಜ್ಞಾನ, ವಿಜ್ಞಾನ, ತಂತ್ರಜ್ಞಾನ ಪ್ರಕಾರಗಳ ಆಯ್ಕೆಯ ಪರಿಸ್ಥಿತಿಯನ್ನು ಹುಟ್ಟುಹಾಕುವುದಾಗಿರುತ್ತದೆ. ಈ ನಿಟ್ಟಿನಲ್ಲಿ ನಮ್ಮ ಶಿವಮೊಗ್ಗದ ಪ್ರಗತಿಪರ ರೈತರಾದ ದೇವಂಗಿ ಪ್ರಫುಲ್ಲಚಂದ್ರರು ತಯಾರಿಸಿದ ಸರಳ ಕೃಷಿಯಂತ್ರಗಳನ್ನು, ಹೆಗ್ಗೂರಿನ ಶ್ರೀ ಗಣೇಶ ಹೆಗಡೆಯವರ ಮಾದರಿ ಬಿಸಿಗಾಲುವೆಯನ್ನೂ ಈ ಸಂಚಿಕೆಯಲ್ಲಿ ವಿವರಿಸಿರುವೆವು. ಇಂತಹ ಪದ್ಧತಿಗಳನ್ನೂ "ರೈತರ ಸಹಯೋಗದಲ್ಲೇ ಅಭಿವೃದ್ಧಿಪಡಿಸುವ" (Participatory Technology Development) ವಿಚಾರದಲ್ಲಿ ನಮ್ಮ ವಿಜ್ಞಾನಿಗಳು ಗಮನ ಹರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಮಹಾರಾಷ್ಟ್ರ ಕೃಷಿವಿಶ್ವವಿದ್ಯಾನಿಲಯದ ನವೀನ ವಿಸ್ತರಣಾ ಮತ್ತು ತಂತ್ರಜ್ಞಾನದ ಸೃಷ್ಟಿಯ ಕಾರ್ಯವನ್ನು ಇತರೇ ವಿಶ್ವವಿದ್ಯಾನಿಲಯಗಳೂ ಅನುಕರಿಸಿದರೆ ಉಚಿತವಾಗುತ್ತದೆ. ಅದೇ ರೀತಿ ಅಭಿವೃದ್ಧಿಯ ಕಾರ್ಯದಲ್ಲಿ, ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯ ವಿಚಾರದಲ್ಲಿ ಜನತೆ ಒಗ್ಗೂಡಿದರೆ ಎಂತಹ ಅದ್ಭುತ ಪರಿಣಾಮ ಉಂಟಾಗಬಹುದೆನ್ನಲು, "ಹೆಗ್ಗನೂರು ಹೆಗ್ಡೆಗಳ ಸಾಮೂಹಿಕ ಬೇಸಾಯ ಮಾದರಿಯೆ" ಸಾಕ್ಷಿಯಾಗಿದೆ.

ಹಿತ್ತಲಗಿಡ ಕೃಷಿಯ ಮೇಲೆ ಹೆಚ್ಚು ಒತ್ತುಕೊಟ್ಟಿರಬಹುದು. ಆದರೆ ಇಲ್ಲಿ ಸಾಮಾನ್ಯ ಜನರಲ್ಲಿನ ಸಂಶೋಧನಾ ಪ್ರವೃತ್ತಿ, ಅವರು ಸಮಸ್ಯೆಗಳೆದುರಾದಾಗ ತೋರುವ ಜಾಣ್ಮೆಗಳು ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ವಾಹನದ ರೇಡಿಯೇಟರ್ ಕೆಟ್ಟಾಗ ಮೆಕಾನಿಕ್ ಬಾಳೇಕಾಯಿ Starch ಬಳಸಿದ್ದು, ಮುಂತಾದ "ದೇಶಿಯ ಜಾಣ್ಮೆ"ಗಳನ್ನು ಪರಿಚಯಿಸುತ್ತಿರುವೆವು. ನಮ್ಮ ವ್ಯವಸ್ಥಿತ ವಿಜ್ಞಾನ ರೂಪಗೊಂಡಿರುವುದಾದರೂ ಬರದೇ ಪರಿಣಿತರ ಪ್ರಯೋಗ, ಸಂಶೋಧನೆಗಳಿಂದಲ್ಲ. ಬದಲಿಗೆ ಅತ್ಯಂತ ಸಹಜವಾದ ಪರಿಸರದಲ್ಲಿ ಸಾಮಾನ್ಯರು ಈ ರೀತಿ ತೋರಿದ ಜಾಣ್ಮೆಗಳೂ ಇಂದಿನ ಆಧುನಿಕ ವಿಜ್ಞಾನ, ತಂತ್ರಜ್ಞಾನಗಳ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿವೆ ತಾನೆ ?

ಈ ಸಾರಿಯ 'ಪಾವನ ಪರಿಸರ' ಪ್ರಶಸ್ತಿ ಪಡೆದ ಶ್ರೀ ಯಲ್ಲಪ್ಪರೆಡ್ಡಿಯವರನ್ನು ಹಿತ್ತಲಗಿಡದ ವಿಶೇಷ ವ್ಯಕ್ತಿಯಾಗಿ ಆಯ್ಕೆಮಾಡಲಾಗಿದೆ. ಶ್ರೀ ರೆಡ್ಡಿಯಂತಹ ಅಧಿಕಾರಿಗಳು ನಮ್ಮ ದೇಶದಲ್ಲಿ ಮತ್ತಷ್ಟು ರೂಪಗೊಂಡರೆ ನಮ್ಮ ಪರಿಸರ ಮತ್ತು ಸಂಸ್ಕೃತಿಗಳು ಉಳಿದು ಬೆಳೆಯುವುದರಲ್ಲಿ ಸಂಶಯವಿರದು.

ಹಿತ್ತಲ ಗಿಡದಲ್ಲಿ ಪ್ರಕಟವಾದ ದೇಶೀಯ ಕ್ರಮಗಳನ್ನು ಇಂಗ್ಲೀಷ್‌ಭಾಷೆಯಲ್ಲಿ ಹನಿಬೀ ಪತ್ರಿಕೆಯಲ್ಲಿ ಭಾಷಾಂತರಿಸಿ ಪ್ರಕಟಿಸಿರುವುದನ್ನು ಓದಿ, ಏಳು ಪುಟಗಳ ಸುದೀರ್ಘ ಪ್ರತಿಕ್ರಿಯೆಯನ್ನು ಜಾನಸ್‌ಬ್ಲೂ ಅಮೇರಿಕದ ನ್ಯೂ ಮೆಕ್ಸಿಕೊದಿಂದ ಕಳುಹಿಸಿರುವಳು. ಈಕೆಯ ಪತ್ರದ "ಕಿತ್ತಾಡದೇ ಕೂಡಿಬಾಳುವ, ಪ್ರಾಣಿ ಪಕ್ಷಿ, ಸಸ್ಯ ಸಂಕುಲಗಳೊಡನೆ ಹೊಂದಾಣಿಕೆಯಿಂದ ಬದುಕಲು ಕಲಿಯೋಣ" ಎಂಬ ಮಾತುಗಳು ಈ ಸಂಚಿಕೆಯ ಸಂದೇಶಗಳಾಗಲಿ ಎಂದು ಹಾರೈಸುತ್ತೇವೆ.

ಪತ್ರಿಕೆಗೆ 'ಹಿತ್ತಲಗಿಡ' ಹೆಸರು ಬಳಸಲು ಅನುಮತಿ ದೊರಕಿದ್ದು ನೊಂದಾಣಿಕೆಗೆ ಸಿದ್ಧವಾಗಿದೆ. 'ಹಿತ್ತಲಗಿಡ' ದ ಚಟುವಟಿಕೆಗಳನ್ನು ಮತ್ತಷ್ಟು ವ್ಯವಸ್ಥಿತಗೊಳಿಸಲು ಸಂಸ್ಥೆಯೊಂದನ್ನು ಹುಟ್ಟುಹಾಕುವ ಯೋಚನೆಯನ್ನು ಸ್ನೇಹಿತರೆಲ್ಲಾ ಮಾಡುತ್ತಿರುವೆವು. ಹಿತ್ತಲಗಿಡದ ರೀತಿಯ ಪ್ರಯತ್ನವನ್ನು ಬೇರೆ ಬೇರೆ ಭಾಷೆಯಲ್ಲಿ ಕೈಗೊಂಡಿರುವವರ ಅನುಭವವನ್ನು ಹಂಚಿಕೊಂಡು ಈ ರೀತಿಯ ಪ್ರಯತ್ನಗಳನ್ನು ಒಗ್ಗೂಡಿಸಿ, ಗಟ್ಟಿಮಾಡುವ ಉದ್ದೇಶದಿಂದ ಪ್ರೊ.ಅನಿಲ್ ಗುಪ್ತರವರು ಇದೇ ಸೆಪ್ಟೆಂಬರ್ 24-25 ರಂದು ಐ.ಐ.ಎಮ್ ಅಹಮದಾಬಾದಿನಲ್ಲಿ ಸಭೆಯೊಂದನ್ನು ಕರೆದಿರುವರು. ಇವು ಹಿತ್ತಲಗಿಡದ ಬೆಳವಣಿಗೆಗೆ ಪೂರಕವಾಗಲಿವೆ ಎಂದು ಆಶಿಸುತ್ತೇವೆ.

ಟಿ.ಎನ್. ಪ್ರಕಾಶ್ ಕಮ್ಮರಡಿ.



ದೇಶೀಯ ಹತೋಟಿ ಕ್ರಮಗಳು

ಬೇರಿನ ಹುಳುಗಳು :

ಕಾಸರಕದ ಸೊಪ್ಪನ್ನು *(Strychnos nuxvomica)* ಸಗಣಿಯ ಜೊತೆ ಬೆರೆಸಿ ತಯಾರಿಸಿದ ಗೊಬ್ಬರವನ್ನು ಏಲಕ್ಕಿ, ನಿಂಬೆ ಸಸಿಗಳಿಗೆ ಹಾಕುವುದರಿಂದ ಬೇರಿಗೆ ತೊಂದರೆ ಕೊಡುವ ಹುಳುಗಳು (Rootgrubs) ನಾಶವಾಗುತ್ತವೆ.

(ಟಿ.ಎಸ್.ಹೆಗಡೆ, ಆಶೀಸರ)

ಚೆಂಡು ಹೂವು :

ಮೆಣಸಿನ ಗಿಡಗಳ ನಡುವೆ ಅಲ್ಲಲ್ಲಿ ಚೆಂಡು ಹೂವು ನೆಟ್ಟರೆ, ಮೆಣಸಿನ ಕೀಟ ಮತ್ತು ರೋಗದ ಬಾಧೆ ಕಡಿಮೆ.

ಕಾಳು ಮೆಣಸಿನ ದಿಂಡಿನ ಉಪಯೋಗ :

ಮೆಣಸಿನ ಕಾಳನ್ನು ತೆಗೆದು ನಂತರ ಉಳಿಯುವ ದಿಂಡು ಅಥವಾ ಗುಂಜು ಕೃಷಿಗೆ ಬಲು ಉಪಯುಕ್ತ.

ಅ) ಈ ದಿಂಡು ಅಥವಾ ಗುಂಜನ್ನು ನಿಂಬೆ, ಮಾವು ಮತ್ತು ಮೂಸಂಬಿಗೆ ಮುಚ್ಚಿಗೆಯಾಗಿ ಹಾಕುವುದರಿಂದ ಆ ಗಿಡಗಳಿಗೆ ಬರುವ ಕಾಂಡ ಕೊರಕದ ಬಾಧೆ ಕಡಿಮೆಯಾಗುತ್ತದೆ.

ಆ) ದಿಂಡಿಗೆ ಬೆಂಕಿ ಕೊಟ್ಟು, ಬರುವ ಹೊಗೆಯನ್ನು ಹೂವಿನ ಹಂತದಲ್ಲಿ ಮಾವಿನ ಮರಕ್ಕೆ ಹಾಕಿದರೆ ಗೊರಟಿಗೆ ಬೀಳುವ ಹುಳುಗಳ (Stoneweevil) ಬಾಧೆ ಕಡಿಮೆಯಾಗುತ್ತದೆ.

ಕುರುವಾಯಿ ನಿಯಂತ್ರಣ :

ಅ) ತೆಂಗಿಗೆ ತೊಂದರೆ ಕೊಡುವ ಕುರುವಾಯಿ *(Rhinoceros beetle)* ಕಾಟವನ್ನು ತಡೆಯಲು ತಲೆಯ ಕೂದಲನ್ನು ಸಣ್ಣಗೆ ಗೋಲಿಯ ಹಾಗೆ ಉಂಡೆ ಮಾಡಿ ತೆಂಗಿನ ಮರದ ಸುಳಿಯಲ್ಲಿ ಹುದುಗಿಸಿದರೆ ಕುರುವಾಯಿಗಳ ಕಾಟ ಕಡಿಮೆಯಾಗುತ್ತದೆ.

(ಹುಲ್ಯ ಸಿದ್ದಿ, ಚಿಪಗೇರಿ)

ಆ) ಉಪ್ಪು ಮತ್ತು ಮರಳನ್ನು ಜೊತೆಗೂಡಿಸಿ, ತೆಂಗಿನ ಮರದ ಸುಳಿಯಲ್ಲಿ ತುಂಬಿದರೂ, ತೆಂಗಿಗೆ ತೊಂದರೆ ಕೊಡುವ ಕುರುವಾಯಿಯ ಕಾಟ ಕಡಿಮೆಯಾಗುತ್ತದೆ.

(ಶಾಂತಾರಾಂ ಸಿದ್ದಿ, ಚಿಪಗೇರಿ)

ಹೆಗ್ಗಣ ಕಾಟ ತಡೆಯುವುದು :

ಮೆಣಸಿನ ಕಾಳನ್ನು ಬಿಡಿಸಿದ ದಂಟನ್ನು ಸುಟ್ಟು ಬಿಲಗಳಿಗೆ ಹೊಗೆ ಹಾಯಿಸುವುದರಿಂದ ಹೆಗ್ಗಣಗಳು ಸಾಯುತ್ತವೆ.

(ಕೆ.ಕೆ. ಹೆಗಡೆ, ಆಶೀಸರ)

ಬಿಸಿಲು ಕಾಯಿಸುವುದು :

ಭತ್ತ ನಾಟಿ ಮಾಡಿದ 2-3 ತಿಂಗಳನಂತರ, 15-20 ದಿನಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಗದ್ದೆಯಿಂದ ಹೊರ ಹಾಕಿ 2-3 ದಿನ ನೇರ ಬಿಸಿಲು ಬಿದ್ದರೆ ಕೀಟ-ರೋಗದ ಬಾಧೆ ಕಡಿಮೆಯಾಗುತ್ತದೆ ಎಂಬುದು ಮಂಚಿಕೆರೆ ಪ್ರಾಂತ್ಯದ ರೈತರ ಅನುಭವ.

ಸಂಗ್ರಹ : ಆನಂದ್ ಮತ್ತು ಅರುಣ ಕುಮಾರ

ಭತ್ತದ ಎಲೆ ಸುರುಳಿ ರೋಗಕ್ಕೆ :

ತಾಮ್ರದ ಪಾತ್ರೆಯಲ್ಲಿ ಹತ್ತು ಲೀಟರ್ ನೀರನ್ನು ಹಾಕಿ ಕುದಿಸುತ್ತಾ ಅದಕ್ಕೆ ಒಂದು ಕೆ.ಜಿ. ಕತ್ತಾಳೆ ಗಿಡದ ಎಲೆಗಳನ್ನು ಹಾಕಿ ಒಂದು ದಿನ ಹಾಗೇ ಬಿಟ್ಟು ಅನಂತರ ಸೋಸಿ ತಿಳಿನೀರನ್ನು ಭತ್ತದ ಗಿಡಗಳಿಗೆ ಸಿಂಪಡಿಸುವುದು.

ಅಡಿಕೆ ತೋಟದಲ್ಲಿ :

ಅ) ಕಾಸರಕ ಮರದ ಕಾಯಿಗಳನ್ನು ಅರೆದು ಎಳೆನೀರಿನ ಜೊತೆ ಸಮಪ್ರಮಾಣದಲ್ಲಿ ಬೆರೆಸಿದಾಗ ಭಾರೀ ವಿಷಕಾರಕವಾಗುತ್ತದೆ. ಅದನ್ನು ಹಲವು ಬೆಳೆಗಳಿಗೆ ಕೀಟ ನಾಶಕವಾಗಿ ತೀರ್ಥಹಳ್ಳಿಯ ಪುರುಷೋತ್ತಮ ರಾಯರು ಬಳಸುತ್ತಿರುವರು.

ಆ) ಅವರು ಅಡಿಕೆ ತೋಟದಲ್ಲಿ ಸುವರ್ಣಗಡ್ಡೆ ಗಿಡಗಳನ್ನು ಬೆಳೆದಿದ್ದಾರೆ. ಸುವರ್ಣಗಡ್ಡೆ ಗಿಡಗಳು ಶಿಲೀಂಧ್ರ ಪ್ರತಿರೋಧಕ ಶಕ್ತಿಯನ್ನು ಹೊಂದಿರುವುದರಿಂದ ಅವರ ತೋಟದಲ್ಲಿ ಯಾವುದೇ ರೀತಿಯ ಶಿಲೀಂಧ್ರ ರೋಗವು ಕಂಡು ಬಂದಿಲ್ಲ. ಕಳೆದ ಬಾರಿ ಭಾರೀ ಮಳೆಯಾದರೂ ಅವರ ತೋಟಕ್ಕೆ ಕೊಳೆ ರೋಗ ಬಂದಿಲ್ಲ.

ತೆಂಗಿನ ಕಾಂಡ ಕೊರೆಯುವ ಹುಳದ ಹತೋಟಿಗಾಗಿ:

- 2-3 ಟ್ಯೂಬ್ ಲೈಟ್‌ಗಳನ್ನು ತೋಟದ ವಿವಿಧೆಡೆಯಲ್ಲಿ ಹಾಕಿಸಿದರೆ, ರಾತ್ರಿ ಹೊತ್ತು ಹುಳುಗಳು ಬೆಳಕಿನೆಡೆಗೆ ಹೋಗುವುದರಿಂದ ಹಾನಿ ಕಮ್ಮಿ.
- ಬೇವಿನೆಣ್ಣೆ ಮತ್ತು ಜೇನುತುಪ್ಪವನ್ನು ಮಿಶ್ರಣಮಾಡಿ ತೆಂಗಿನ ಕುಡಿಗೆ ಲೇಪಿಸುವುದರಿಂದ ಹತೋಟಿ ಯಾಗುವುದು.

ಮುಕ್ಕಡಕ ದ್ರಾವಣ :

ತೀರ್ಥಹಳ್ಳಿ ತಾಲ್ಲೂಕಿನ ಸರು ಗ್ರಾಮದ ಯುವ ಉತ್ಸಾಹಿ ಕೃಷಿಕ - ಶ್ರೀ ಬಿ.ಎಸ್. ದಿನೇಶ್ ಕಳೆದೆರಡು ವರ್ಷಗಳಿಂದ ಭತ್ತದ ಬೇಸಾಯದಲ್ಲಿ ಕೀಟ ಹತೋಟಿಗೆ ಯಾವುದೇ ರಾಸಾಯನಿಕಗಳನ್ನು ಕೊಂಡುಕೊಳ್ಳದೆ ಸಾವಯುವ ಕೃಷಿಗೆ ಮೊರೆ ಹೋಗಿರುವರು. ಇವರು "ಮುಕ್ಕಡಕ" ಎಂಬ ಗಿಡದ ದ್ರಾವಣ ತಯಾರಿಸಿ ಗದ್ದೆಗೆ ಸಿಂಪಡಿಸಿ ಯಶಸ್ವಿಯಾಗಿದ್ದಾರೆ. ಸಿಂಪರಣಾ ದ್ರಾವಣ ತಯಾರಿಸುವ ವಿಧಾನ ಈ ಕೆಳಕಂಡಂತಿದೆ.

10ಲೀಟರ್ ನೀರಿಗೆ 1 ಕೆಜಿ. ಮುಕ್ಕಡಕ ಸೊಪ್ಪನ್ನು ಹಾಕಿ ಒಲೆಯ ಮೇಲಿಟ್ಟು ಕುದಿಸಿದ ನಂತರ 1 ಲೀಟರ್ ಶುಭ್ರವಾದ ದ್ರಾವಣವನ್ನು 10 ಲೀಟರ್ ನೀರಿನಲ್ಲಿ [1:10 ಅನುಪಾತದಲ್ಲಿ] ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಮುಕ್ಕಡಕ ದ್ರಾವಣವನ್ನು ಭತ್ತದ ಗದ್ದೆಗೆ ಒಟ್ಟು ಎರಡು ಬಾರಿ ಸಿಂಪಡಿಸಬಹುದು :-

ಅ) ಅಗೇಡಿ (Nursery) ಯಲ್ಲಿ ಒಂದು ಬಾರಿ. ಇದರಿಂದ ಅನೇಕ ಕೀಟಗಳು ಪ್ರಾರಂಭ ಹಂತದಲ್ಲೇ ಹತೋಟಿಗೆ ಬರುತ್ತವೆ.

ಆ) ನಾಟಿಯಾದ ಮೇಲೆ - ಇದರಿಂದ ಜಿಗಿಹುಳು, ಬಿಳಿನೊಣ ಇತ್ಯಾದಿ ಕೀಟಗಳನ್ನು ನಿಯಂತ್ರಿಸಬಹುದು.

ಪರಿಣಾಮ :-

ಅ) ಮುಕ್ಕಡಕ ದ್ರಾವಣ ಸಿಂಪರಣೆಯಿಂದ ಭತ್ತದ ಬೆಳೆಯಲ್ಲಿ ಜಿಗಿಹುಳು, ಕಂದು ಜಿಗಿಹುಳು ಹಾಗೂ ಇತರ ಕೀಟಗಳನ್ನು ನಿಯಂತ್ರಿಸಲು ಸಾಧ್ಯ.

ಆ) ಮುಕ್ಕಡಕ ದ್ರಾವಣವನ್ನು ಸಿಂಪಡಿಸಿದಾಗ ಏಡಿಗಳು ಭತ್ತದ ಗಿಡದ ಬಳಿ ಸುಳಿಯುವುದೇ ಇಲ್ಲವಂತೆ !

ಇ) ಮುಕ್ಕಡಕ ಸೊಪ್ಪನ್ನು ಉತ್ತಮ ಹಸಿರೆಲೆಗೊಬ್ಬರವಾಗಿಯೂ ಉಪಯೋಗಿಸ ಬಹುದು.

ಸೂಚನೆ : ಮುಕ್ಕಡಕ ದ್ರಾವಣವನ್ನು ಸಸ್ಯಕ್ಕೆ

ಹತೋಟಿ ಕ್ರಮಗಳು

ಸಿಂಪಡಿಸಿದ್ದರಿಂದ ಕೆಲವರಿಗೆ ಮುಖ ಊದಿಕೊಳ್ಳುವುದು, ಮೈಕೈ ಕಡಿತ ಬಂದಿರುವ ಬಗ್ಗೆ ಮಾಹಿತಿಯಿದೆ. ಹಾಗಾಗಿ ಸಿಂಪಡಿಸುವ ವೇಳೆಯಲ್ಲಿ ಎಚ್ಚರಿಕೆ ಅತ್ಯಗತ್ಯ.

ಸಂಗ್ರಹ: ಬಿ.ಎ.ಅನಿಲ್‌ಕೌಶಿಕ್, ಶಿವಮೊಗ್ಗ

ದೈನಂದಿನ ವಸ್ತುಗಳಿಂದ ಗಿಡಗಳ ಸಂರಕ್ಷಣೆ.

ಅ) ಅರ್ಧ ಕೆಜಿ ಬೆಳ್ಳುಳ್ಳಿಯನ್ನು ಜಜ್ಜಿ 100 ಮಿಲಿಲೀಟರ್ ಸೀಮೆ ಎಣ್ಣೆಯಲ್ಲಿ ನೆನೆಸಿಡಬೇಕು. ಮರುದಿನ ಇದರ ರಸವನ್ನು ಬಸಿದುಕೊಂಡು 100 ಗ್ರಾಂ ಹಸಿ ಮೆಣಸಿನ ಕಾಯಿ ಜಜ್ಜಿ 100 ಮಿಲಿಲೀಟರ್ ನೀರಿನಲ್ಲಿ ಹಾಕಿ ಕಲೆಸಿ ಇದರ ರಸವನ್ನೂ ಬಸಿದು, ಎರಡೂ ರಸಗಳನ್ನು ಬೆರೆಸಿ ಈ ಮಿಶ್ರಣವನ್ನು 100 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದರಿಂದ ಈ ಔಷಧಿ ಹತ್ತಿಯ ಬಾಲ್‌ವರ್ಮ್, ಟೊಮೆಟೊ ಹಣ್ಣು ಕೊರೆಯುವ ಹುಳು, ತೊಗರಿ ಮತ್ತಿತರ ಬೇಳೆಗಳ ಕಾಯಿ ಕೊರೆಯುವ ಹುಳುಗಳನ್ನು ನಿಯಂತ್ರಿಸುವುದು.

ಆ) ತಲಾ ಏಳು ಕೆಜಿ ಲಕ್ಕಿ ಸೊಪ್ಪು *(Vitex negundo)*, *Ipomea fistula* ದ ಎಲೆ ಮತ್ತು ಹೊಂಗೆ ಎಲೆಯನ್ನು, 4 ಕೆಜಿ ಎಕ್ಕ *(Calotropis proera)* ದ ಎಲೆಯನ್ನೂ ರುಬ್ಬಿ, 20 ಲೀಟರ್ ನೀರಿನಲ್ಲಿ ಅರ್ಧ ಗಂಟೆ ಕುದಿಸಿ ಒಂದು ದಿನ ಇಡಬೇಕು. ಮರುದಿನ ಈ ನೀರನ್ನು ಬಸಿದು 100 ಲೀಟರ್ ನೀರಿನಲ್ಲಿ ಬೆರೆಸಿ ಗಿಡಗಳಿಗೆ ಸಿಂಪಡಿಸಿದರೆ ಇದು ಪ್ರಬಲ ಕ್ರಿಮಿ ಕೀಟ ನಿರೋಧಕವಾಗಿರುವುದು.

ಇ) 200 ಗ್ರಾಂ ವಾಯುವಿಳಂಗವನ್ನು ಎರಡು ಲೀಟರ್ ನೀರಿನಲ್ಲಿ ಚೆನ್ನಾಗಿ ಕುದಿಸಿ, ದಿನವೆಲ್ಲ ತಣಿಸಿ ಮರುದಿನ ನೀರನ್ನು ಬಸಿದು 100 ಲೀಟರ್ ನೀರಿನೊಡನೆ ಬೆರೆಸಿ ಸಿಂಪಡಿಸುವುದು. ಇದು ಕೀಟ ನಾಶಕ ಮತ್ತು ಶಿಲೀಂಧ್ರ ನಾಶಕ.

ಸಸ್ಯ ಸಂಜೀವಿನಿ ಟಾನಿಕ್ :

ತಲಾ ಒಂದು ಕಿಲೋ ಎಳ್ಳು, ಉದ್ದು, ಹೆಸರು, ಬಾರ್ಲಿ ಮತ್ತು ಒಂದು ಲೀಟರ್ ಹಾಲನ್ನು 10 ಲೀಟರ್ ನೀರಿನಲ್ಲಿ ಕುದಿಸಿ ದ್ರವವನ್ನು ಬಸಿದು 100 ಲೀಟರ್ ನೀರಿನಲ್ಲಿ ಬೆರೆಸಿ ಗಿಡಗಳಿಗೆ ಸಿಂಪಡಿಸಿದರೆ ಹೂವು, ಕಾಯಿಗಳು ಪುಷ್ಕಳವಾಗಿ ಬರುವುದು ಕಂಡಿದೆ.

(ಯಶವಂತ ರಾವ್ ಚವ್ಹಾಣ್ ಮಹಾರಾಷ್ಟ್ರ ಮುಕ್ತ ವಿಶ್ವವಿದ್ಯಾನಿಲಯದ ನಿರ್ದೇಶಕ ಡಾ. ಸೂರ್ಯ ಗುಂಜಾಲ್ ಅವರು ಮದ್ರಾಸ್‌ನಲ್ಲಿ ಡಿಸೆಂಬರ್‌ನಲ್ಲಿ ನಡೆದ ದೇಶೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಸಮ್ಮೇಳನದಲ್ಲಿ ಮಂಡಿಸಿದ ಲೇಖನದ ಅನುವಾದ)

ಕೃಪಾ , ಬೆಂಗಳೂರು.

ಮಾದರಿ ಬಸಿಗಾಲುವೆ

ಎಸ್. ನರಸಿಂಹ


ತಲತಲಾಂತರದಿಂದ ಜೌಗು ಭೂಮಿಯೆಂದು ಬೀಳುಬಿಟ್ಟ ಎರಡು ಎಕರೆಯನ್ನು ಇಂದು ಫಲಭರಿತ ಜಮೀನನ್ನಾಗಿಸಿಕೊಂಡಿದ್ದಾರೆ - ಉತ್ತರ ಕನ್ನಡದ ಸಿದ್ದಾಪುರ ತಾಲ್ಲೂಕಿನ ಹೆಗ್ಗನೂರಿನ ಶ್ರೀ ಗಣೇಶ ಹೆಗಡೆಯವರು.

ಸದಾ ಜೌಗು ತುಂಬಿ ಜಿಗಿ ಜಿಗಿ ಗುಟ್ಟುತ್ತಿದ್ದ ಈ ಭೂಮಿಯನ್ನು ತಮ್ಮ ಪ್ರಯೋಗಶೀಲ ಬುದ್ಧಿವಂತಿಕೆಯಿಂದ ಇಂದು ಎರಡು ಎಕರೆ ಬಾಳೆ, ಅಡಿಕೆ ಬೆಳೆಯನ್ನು ಬೆಳೆಯುವಂತೆ ಮಾಡಿಕೊಂಡಿರುವುದು ಒಂದು ಅನುಕರಣೀಯ ಸಂಗತಿ.

ಉತ್ತರ-ದಕ್ಷಿಣವಾಗಿ ಇಳಿಜಾರಾಗಿರುವ ಈ ಜೌಗು ಭೂಮಿಯಲ್ಲಿ ಇಳಿಜಾರಿಗೆ ಅಡ್ಡಲಾಗಿ ಆರರಿಂದ ಏಳು ಅಡಿ ಆಳದಲ್ಲಿ, ಮಂಗಳೂರು ಹಂಚುಗಳನ್ನು ತ್ರಿಭುಜಾಕೃತಿಯಲ್ಲಿ ಜೋಡಿಸಿದ್ದಾರೆ. ಈ ರೀತಿ ಜೌಗಿನ ಅಂಶವೆಲ್ಲ, ಈ ಬಸಿಗಾಲುವೆಯ ಮೂಲಕ ಮುಖ್ಯಕಾಲುವೆಗೆ ಹರಿದು ಅಲ್ಲಿಂದ ತಗ್ಗು ಪ್ರದೇಶದ ಕಬ್ಬು ಭತ್ತದ ಗದ್ದೆಗಳಿಗೆ ಹೋಗುತ್ತದೆ. ಪ್ರತಿ 50'ಅಡಿಗೆ ಒಂದು ಅಡಿಯಂತೆ ಈ ಬಸಿಗಾಲುವೆಯ ಆಳವನ್ನು ಹೆಚ್ಚಿಸುತ್ತಾ ಹೋಗಿದ್ದಾರೆ. (ಚಿತ್ರ1) ಈ ರೀತಿಯ ಸುಮಾರು 5 ಕಾಲುವೆಗಳಿಂದ ಜೌಗಿನ ಎಲ್ಲಾ ಅಂಶವು ಬಸಿದು ಹರಿದು ಹೋಗುವುದರಿಂದ ಇಂದು ಈ ಭೂಮಿ ಒಣಗಿ ಬೆಳೆ ಬೆಳೆಯಲು ಯೋಗ್ಯವಾಗಿದೆ. ಈ ಬಸಿಗಾಲುವೆಯನ್ನು ನೆಲದ ಒಳಗಡೆ ನಿರ್ಮಿಸಿ ಮೇಲೆ ಮಣ್ಣು ಮುಚ್ಚಿ ಸಮತಟ್ಟಾದ ಭೂಮಿಯನ್ನಾಗಿಸಿದ್ದಾರೆ.

ಬಸಿಗಾಲುವೆಗಳು ಜೌಗಿನಿಂದ ಅಥವಾ ಸಣ್ಣ ಪುಟ್ಟ ಕಸಕಡ್ಡಿಗಳಿಂದ ಕಟ್ಟಿಕೊಳ್ಳದಂತೆ ಮಾಡಲು ಪ್ರತಿ ಬಸಿಕಾಲುವೆಯ ಬುಡದಲ್ಲಿ (ಪೂರ್ವದಿಕ್ಕಿನಲ್ಲಿ) ಐದು ಇಂಚಿನ ಪೈಪನ್ನು ಜೋಡಿಸಿದ್ದು ಅದರಿಂದ ಜೋರಾಗಿ ನೀರು ಹಾಯಿಸಿದರೆ ಬಸಿ ಕಾಲುವೆಗಳು ಸ್ವಚ್ಛಗೊಳ್ಳುತ್ತವೆ ಎಂದು ಶ್ರೀ ಹೆಗಡೆಯವರ ಅಂಬೋಣ.

ಒಟ್ಟಿನಲ್ಲಿ ಅಂದಿನ ಜೌಗು ಭೂಮಿ ಇಂದು ಎರಡು ಎಕರೆ ಫಲವತ್ತಾದ ಅಡಿಕೆ ತೋಟಕ್ಕೆ ಸಜ್ಜಾಗುತ್ತಿರುವುದು ಮಾದರಿಯಂತಿದೆ.



ಜಿ.ಪಿ. ಹೆಗಡೆಯವರ ಮಾದರಿ ಬಸಿಗಾಲುವೆ

ನಾಟಿ ಪಶುಸಂಗೋಪನಾ ವಿಧಾನಗಳು

ಉಂಬ್ಳೆ ಬೈಲಿನ ಹಿರಿಯ ಕೃಷಿಕ ಶ್ರೀ ಶಂಕರನಾರಾಯಣ ಐತಾಳರ ಪ್ರಾಯೋಗಿಕ ಅನುಭವದಿಂದ ಆರಿಸಿದ ಕೆಲವು ನಾಟಿ ಚಿಕಿತ್ಸಾ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಜಾನುವಾರುಗಳಿಗೆ ಗಾಯವಾದಾಗ :

ಅ) ಜಾನುವಾರುಗಳು ಸಗಣಿ ಹಾಕಿದ ತಕ್ಷಣವೇ ಸಗಣಿಯನ್ನು ಗಾಯಕ್ಕೆ ಲೇಪಿಸುವುದರಿಂದ ಗಾಯವು ಶೀಘ್ರ ಗುಣಮುಖ.

ಆ) ಸುಟ್ಟ ಬೆರಣಿಯ ಬೂದಿಯನ್ನು ಸೀಮೆ ಎಣ್ಣೆಯಲ್ಲಿ ಸೇರಿಸಿ ಮುಲಾಮನ್ನು ತಯಾರಿಸಿ ಗಾಯಗಳಿಗೆ ಲೇಪಿಸಬೇಕು.

ಜಾನುವಾರುಗಳ ಭೇದಿ ನಿಯಂತ್ರಣಕ್ಕೆ :
ಒಂದು ಮುಷ್ಟಿ ಉಪ್ಪನ್ನು ನಾಲ್ಕು ಲೀಟರ್ ನೀರಿನಲ್ಲಿ ಬೆರೆಸಿ ಕುಡಿಸಬೇಕು ಅಥವಾ ಮಾಮೂಲಿನಂತೆ ನೀಡುವ ತೌಡಿನಲ್ಲಿ ಒಂದು ಮುಷ್ಟಿ ಉಪ್ಪನ್ನು ಬೆರೆಸಿ ತಿನ್ನಿಸಬೇಕು.

ಹೊಟ್ಟೆ ಹುಳಕ್ಕೆ :

ಸುಮಾರು ಇಪ್ಪತ್ತು ಬೆಳ್ಳುಳ್ಳಿಗಳನ್ನು ಜಜ್ಜಿ, ಒಂದು ಚಿಟಿಕೆ ಉಪ್ಪನ್ನು ಸೇರಿಸಿ ತಿನ್ನಿಸಬೇಕು.

ದನಗಳು ಬೆದೆಗೆ ಬರಲು :
ಹತ್ತು ದಿನಕ್ಕೊಮ್ಮೆ ಅರ್ಧ ಸೇರು ಉದ್ದಿನಬೇಳೆಗಳನ್ನು ತಿರುವಿ 2 ತಿಂಗಳವರೆಗೆ ನೀಡಿದಲ್ಲಿ ದನಗಳು ಶೀಘ್ರ ಬೆದೆಗೆ ಬರುತ್ತವೆ.

ಎತ್ತುಗಳ ಹಿಮ್ಮಡಿ ಗಾಯಕ್ಕೆ :
ಗೇರು ಬೀಜದ ಸಿಪ್ಪೆ ಎಣ್ಣೆಯನ್ನು ಹಿಮ್ಮಡಿ ಗಾಯಕ್ಕೆ ಹಚ್ಚುವುದರಿಂದ ಶೀಘ್ರದಲ್ಲಿ ಗಾಯ -ಮಾಯ.

ಬಿ.ಎ. ಅನಿಲ್‌ಕೌಶಿಕ್, ಶಿವಮೊಗ್ಗ.

ಮಾಡುತ್ತಾ ಕಲಿ :
ನಾವು ಕಳೆದ 3-4 ವರ್ಷಗಳಿಂದ ಬೇಸಾಯಕ್ಕೆ ಇಳಿದಿದ್ದು ಹಸುವನ್ನು ಸಾಕಲಾರಂಭಿಸಿದ್ದೇವೆ. ನಮ್ಮ ಮನೆಯಲ್ಲಿ "ಇಂಗ್ಲೀಷ್" ಔಷಧಿಗಳ ಬಗ್ಗೆ ಎಂದೂ ಅಭಿಮಾನ ಕಮ್ಮಿ. ಹೀಗಾಗಿ ದನ ಸಾಕುವ ಹೊಸತರಲ್ಲಿ ಅವಕ್ಕೆ ಡಾಕ್ಟರು ಕೊಡುವ ಅಲೋಪತಿ ಔಷಧಿಗಳು ನಮ್ಮ ಮನಸ್ಸಿಗೆ ಅಷ್ಟು ಸಮಾಧಾನಕರವಾಗಿರಲಿಲ್ಲ. ಆ ಔಷಧಿಗಳನ್ನು ಗಮನಿಸಿ ನೋಡಿದಾಗ ಅವು ಮನುಷ್ಯರು ತೆಗೆದು ಕೊಳ್ಳುವ ಔಷಧಿಯನ್ನೇ ಹೆಚ್ಚಿನ ಅನುಪಾತದಲ್ಲಿ (ದೊಡ್ಡ ದೇಹಕ್ಕೋಸ್ಕರ) ಕೊಡುವುದು ಎಂದು



ತಿಳಿಯಿತು. ಹೀಗಾದರೆ ನಾವು ನಮ್ಮ ಕಾಯಿಲೆಗೆ ಮಾಡುವ ಮನೆ ಔಷಧಿಗಳನ್ನೇ ದನಗಳಿಗೂ ಯಾಕೆ ಮಾಡಬಾರದು ? ಡಾಕ್ಟರಿಗೆ, ಔಷಧಿಗಳಿಗೆ ಕೊಡುವ ಹಣವೂ ಉಳಿಯುವುದಲ್ಲ ಎಂಬ ಯೋಚನೆ ಬಂತು. ನಾವು ಮಾಡಿದ ಕೆಲವು ಯಶಸ್ವಿ ಪ್ರಯೋಗಗಳು ಇವು.

ಭೇದಿಗೆ ಮೆಂತ್ಯ : ನಾವು ಒಂದು ಚಮಚ ತೆಗೆದು ಕೊಳ್ಳುವಲ್ಲಿ ದನಕ್ಕೆ ಅದರ ದೇಹತೂಕದ ಲೆಕ್ಕದ ಮೇಲೆ ಒಂದರೆಡು ಹಿಡಿ ಬೇಕಾಗುವುದು.

ಗಾಯಗಳಿಗೆ : ನೀರು ಸೋಂಕಿಸದೇ, ಗೋ ಮೂತ್ರದಿಂದ ತೊಳೆದರೆ, ಗಾಯಗಳು ವಾಸಿಯಾಗುತ್ತವೆ. ಗಾಯಗಳಿಗೆ ಮತ್ತು ಚರ್ಮದ ತೊಂದರೆಗಳಿಗೆ ಸ್ವಮೂತ್ರ ಚಿಕಿತ್ಸೆ ಬಹಳ ಪರಿಣಾಮಕಾರಿಯಾದ ಔಷಧಿ.

ಜ್ವರಕ್ಕೆ ನಾವು ತೆಗೆದುಕೊಳ್ಳುವ ಗಿಡಮೂಲಿಕೆಗಳ ಔಷಧಿಯನ್ನೇ ದನಗಳಿಗೂ ಕೊಡಬಹುದು.

ಮುಕ್ತಾ - ಬೆಂಗಳೂರು.

ಕಾಲು ಬಾಯಿ ರೋಗಕ್ಕೆ ನಾಟಿ ಮದ್ದು : ಉತ್ತರ ಪ್ರದೇಶದ ಬುಲಂದಶರಾ ಜಿಲ್ಲೆಯ ಜನರು ಹಸುಗಳಿಗೆ ಬರುವ ಕಾಲುಬಾಯಿ ರೋಗದ ನಿಯಂತ್ರಣಕ್ಕಾಗಿ ಅನುಸರಿಸುವ ಕೆಲವು ವಿಧಾನಗಳು ಹೀಗಿವೆ.

- ಜಾಲಿ (*Acacia nilotica*) ಮರದ ತೊಗಟೆಯನ್ನು ನೀರಿನಲ್ಲಿ ಚೆನ್ನಾಗಿ ಕುದಿಸಿ, ತಣಿಸಿ, ಉಗುರು ಬೆಚ್ಚಗಿರುವ ನೀರನ್ನು ಹಸುವಿನ ಗೊರಸಿನ ಮೇಲೆ ಸುರಿಯುತ್ತಾರೆ. ಅದೇ ನೀರಿನಿಂದ ಹಸುವಿನ ಬಾಯಿಯನ್ನು ತೊಳೆಯುತ್ತಾರೆ.
- ಉಪ್ಪನ್ನು ನೀರಿನಲ್ಲಿ ಕರಗಿಸಿ ಬಿಸಿ ಮಾಡಿ ಗೊರಸಿನ ಮೇಲೆ ಧಾರೆಯಾಗಿ ಸುರಿಯುವುದರಿಂದಲೂ ಈ ರೋಗ ಹತೋಟಿಗೆ ಬರುತ್ತದೆಯಂತೆ.
- ಸಾಸಿವೆ ಎಣ್ಣೆಯನ್ನು ಸ್ವಚ್ಛಗೊಳಿಸಿದ ಗೊರಸಿಗೆ ಹಚ್ಚುತ್ತಾಬರುವುದು ಕೆಲವೆಡೆ ಕಂಡು ಬಂದಿದೆ.
- ಬಿಸಿಯಾದ ಮರಳಿನ ಮೇಲೆ ಕಾಲು ಬಾಯಿರೋಗದಿಂದ ಬಳಲುತ್ತಿರುವ ಹಸುವನ್ನು ನಡೆಸಿ, ಅನಂತರ ತೇವದ ಮಣ್ಣಿನ ಮೇಲೆ ಹಸುವನ್ನು ನಡೆಸಿದರೆ ಗೊರಸಿಗೆ ಮಣ್ಣಿನ ಲೇಪನವಾಗಿ ರೋಗವನ್ನು ಹತೋಟಿ ಯಲ್ಲಿಡುತ್ತದೆ ಎಂಬುದು ಅಲ್ಲಿಯ ಜನರ ಅನುಭವ. ಇದೇ ರೀತಿಯ ಚಿಕಿತ್ಸೆಯನ್ನು ಗುಜರಾತಿನ ಹಲವು ಪ್ರದೇಶಗಳಲ್ಲೂ ಅನುಸರಿಸುತ್ತಿರುತ್ತಾರೆ.
- ಸಾಂಪ್ರದಾಯಿಕ ಪಶುವೈದಕೀಯ ಪದ್ಧತಿಗಳು ತಮಿಳುನಾಡಿನ `ಪೆರಿಯ ಮತ್ತು ವಡಗಂ' ಎಂಬ ಪುಸ್ತಕದಲ್ಲಿ ವಿವರಿಸಲ್ಪಟ್ಟಿದೆ. ಕಾಲು ಬಾಯಿ ರೋಗ ನಿಯಂತ್ರಣಕ್ಕೆ ಆ ಪುಸ್ತಕದಲ್ಲಿ ನಮೂದಿಸಲ್ಪಟ್ಟಿರುವ ಕೆಲವು ವೈದಕೀಯ ಪದ್ಧತಿಗಳು ಈ ಕೆಳಗಿನಂತಿವೆ.
- ಬಜೆ (*Acorus calamus*) ಮತ್ತು ಅಗಸೆ (*Sesbania grandiflora*) ಇವೆರಡನ್ನೂ ಸೇರಿಸಿ ಪುಡಿಮಾಡಿ ರೋಗಗ್ರಸ್ತ ಹಸುವಿನ ಬಾಯಿ ಮೂಗು ಮತ್ತು ಕಾಲಿಗೆ ಹಚ್ಚುವುದು.
- ಒಣಗಿದ ಮೀನನ್ನು ನೆನೆಸಿಟ್ಟ ನೀರನ್ನು ಹಸುವಿನ ಗೊರಸಿಗೆ ಹಚ್ಚುವುದು. ಇದೇ ರೀತಿಯ ಪದ್ಧತಿ ಗುಜರಾತಿನಲ್ಲೂ ಬಳಕೆಯಲ್ಲಿದೆ. ಆದರೆ ಅವರು ಆ ನೀರನ್ನೂ ಹಸುಗಳ ಕೊಟ್ಟಿಗೆಯಲ್ಲಿ ಸಿಂಪಡಿಸುತ್ತಾರೆ. ಜೊತೆಗೆ ಸುಟ್ಟ ಮೀನಿನ ಪುಡಿಯನ್ನು ಕೂಡಾ ಕೊಟ್ಟಿಗೆಯಲ್ಲಿ ಹರಡುತ್ತಾರೆ.
- "ಸುಕ್ಕುನಾರಿಫಲ" ಎಂಬ ಹುಲ್ಲು, ಹೊಂಗೆಯ ಹಿಂಡಿ, ಜುಟ್ಟಿವೆ ಬಳ್ಳಿ (*Pergulaia delmia*) ಎಲೆ, ಎಕ್ಕ (*Calotropis gigantia*)ದ ಎಲೆ, ಬೇವಿನ ಎಲೆ, ಹಾಗೂ ಗಂಧದ ಎಲೆ ಇವನ್ನೆಲ್ಲಾ ಒಟ್ಟಾಗಿ ಅರೆದು ಪುಡಿಮಾಡಿ ನೀರಿನೊಂದಿಗೆ ಬೆರೆಸಿ ದೊರೆಯುವ ಮಿಶ್ರಣವನ್ನು ಕುಡಿಸುವುದು ಹಾಗೂ ಅದೇ ಮಿಶ್ರಣವನ್ನು ಲೇಪಿಸುವುದು.
- ಹಳೆ ಹುಣಸೆಹಣ್ಣನ್ನು ಎಳ್ಳೆಣ್ಣೆ ಯೊಂದಿಗೆ ಬೆರೆಸಿ, ದೊರೆಯುವ ಪೇಸ್ಟಿನಂತಹ ಮಿಶ್ರಣವನ್ನು ಬಾಯಿಗೆ ಹಚ್ಚುವುದು.

(ಮೂಲ : ಹನಿಬೀ : ಸಂಚಿಕೆ 5, ಪ್ರತಿ 2, 1994.)

ನೊರೇಗೆಣಸು, ನೀವೇ ಗೆಣಸು, ಬೆಲ್ಲರೆ ಗೆಣಸು ಹೀಗೆ ಹತ್ತಾರು ವಿಧದ ಗೆಣಸಿಗೆ ಹುಡುಕಾಟ ಒಂದೆಡೆಯಾದರೆ, ತುಡುವೆ ಜೇನು, ಹೆಜ್ಜೇನು, ಕಡ್ಡಿ ಜೇನು, ಕೋಲು ಜೇನು, ನೆಸರು ಜೇನು ಹೀಗೆ ವಿಧ ವಿಧ ಜೇನುಗಳು ಎದುರಾಗುವುದು ಇನ್ನೊಂದೆಡೆ. ಹೀಗೆ ಆರಿಸಿದ ಜೇನನ್ನು ಸುಳಿ, ಬೆಂಡೆ, ಎಲೆಗಳ ಕೊಟ್ಟೆಯಲ್ಲಿ ಕೂಡಿಟ್ಟು, ಗೆಣಸನ್ನು ಒಂದು ಹಳ್ಳದ ಸಮೀಪ ಬೆಂಕಿಹಾಕಿ ಸುಟ್ಟು, ಗೆಣಸು, ಜೇನು ಸೇರಿಸಿ ತೃಪ್ತಿಯಾಗುವಷ್ಟು ತಿನ್ನುವುದು. ನಂತರ ಹೊಗೆಸೊಪ್ಪನ್ನು 'ನೇರೇ' ಬಾಳೆ, ದಂಟಿನ ಎಲೆಗಳಲ್ಲಿ ಸೇರಿಸಿ, ಕೃತಕವಾಗಿ ಬೀಡಿ ತಯಾರಿಸಿ ಸೇದಿದಾಗ ಅಂದಿನ ಆ ಸೋಲಿಗರ ದಿನಚರಿ ಪರಿಪೂರ್ಣವಾದಂತೆ.

ಈ ರೀತಿ ಸಂಗ್ರಹಿಸಿದ, ಗೆಣಸು, ಜೇನನ್ನೂ ಸಹ ತಮ್ಮ ಪೋಡುಗಳಿಗೆ ತಂದು ಹಂಚಿಕೊಂಡು ತಿನ್ನುವ ಅಥವಾ ನೆಂಟರನ್ನು ಕರೆದು ಸಂಗ್ರಹಿಸಿದ ಗೆಣಸು, ಜೇನನ್ನು ಅವರಿಗೆ ಕೊಡುವ ಸಂಪ್ರದಾಯವನ್ನು ಸೋಲಿಗರು ಪಾಲಿಸಿಕೊಂಡು ಬರುತ್ತಿರುವರು.

ಸಿದ್ದಿ ಬುಡಕಟ್ಟಿನ ಸುಸ್ಥಿರ ಕೃಷಿ ಪದ್ಧತಿಗಳು

ಟಿ.ಎನ್. ಪ್ರಕಾಶ್, ವಿ.ಕೆ.ಅರುಣಕುಮಾರ್ ಮತ್ತು ಆನಂದ್ ಎ.ಎಸ್.

ಉತ್ತರ ಕನ್ನಡದ ಅಂಕೋಲ, ಹಳಿಯಾಳ, ಯಲ್ಲಾಪುರ ಮತ್ತು ಮುಂಡಗೋಡು ತಾಲ್ಲೂಕುಗಳ ದಟ್ಟ ಅರಣ್ಯಗಳಲ್ಲಿ ಆಫ್ರಿಕಾದ ನೀಗ್ರೋ ಜನಾಂಗಕ್ಕೆ ಸೇರಿದವರು ಎನ್ನಲಾದ ಸಿದ್ದಿ ಜನಗಳು ವಾಸಿಸುತ್ತಿರುವರು. ಜನ ಸಂಖ್ಯೆಯಲ್ಲಿ ಸುಮಾರು 15-20 ಸಾವಿರ ಜನಸಂಖ್ಯೆಯಿದ್ದು, ಇವರು ಹಿಂದು, ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರ ಧರ್ಮಗಳಿಗೆ ಸೇರಿರುವುದು ಒಂದು ವಿಶೇಷ. ಹಿಂದೂ ಧರ್ಮಕ್ಕೆ ಸೇರಿರುವ ಸಿದ್ದಿಗಳಲ್ಲಿ ಬಹುಪಾಲು ಸ್ಥಳೀಯ ಹವ್ಯಕರ ಆಚಾರ, ವಿಚಾರ ನಡೆ ನುಡಿಗಳನ್ನು ಅನುಸರಿಸುತ್ತಿದ್ದು ಅದರಲ್ಲಿ ಸುಮಾರು ಕಾಲುಭಾಗ ಅರಣ್ಯಭೂಮಿಯನ್ನು ಅತಿಕ್ರಮಿಸಿ ಕೃಷಿಮಾಡುತ್ತಿರುವರು. ಕೃಷಿಯ ಮೇಲೆ ತೀವ್ರ ಆಸಕ್ತಿ ಬೆಳೆಸಿಕೊಂಡಿರುವ ಈ ಸಿದ್ದಿ ರೈತರು, ತಾವು ಅತಿಕ್ರಮ ಮಾಡಿರುವ ಭೂಮಿಯನ್ನು ಸಕ್ರಮಗೊಳಿಸಿಕೊಳ್ಳಲು ನಿರಂತರ ಹೋರಾಟ ಮುಂದುವರಿಸಿರುವರು. ಅವರು ಅನುಸರಿಸುತ್ತಿರುವ ಕೃಷಿ ಪದ್ಧತಿಯಲ್ಲಿ ಸುಸ್ಥಿರಬೇಸಾಯದ ಹಲವು ಅಂಶಗಳು ಅಡಕವಾಗಿರುತ್ತವೆ. ಭತ್ತ ಮುಖ್ಯ ಬೆಳೆಯಾಗಿದ್ದು ಕೆಲ ಸಿದ್ದಿಗಳು ಈಗೀಗ ಅಡಿಕೆಯನ್ನೂ ಬೆಳೆಯಲು ಶುರುಮಾಡಿರುವರು. ಭತ್ತದ ಬೇಸಾಯದಲ್ಲಿ ಅವರು ಅನುಸರಿಸುತ್ತಿರುವ ಆಚಾರ, ನಂಬಿಕೆ, ತಳಿ, ಕ್ರಮಗಳ ವಿವರ ಮುಂದೆ ಕೊಡಲಾಗಿದೆ.

ಮಳೆಯ ಮುನ್ಸೂಚನೆ : ಕಪ್ಪೆಗಳ ಸತತ ಕಿರುಚುವಿಕೆ, ಮಳೆ ಹುಳು (Winged Termite)ಗಳ ಸತತ ಹಾರಾಟ, ಮರ ಏರಿ ಇಳಿಯುವ ಮಿಂಚು ಹುಳ (Fire flies)ಗಳ ವರ್ತನೆ ಮತ್ತು ಸುತ್ತ ಮುತ್ತ ದಟ್ಟವಾಗಿ ಕಾಡು ಮಲ್ಲಿಗೆ ಅರಳುವುದು, ಇವೇ ಮುಂತಾದ ಪ್ರಾಕೃತಿಕ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿದ ಸಿದ್ದಿಗಳು, ಮಳೆಯ ಮುನ್ಸೂಚನೆಯನ್ನು ನಿಖರವಾಗಿ ಅರಿಯಲು ಶಕ್ತರಾಗಿರುತ್ತಾರೆ. ತಕ್ಷಣ ಅವರು ಭತ್ತದ ಬೇಸಾಯಕ್ಕೆ ಭೂಮಿ ಹದಮಾಡಲು ತೊಡಗುತ್ತಾರೆ.

ಭೂಮಿ ಹದಮಾಡುವುದು : ಭೂಮಿಯನ್ನು ಉಳುಮೆ ಮಾಡಲು ಎರಡು ನಾಟಿ ತಳಿಗಳ ಮರದಿಂದ ತಯಾರಿಸಿದ ನೇಗಿಲುಗಳನ್ನು ಒಂದಾದ ಮೇಲೊಂದರಂತೆ ಬಳಸಲಾಗುವುದು. ಮೊದಲು ಕವಲು *(Careya arborea)* ನಂತರ ಕಾಸರಕ *(Styxnas nuxvomica)* ಮರದ ನೇಗಿಲನ್ನು ಸಿದ್ದಿ ರೈತರು ಉಪಯೋಗಿಸುತ್ತಾರೆ. ಕವಲು ಮರದಲ್ಲಿ ಚೊಗರಿನ ಅಂಶ ಹೆಚ್ಚಾಗಿದ್ದು, ಇದರಿಂದ ಉಳುಮೆ ಮಾಡಿದಲ್ಲಿ ಭೂಮಿಯ ಫಲವತ್ತತೆ ಹೆಚ್ಚಾಗುವುದಂತೆ. ಹಾಗೇ ಕಾಸರಕದ ತೊಗಟೆಯಲ್ಲಿ ಕಹಿ ಹೆಚ್ಚಾಗಿದ್ದು, ಇದರಿಂದ ಉಳುಮೆ ಮಾಡಿದರೆ ಕ್ರಿಮಿ ಕೀಟಗಳು ದೂರವಾಗುವುದನ್ನು ಸಿದ್ದಿಗಳು ಕಂಡುಕೊಂಡಿರುವರು.

ತಳಿ ವೈವಿಧ್ಯತೆ : ಸಿದ್ದಿಗಳು ಹಲವು ವರ್ಷಗಳಿಂದ ವಿವಿಧ ಭತ್ತದ ತಳಿಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದರು. ಹೊನ್ನೆಕಟ್ಟೆ, ಒಮ್ಮದ್ದು, ಶೇಪ್‌ಕಾರ್. ಕಾರಭತ್ತ, ರತ್ನಚೂಡಿ, ಹಲಗ, ಸುಂಕನಾಳ, ಇವೇ ಮೊದಲಾದ ನಾಟಿ ತಳಿಗಳು ರುಚಿ, ರೋಗ ನಿರೋಧಕತೆ, ಅಧಿಕ ಇಳುವರಿಹುಲ್ಲು, ಬಾಗದಿರುವಿಕೆ ಇತ್ಯಾದಿ ಗುಣಗಳನ್ನು ಪಡೆದಿದ್ದವು. ಆದರೆ, ಇತ್ತೀಚೆಗಿನ ದಿನಗಳಲ್ಲಿ ಹೊಸ ತಳಿಗಳ ಆಕ್ರಮಣದ ಪರಿಣಾಮವಾಗಿ ಈ ನಾಟಿತಳಿಗಳು ನಿಧಾನವಾಗಿ ಮಾಯವಾಗುವಂತಾಗಿದೆ. ಆದರೆ ಸಿದ್ದಿರೈತರು ಒಂದೇ ತಳಿಯನ್ನು ಒಂದು ಭೂಮಿಯಲ್ಲಿ ಸತತವಾಗಿ ಬೆಳೆಸದಂತೆ ನೋಡಿಕೊಳ್ಳುವರು. ಇದರಿಂದ ಇಳುವರಿ ಅಧಿಕವಾಗುತ್ತದೆ ಮತ್ತು ರೋಗರುಜಿನಗಳ ಹಾವಳಿ ಕಡಿಮೆಯಾಗುತ್ತದೆ ಎಂದು ನಂಬಿರುವರು. ಜೊತೆಗೆ, ಒಂದುಸಾರಿ, ಒಂದೇ ತಳಿ ಬತ್ತವನ್ನು ಬಳಸದೇ, ಹಲವು ತಳಿಗಳನ್ನು ಅವುಗಳ ಅವಧಿ ಮತ್ತು ವಿವಿಧ ಮಟ್ಟದಲ್ಲಿ ನೀರಿನ ಪೂರೈಕೆಗೆ ಅನುಗುಣವಾಗಿ ಬೇಸಾಯ ಮಾಡುವುದು ಮತ್ತೊಂದು ವೈಶಿಷ್ಟ್ಯ. ಉದಾಹರಣೆಗೆ, ಉತ್ತರದ ಮಕ್ಕಿ ಗದ್ದೆಯಲ್ಲಿ ಬೇಸಿಗೆ ತಿಂಗಳುಗಳಲ್ಲಿ ನೀರಿನ ಅಭಾವ ಸರ್ವೆ ಸಾಮಾನ್ಯ. ಅಂತಹ ಸ್ಥಳಗಳಲ್ಲಿ ಕಡಿಮೆ ಅವಧಿಯ 90-120 ದಿನಗಳಲ್ಲಿ ಕಟಾವಿಗೆ ಬರುವ ಮದ್ರಾಸ್ ಸಣ್ಣ, ತಾಯಿಚುಂಗ್‌ಗಳಂತಹ ತಳಿಗಳನ್ನು ಸಿದ್ದಿ ರೈತರು ಆಯ್ಕೆಮಾಡುತ್ತಾರೆ. ಅದೇ ತಗ್ಗಿನ ಗದ್ದೆಗಳಲ್ಲಿ ನೀರಿನ ಪೂರೈಕೆ ಬಹುಕಾಲವಿರುವುದರಿಂದ ಅಲ್ಲಿ ಧೀರ್ಘಾವಧಿಯ ಅಂದರೆ 140-150 ದಿನಗಳ ಆಲೂರ್ ಸಣ್ಣಗಳಂತಹ ತಳಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಈ ರೀತಿಯ ತಳಿ ವೈವಿಧ್ಯದಿಂದ ಬೆಳೆಗೆ ನೀರಿನ ಕೊರತೆಯನ್ನು ಸಿದ್ದಿ ರೈತರು ಯಶಸ್ವಿಯಾಗಿ ಎದುರಿಸುವಂತಾಗಿರುತ್ತಾರೆ. ಜೊತೆಗೆ ಒಂದು ಪ್ರದೇಶದಲ್ಲಿನ ಎಲ್ಲಾ ರೈತರೂ, ವಿವಿಧ ತಳಿಗಳು ಒಮ್ಮೆಗೇ ಕೊಯಿಲಿಗೆ ಬರುವಂತೆ ಸಾಮೂಹಿಕ ತೀರ್ಮಾನ ತೆಗೆದುಕೊಳ್ಳುತ್ತಾರೆ, ಇಲ್ಲದಿದ್ದಲ್ಲಿ ಬೆಳೆ ಹಕ್ಕಿ, ಕಾಡುಹಂದಿಗಳ ದಾಳಿಗೆ ನಿರಂತರ ಗುರಿಯಾಗುವಂತಾಗುತ್ತದೆ.

ಭತ್ತದ ಬೀಜವನ್ನು ಬಿತ್ತನೆಗೆ ಮುನ್ನ ಒಂದು ದಿನ ನೆನಸಿಟ್ಟು, ನಂತರ ಹುಲ್ಲಿನ ಮೂಟೆ ಮಾಡಿ ಅದರೊಳಗೆ ಗಟ್ಟಿಯಾಗಿ ನಾಲ್ಕುದಿನಗಳ ಕಾಲ ಕಟ್ಟಿಡುವರು. ಆಗ ಶಾಖ ಚೆನ್ನಾಗಿ ಏರ್ಪಾಡಾಗಿ, ಬೀಜ ಮೊಳಕೆಯೊಡೆಯಲು ಸಹಕಾರಿಯಾಗುವುದು. ಸಸಿಗೆ ಒಂದೂವರೆ ತಿಂಗಳಾದಾಗ ವೃತ್ತಾಕಾರದಲ್ಲಿ ಸಸಿಯನ್ನು ನಾಟಿ ಮಾಡುವುದು. ಒಂದು ಪಕ್ಷದಲ್ಲಿ (ಕೃಷ್ಣ ಅಥವಾ ಶುಕ್ಲ) ಹಾಕಿದ ಬೀಜದ ಸಸಿಯನ್ನು ಮತ್ತೊಂದು ಪಕ್ಷದಲ್ಲಿ ನಾಟಿ ಮಾಡುವುದನ್ನು ಸಿದ್ದಿಗಳು "ದಾಟು" ಬೀಜ ಎನ್ನುತ್ತಾರೆ. ಇದರಿಂದ ಇಳುವರಿ ಕಡಿಮೆ ಆಗುತ್ತದೆ ಎಂಬುದು ಸಿದ್ದಿಗಳ ನಂಬಿಕೆ. ಹಾಗೇ ಅಮಾವಾಸ್ಯೆಗಿಂತ ಮೊದಲು ನಾಟಿ ಮಾಡಬೇಕೆನ್ನುವುದು, ಮಂಗಳವಾರ ಮತ್ತು ಶುಕ್ರವಾರ ಭತ್ತದ ನಾಟಿಗೆ ಅತ್ಯಂತ ಪ್ರಶಸ್ತ ದಿನಗಳೆಂದು ಸಿದ್ದಿಗಳು ನಂಬಿರುವರು.

ಗೊಬ್ಬರ : ಸಿದ್ದಿಗಳು ದನದ ಸಗಣಿಯ ಜೊತೆಗೆ ಮತ್ತಿ *(Terminalia tomentosa)*, ಹೊನಗಲು *(Tephrosia paniculacto)*, ಕಾಸರಕ ಮತ್ತು ಕವಲು ಮರಗಳ ಎಲೆಯನ್ನು ವಿಶೇಷವಾಗಿ ಬೆರೆಸಿ ಕಾಂಪೋಸ್ಟ್ ಗೊಬ್ಬರ ತಯಾರಿಸುತ್ತಾರೆ. ಕೆಲವೊಮ್ಮೆ ದನದ ಸಗಣಿಯನ್ನು ನೇರವಾಗಿ ಹರಿಯುವ ನೀರಿಗೆ ಬೆರೆಸಿ ಭತ್ತದ ಗದ್ದೆಗೆ ಹಾಯಿಸುತ್ತಾರೆ. ಸಸಿ ಅತಿ ಮಳೆಯ ಸಮಯದಲ್ಲಿ ಬಾಗುವುದನ್ನು ತಡೆಯಲು ತೆನೆ ಒಡೆಯುವ ಕೆಲ ದಿನಗಳ ಮೊದಲು ಅದರ ಚಿಗುರು ಭಾಗವನ್ನು ಕತ್ತರಿಸುತ್ತಾರೆ.

ಸಸ್ಯ ಸಂರಕ್ಷಣೆ : ಸಿದ್ದಿಗಳು ಈ ಹಿಂದೆ ಬಳಸುತ್ತಿದ್ದ ಒಮ್ಮದ್ದು, ಶೇವಖಾರ್ ತಳಿಗಳು ಸ್ವಾಭಾವಿಕವಾದ ರೋಗ, ರುಜಿನಗಳನ್ನು ಎದುರಿಸುವ ಶಕ್ತಿ ಹೊಂದಿದ್ದವು. ಅವುಗಳ "ಬೀಜ ಕವಚ" (Sead Coat) ಗಡುಸಾಗಿದ್ದು, ರಸಹೀರುವ ಕ್ರಿಮಿಕೀಟಗಳಿಂದ ರಕ್ಷಣೆ ಪಡೆದಿದ್ದವು. ಆದರೆ ಅಂತಹ ತಳಿಗಳ ಬಳಕೆ ಕ್ರಮೇಣ ಕಡಿಮೆಯಾಗುತ್ತಿರುವುದರಿಂದ ಹೊಸ ತಳಿಗಳಿಗೆ ರೋಗ ಪೀಡೆಗಳು ಬರುವುದು ಶುರುವಾಗಿದೆ. ಅವುಗಳ ನಿಯಂತ್ರಣಕ್ಕೆ ಸಿದ್ದಿಗಳು ಕಂಡುಕೊಂಡಿರುವ ಕ್ರಮಗಳು ಅವರ ಶೋಧಕ ಪ್ರವೃತ್ತಿಗೆ ಸಾಕ್ಷಿಯಾಗಿದೆ.

1. ಬೈನೆ ಹಡೆ *(Caryota urens)* ಟೊಂಗೆಯನ್ನು ಎರಡೂ ಕೈಯಲ್ಲಿ ಹಿಡಿದುಕೊಂಡು ಭತ್ತದ ಪೈರಿನ ಗದ್ದೆಯಲ್ಲಿ ಅದಕ್ಕೆ ಸವರುತ್ತಾ ಓಡಾಡುವುದರಿಂದ ಎಲೆಸುರುಳಿ ಸುತ್ತುವ ಹುಳುಗಳು ನೀರಿನಲ್ಲಿ ಬಿದ್ದು ಸಾಯುವುದನ್ನು ಸಿದ್ದಿಗಳು ಕಂಡುಕೊಂಡಿರುವರು.
2. ಬೇರೆ ಕ್ರಿಮಿಕೀಟಗಳನ್ನು ಭತ್ತದ ಗದ್ದೆಯಿಂದ ಓಡಿಸಲು ಕಕ್ಕೆ *(Casia fistula)* ಅಥವಾ ಹೊಂಗೆ *(Pongamia pinnata)* ಮರದ ಎಲೆಗಳನ್ನು ಚೆನ್ನಾಗಿ ಜಜ್ಜಿ ಅದರ ರಸ ಹೊರಬರುವಂತೆ ಮಾಡಿ, ಮೇಲಿನ ಗದ್ದೆಯಿಂದ ನೀರು ಹರಿಯುವ ಜಾಗದಲ್ಲಿ ಇಡಲಾಗುತ್ತದೆ. ಇವುಗಳ ರಸ ನೀರಿಗೆ ಸೇರಿ, ಹೊಲದೊಳಗೆಲ್ಲಾ ಹರಿದು, ಭತ್ತಕ್ಕೆ ಬೀಳುವ ಕ್ರಿಮಿಕೀಟಗಳು ದೂರಸರಿಯು ವಂತಾಗುತ್ತದೆ.
3. ದೀಪಾವಳಿ ಸಮಯಕ್ಕೆ ಭತ್ತ ತೆನೆ ಒಡೆಯುವಂತಿದ್ದರೆ ಅದಕ್ಕೆ ಕಾಳಿನ ರಸ ಹೀರುವ ಕ್ರಿಮಿಗಳು ಬೀಳುವುದು ಸಹಜ. ಬಲಿಪಾಡ್ಯಮಿಯ ದಿನ ಬಿದಿರಿನ ಕಡ್ಡಿಗಳಿಗೆ ಎಣ್ಣೆ ಬಟ್ಟೆ ಹಾಕಿ ಬೆಂಕಿ ಹಚ್ಚಿ ಹೊಲದೊಳಗೆಲ್ಲಾ ನೆಡುವ ಆಚರಣೆ ಮೂಲಕ, ಈ ಕಾಳು ಹೀರುವ ಹುಳುಗಳನ್ನು ಬೆಂಕಿಯಲ್ಲಿ ಬೀಳಿಸಿ, ಸಾಯಿಸುವ ಕ್ರಮವನ್ನು ಸಿದ್ದಿ ರೈತರು ಕಂಡುಕೊಂಡಿರುವರೆಂದರೆ ಆಶ್ಚರ್ಯ ವಾಗುವುದಿಲ್ಲವೇ ? (ಇದೇ ರೀತಿಯ ಪದ್ಧತಿ ಮಲೆನಾಡಿನ ಹಾಗೂ ಕರಾವಳಿಯ ಕೆಲವೆಡೆಗಳಲ್ಲೂ ಬಳಕೆಯಲ್ಲಿದೆ.)
4. ಅದೇ ರೀತಿ ಭತ್ತಕ್ಕೆ ಸಾಮಾನ್ಯವಾಗಿ ಎಲ್ಲಾ ಹಂತದಲ್ಲೂ ಬೀಳುವ ಬೆಂಕಿ ರೋಗ ಅಥವಾ ಕೆಂಪುಕೊಳೆ *(Pyriularia oryze)* ರೋಗಕ್ಕೆ ಕವಲು ಮರದ ತೊಗಟೆಯನ್ನು ಜಜ್ಜಿ, ಅದರ ರಸವನ್ನು ಭತ್ತದ ಗದ್ದೆಯಲ್ಲಿ ಹರಿಯ ಬಿಡುವ ಮೂಲಕ ಶಮನ ಕಂಡುಕೊಂಡಿರುವರು.
5. ಇನ್ನು ಭತ್ತದ ಹೊಲಕ್ಕೆ ಬರುವ ಹಕ್ಕಿಗಳನ್ನು ಬಳಸುವ ಮತ್ತು ನಿಯಂತ್ರಿಸುವ ಸಿದ್ದಿಗಳ ಜಾಣ್ಮೆಗೆ ಸರಿಸಮಾನ ಇಲ್ಲದಂತಾಗಿದೆ. ತೆನೆಕಟ್ಟುವ ಮೊದಲು ಈ ಹಕ್ಕಿಗಳು ಬತ್ತದ ಹೊಲಕ್ಕೆ ಬೀಳುವ ಕ್ರಿಮಿಕೀಟಗಳನ್ನು ತಿಂದು ಸಹಕರಿಸುವಂತೆ ಮಾಡಲು T ಆಕಾರದ ಮರದ ಟೊಂಗೆಗಳನ್ನು ಅಲ್ಲಲ್ಲಿ ನಿಲ್ಲಿಸಲಾಗುತ್ತದೆ. ಇದರ ಮೇಲೆ ಬಂದು ಕೂರುವ ಹಕ್ಕಿಗಳು ಆಕಡೆ ಈಕಡೆ ಕಣ್ಣು ಹಾಯಿಸಿ, ಅದಕ್ಕೆ ಗೋಚರಿಸುವ ಕ್ರಿಮಿಕೀಟಗಳನ್ನು ತಿಂದು ಮುಗಿಸುತ್ತವೆ.

   ಆದರೆ ತೆನೆ ಒಡೆಯುವ ಸಮಯಕ್ಕೆ ಇದೇ ಹಕ್ಕಿಗಳು ಅದನ್ನು ತಿನ್ನುವುದರಿಂದ ಶತ್ರುಗಳಾಗುತ್ತವೆ. ಆಗ ಒಂದೋ ಆ T ಕವಲುಗಳನ್ನು ತೆಗೆಯಲಾಗುತ್ತದೆ. ಇಲ್ಲವೇ ಆ T ಕವಲುಗಳ ಮೇಲೆ ಹಕ್ಕಿಗಳು ಕೂರುವ ಜಾಗದಲ್ಲಿ ಗಟ್ಟಿಯಾದ ಮೇಣವನ್ನು ಹಾಕಿ, ಅವುಗಳನ್ನು ಹಿಡಿದು ಸಿದ್ದಿಗಳು ಆಹಾರವಾಗಿ ಉಪಯೋಗಿಸುತ್ತಾರೆ.

ಧಾನ್ಯ ಸಂರಕ್ಷಣೆ : ಭತ್ತ ಶೇಖರಿಸಿಟ್ಟಾಗ ಅವುಗಳಿಗೆ ಬೀಳುವ ಕ್ರಿಮಿಕೀಟಗಳ ಹಾವಳಿ ತಡೆಯಲು ಸಿದ್ದಿಗಳು ಸರಳ ಉಪಾಯ ಕಂಡುಕೊಂಡಿರುವರು. ಭತ್ತ ಅಥವಾ ಅಕ್ಕಿ ಚೀಲದೊಳಗೆ ಒಣಗಿದ ಬೇವಿನ ಎಲೆ ಅಥವಾ ಕಾಳುಮೆಣಸು ತೆಗೆದನಂತರ ಉಳಿಯುವ ತೆನೆಯ ಭಾಗವನ್ನು ಸೇರಿಸಿಡುತ್ತಾರೆ. ಇವುಗಳ ಘಾಟು ವಾಸನೆಯಿಂದ ಕ್ರಿಮಿಕೀಟಗಳು ದೂರವಾಗುವುದು ಸಿದ್ದಿಗಳ ಅನುಭವ.

ಅರಿಶಿನದ ಮೇಲಿನ ಹಕ್ಕು ಅಮೇರಿಕಾದ ಪಾಲಿಗೆ

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಗಾಯವನ್ನು ಗುಣಪಡಿಸುವ ಔಷಧವಾಗಿ ಜನರು ಬಳಸುತ್ತಿದ್ದ ಅರಿಶಿನವನ್ನು ನೋವು ನಿವಾರಕ ಔಷಧ ಎಂದು ತಾನು ಪತ್ತೆ ಹಚ್ಚಿದ್ದಾಗಿ ಹೇಳಿಕೊಂಡಿರುವ ಅಮೇರಿಕದ ಮಿಸಿಸಿಪ್ಪಿ ವಿಶ್ವವಿದ್ಯಾನಿಲಯಕ್ಕೆ ಅರಿಶಿನದ ಮೇಲಿನ ಪೇಟೆಂಟ್ ನೀಡಲಾಗಿದೆ.

ಯಾವುದೇ ಗಾಯವಾದ ತಕ್ಷಣ ಅರಿಶಿನ ಸವರಿದರೆ ಅಥವಾ ಅರಿಶಿನವನ್ನು ಸೇವಿಸಿದರೆ ಗಾಯ ಶೀಘ್ರವಾಗಿ ಗುಣವಾಗುವುದು ಎಂದು ತಾನು ಸಂಶೋಧಿಸಿದ್ದಾಗಿ ಹೇಳಿಕೊಂಡಿರುವ ವಿಶ್ವವಿದ್ಯಾನಿಲಯ ಇದರ ಮೇಲೆ ಪೇಟೆಂಟ್ ಪಡೆಯುವಲ್ಲಿ ಯಶಸ್ವಿಯಾಗಿದೆ. ಇದರಿಂದ ಅರಿಶಿನವನ್ನು ಕ್ಯಾನ್ಸರ್ ನಿರೋಧಕವಾಗಿ ಹಾಗೂ ಬ್ಯಾಕ್ಟೀರಿಯಾ ನಿರೋಧಕವಾಗಿ ಬಳಸುವ ಕುರಿತು ಭಾರತೀಯ ವಿಜ್ಞಾನಿಗಳು ನಡೆಸುತ್ತಿರುವ ಸಂಶೋಧನೆಗಳನ್ನು ತಕ್ಷಣ ನಿಲ್ಲಿಸಬೇಕಾಗುತ್ತದೆ. ಅನಾದಿಕಾಲದಿಂದ ಭಾರತದಲ್ಲಿ, ಆಯುರ್ವೇದ ವೈದ್ಯಕೀಯ ಪದ್ಧತಿಯಲ್ಲಿ ಬಳಕೆಯಲ್ಲಿರುವ ಅರಿಶಿನಕ್ಕೆ ಅಮೇರಿಕ ಪೇಟೆಂಟ್ ನೀಡಿರುವುದನ್ನು ಪ್ರಶ್ನಿಸುವುದಾಗಿ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (CSIR) ಹೇಳಿಕೊಂಡಿದೆ. ಈ ನಿಟ್ಟಿನಲ್ಲಿ ನಮ್ಮ ದೇಶೀಯ ಜ್ಞಾನ ಮತ್ತು ತಂತ್ರಜ್ಞಾನ ವ್ಯವಸ್ಥೆಯನ್ನು ದಾಖಲಿಸುವ ನಮ್ಮ ಹಿತ್ತಲಗಿಡದಂತಹ ಪ್ರಯತ್ನ, ಇದನ್ನು ಕೊಳ್ಳೆಹೊಡೆಯುವವರ ವಿರುದ್ಧದ ಹೋರಾಟಕ್ಕೆ ಸಹಕಾರಿಯಾಗಬಹುದಲ್ಲವೆ?

ತೇಜಸ್ವಿನಿ ಶರ್ಮ

ಹಿತ್ತಲಗಿಡಕ್ಕೆ ಮಾಹಿತಿ

ಹಿತ್ತಲಗಿಡಕ್ಕೆ ಸೂಕ್ತ ಎನಿಸಿದ ವ್ಯಕ್ತಿ, ವಿಚಾರ ಮತ್ತು ಸಂಸ್ಥೆಗಳ ಬಗ್ಗೆ ಮಾಹಿತಿ ನೀಡಿ ವಿವರವಾಗಿ ದಾಖಲಿಸಲು ಸಹಕರಿಸಿ. ಉತ್ತಮ ಮಾಹಿತಿ ನೀಡಿದವರಿಗೆ ಇಕ್ರಾ ಸಂಸ್ಥೆಯ ಪುಸ್ತಕಗಳ ಬಹುಮಾನ ನೀಡಲಾಗುವುದು.

ಸಂ.

ಬೀಜ ಮೊಳಕೆ ಬರಿಸುವುದು

ಸಂಗ್ರಹ : ಅರುಣಕುಮಾರ್ ಮತ್ತು ಆನಂದ್

- ಕಲ್ಲಂಗಡಿ ಹಣ್ಣಿನ ಬೀಜಗಳನ್ನು ಕುಂಕುಮ ಕದಡಿದ ನೀರಿನಲ್ಲಿ ಒಂದು ರಾತ್ರಿ ನೆನಸಿ ನಂತರ ಬಿತ್ತನೆ ಮಾಡಿದರೆ ಚೆನ್ನಾಗಿ ಮೊಳಕೆ ಬರುವುದರ ಜೊತೆಗೆ ಆರೋಗ್ಯ ವೃದ್ಧಿಸುತ್ತದೆ.

ಪ್ರಭಾಕರ್, ಗೆಣಸಿನ ಕುಣಿ, ಸಾಗರ

- ಕಲ್ಲಂಗಡಿ ಹಣ್ಣಿನ ಬೀಜಗಳನ್ನು ಆಕಳ ಹಾಲಿನಲ್ಲಿ ಒಂದು ರಾತ್ರಿ ನೆನಸಿ ನಂತರ ಬಿತ್ತನೆ ಮಾಡಿದರೆ ಚೆನ್ನಾಗಿ ಮೊಳಕೆ ಬರುವುದರ ಜೊತೆಗೆ ಆರೋಗ್ಯವಾಗಿ ಗಿಡ ಬೆಳೆಯುತ್ತದೆ.

ಸೇನಾಪತಿ ಗೌಡರು, ಗೆಣಸಿನ ಕುಣಿ, ಸಾಗರ

- ಹಾಗಲ ಗಿಡ ಬೇಗ ಮೊಳಕೆಯಾಗಲು ಒಂದು ರಾತ್ರಿ ಹಾಲಿನಲ್ಲಿ ನೆನಸಿ ಮರುದಿನ ಬಿತ್ತನೆ ಮಾಡಬೇಕು

ನರಸಿಂಹ ಮೂರ್ತಿ, ಆಶೀಸರ, ಶಿರಸಿ

- ರಾಗಿಯನ್ನು ಅಗೆ ಅಥವಾ ಮಡಿಯಲ್ಲಿ (Nursery) ಬೆಳೆಸುವಾಗ ಒಣ ಸಗಣಿಯನ್ನು ನೆಲದ ಮೇಲೆ ಹರಡಿ, ಸುಟ್ಟು ನಂತರ ಬರುವ ಮಳೆಯಲ್ಲಿ ಬೀಜವನ್ನು ಬಿತ್ತನೆ ಮಾಡುವುದರಿಂದ ರೋಗರಹಿತ ಬೆಳೆ ತೆಗೆಯಬಹುದು

ಗೋದು ಮುಂದು ಲಾಂಭೂರ್, ಗೌಳಿವಾಡ, ಚಿಪಗೇರಿ, ಉತ್ತರ ಕನ್ನಡ

- ನಿಧಾನವಾಗಿ ಮೊಳಕೆಯೊಡೆಯುವ ಮೂಲಂಗಿ, ಬೀಟ್‌ರೂಟ್ ನಂತಹ ಬೀಜಗಳನ್ನು ಬಟ್ಟೆಯಲ್ಲಿ ಬಿಗಿಯಾಗಿ ಸುತ್ತಿ ನೀರಿನಲ್ಲಿ ಒಮ್ಮೆ ನೆನಸಿ ನಂತರ ಆ ಬಟ್ಟೆಯ ಗಂಟನ್ನು ನೆಲದಲ್ಲಿ ಹುದುಗಿಸಿಟ್ಟು, ಆಗಾಗ ನೀರನ್ನು ಚಿಮುಕಿಸುತ್ತಿದ್ದರೆ, ಭೂಮಿಯ ಶಾಖಕ್ಕೆ ಮೊಳಕೆ ಬರದವೂ ಕೂಡ ಮೊಳಕೆ ಬರುತ್ತವೆ.

ಸುಬ್ರಾಯ ತಿಮ್ಮಣ್ಣ ಭಟ್, ತಾರಸರ, ಯಲ್ಲಾಪುರ

- ತಿಂಗಳ ಅವರೆ ಮತ್ತು ಮನೆ ಅವರೆ ಬೀಜಗಳನ್ನು ಹಾಲಿನಲ್ಲಿ ನೆನಸಿಟ್ಟು ಮರುದಿನ ಬಿತ್ತಿದರೆ ಮೊಳಕೆ ಬೇಗ ಬಂದು ಬೆಳವಣಿಗೆ ಚುರುಕಾಗುತ್ತದೆ.

ಟಿ.ಎಸ್. ಹೆಗಡೆ, ಹಿತ್ತಲಹಳ್ಳಿ

ಬಿತ್ತನೆಯ ಬೀಜಕ್ಕೆ ತಾಯಿ ಮರದ ಆಯ್ಕೆ :

ಶಿವನಂಜಯ್ಯನವರ ಸಲಹೆಗಳು

ಉತ್ತಮ ಬೆಳೆಗೆ ಉತ್ತಮ ಬೀಜದ ಆಯ್ಕೆ ಪ್ರಥಮ ಹೆಜ್ಜೆ. ಈ ನಿಟ್ಟಿನಲ್ಲಿ ತುಮಕೂರಿನ ಶಿವನಂಜಯ್ಯನವರ ಸಲಹೆಗಳು ಈ ರೀತಿ ಇವೆ.

- ತಾಯಿ ಮರದ ವಯಸ್ಸು 20 ರಿಂದ 50 ವರ್ಷದೊಳಗಿರಲಿ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ತಾಯಿ ಮರ ಸಾಮೂಹಿಕ ನಿರ್ವಹಣೆಯಲ್ಲಿ ಪ್ರತಿವರ್ಷ 80-100 ಕಾಯಿ ನೀಡುವಂತಿರಬೇಕು ವರ್ಷಬಿಟ್ಟು ವರ್ಷ ಬೆಳೆ ನೀಡುವ ತಾಯಿ ಗಿಡ ಉತ್ತಮವಲ್ಲ. ಈ ಬಗೆಯ ಇಳುವರಿಯಲ್ಲಿಯ ಸಮತೋಲನವನ್ನು 20-50 ವರ್ಷ ವಯೋಮಿತಿಯಲ್ಲಿಯ ಮರಗಳಲ್ಲಿ ಮಾತ್ರ ಕಾಣಬಹುದು. ಇದರ ಹೊರತಾದ ವಯಸ್ಸಿನ ಮರಗಳಲ್ಲಿ ಇಳುವರಿ ಏರುಪೇರಿದ್ದು, ಆಯ್ಕೆ ಸರಿಯಾಗುವುದಿಲ್ಲ.
- ಬೀಜವನ್ನು ವರ್ಷದ ನವೆಂಬರ್‌ನಿಂದ ಫೆಬ್ರವರಿ ತಿಂಗಳಲ್ಲಿ ಆರಿಸಿಕೊಳ್ಳಬೇಕು. ಈ ಕಾಲದ ಆಯ್ಕೆಗೆ ಯಾವ ವೈಜ್ಞಾನಿಕ ಕಾರಣವಿಲ್ಲ. ಆದರೂ ಒಂದು ಸಹಜ ಕಾರಣವಿದೆ. ಮೇ ಯಿಂದ ಅಕ್ಟೋಬರ್‌ವರೆಗೆ ತೆಂಗಿನ ಮರದಲ್ಲಿ ಸಾಮಾನ್ಯವಾಗಿ ತುಂಬಿದ ಗೊನೆಗಳಿದ್ದು, ಅದರ ಭಾರಕ್ಕೆ ಜೋತು ಬಿದ್ದು, ಉತ್ತಮವಾದ ಬಲಿತ ಕಾಯಿ ಕೆಲವು ವೇಳೆ ಸಿಕ್ಕುವ ಸಂದರ್ಭ ಕಡಿಮೆ. ಅದೇ, ಮೇಲಿನ ತಿಂಗಳುಗಳಿದ್ದರೆ ಗೊನೆಯಲ್ಲಿ ಕಾಯಿಗಳು ಕಡಿಮೆ ಇದ್ದು ಗೊನೆ ಜಗ್ಗದೆ ಉತ್ತಮ ಕಾಯಿ ದೊರೆಯುತ್ತದೆ. ಅಂದರೆ ತಾರ್ಕಿಕವಾಗಿ ಮೇಲಿನ ಕಾಲ ಸರಿ.
- ತಾಯಿ ಮರ ಆರೋಗ್ಯವಾಗಿದ್ದು ಸಾಧಾರಣ ನಿರ್ವಹಣೆಯಲ್ಲಿ ಸುಮಾರು 30-35 ಗರಿ ಹೊಂದಿದ್ದು, ಮರದ ಕೆಳಗೆ ನಿಂತು ನೋಡಿದರೆ ನೀಲಾಕಾಶ ಕಾಣದಂತೆ ಗರಿ ಒತ್ತಾಗಿರಲಿ. ಈ ರೀತಿಯ ಮರಗಳನ್ನು ಗೂಡು ಕಟ್ಟಿದ ಮರ ಎನ್ನುತ್ತಾರೆ.
- ಗೊನೆಗಳು ತೀರಾ ದಪ್ಪವಾಗಿರದೆ ಅದರಲ್ಲಿ ಸುಮಾರು 25-30 ಕಾಯಿಗಳಿದ್ದು, ಮರದಲ್ಲಿ ಅಂತಹ 10-12 ಗೊನೆ ಇರಲಿ. ಗೊನೆಗಳು ಮರದಿಂದ ಜೋತು ಬೀಳದೆ ಅವು ಗರಿ ಮಟ್ಟೆಗಳ ಮೇಲೆ ಕುಳಿತಿರಲಿ.
- ಕಾಯಿಯ ಹೊರ ಸಿಪ್ಪೆ ಮತ್ತು ಒಳ ಚಿಪ್ಪು ತೆಳುವಾಗಿದ್ದು, ಸುಲಿದ ಕಾಯಿಯ ತೂಕ ಸುಮಾರು 700 ಗ್ರಾಂ ಗಿಂತ ಮುಂದಿರಲಿ.
- ತೋಟದ ಒಂದೇ ಬದಿಯಿಂದ ಬೀಜವನ್ನು ಆಯ್ದುಕೊಳ್ಳದೆ ತೋಟದಲ್ಲಿ ಅಡ್ಡಾದಿಡ್ಡಿ ಬೀಜ ಸಂಗ್ರಹಿಸಿ.
- ತೋಟದಲ್ಲಿ ಸಹಜವಾಗಿಯೇ ಕೆಲ ಗಿಡ್ಡ ಮತ್ತು ಎತ್ತರದ ಮರಗಳಿದ್ದು ಅಂತಹ ಮರಗಳಿಂದ ಬೀಜ ಆಯ್ಕೆ ಮಾಡಿದರೆ ಸಹಜ ಹೈಬ್ರಿಡ್ ತಳಿ ದೊರೆಯುವ ಸಾಧ್ಯತೆ ಇರುತ್ತದೆ.
- ಸಂಗ್ರಹಿಸಿದ ಬೀಜವನ್ನು ಸುಮಾರು 8-10 ದಿನ ನೆರಳಲ್ಲಿ ಮಾಗಿಸಿ, ಈಗ ಬೀಜ ನೆಡಲು ಸಿದ್ಧವಾಗಿರುತ್ತದೆ. (ನೀರು ಕಡಿಮೆಯಾಗುವ ವರೆಗೆ ಮಾಗಿಸಬಾರದು)

- ಸಸಿ ಬೆಳೆಸಲು ನೆಲದ ಆಯ್ಕೆ :

- ಹಗುರ ಮಣ್ಣಿನಿಂದ ಕೂಡಿದ ನೀರು ನಿಲ್ಲದೆ ಬಸಿದು ಹೋಗುವ ಉತ್ತಮ ಬೆಳಕು ಬೀಳುತ್ತಿರುವ ನೀರಿನ ಸೌಕರ್ಯವಿರುವ ಯಾವುದೆ ಸ್ಥಳ ಆಯ್ದುಕೊಳ್ಳಿ.
- ರೈತರು ಕಾಯನ್ನು ನಾಟಿ ಮಾಡುವಾಗ ಸಾಮಾನ್ಯವಾಗಿ ಉದ್ದ ನೆಡುತ್ತಾರೆ. (ತೊಟ್ಟು ಮೇಲಿರುವಂತೆ). ಹೀಗೆ ಮಾಡುವುದರಿಂದ ಕಾಯಿಯಲ್ಲಿರುವ ಭ್ರೂಣಕ್ಕೆ ಅದರಲ್ಲಿಯ ನೀರು ತಾಗದಂತಾಗಿ ಅದು ಮೊಳೆಯಲು ನಾವು ಹೊರಗಿನಿಂದ ಹಾಕುವ ನೀರನ್ನೇ ಅವಲಂಬಿಸ ಬೇಕಾಗುತ್ತದೆ. ಆದ್ದರಿಂದ ಈ ವಿಧಾನದಲ್ಲಿ ಶೇ.50-60 ಕಾಯಿ ಮಾತ್ರ ಮೊಳೆಯುತ್ತದೆ.
- ಆದರೆ ಕಾಯನ್ನು ಅಡ್ಡ ಮಲಗಿಸುವುದರಿಂದ ಕಾಯಿಯೊಳಗಿನ ನೀರು ಭ್ರೂಣಕ್ಕೆ ಸದಾ ತಗಲುತ್ತಿದ್ದು ಹೊರಗಿನಿಂದ ಕೊಡುವ ನೀರಿನಲ್ಲಿ ವ್ಯತ್ಯಾಸವಾದರೂ ಶೇ. 90-95 ಬೀಜ ಮೊಳೆಯುತ್ತವೆ. ಬೇಸಗೆಯಲ್ಲಿ ಹದವರಿತು ಮಡಿಗಳಿಗೆ ನೀರು ನೀಡಿ ಉತ್ತಮ ಮೊಳಕೆ ಬಂದು ಉತ್ತಮ ಸಸಿ ದೊರೆಯುತ್ತದೆ. (ನೀರು ನೀಡದಿದ್ದರೂ ಮುಂದೆ ಮಳೆಯಿಂದಾಗಿ ಖಂಡಿತ ಮೊಳಕೆ ಬರುತ್ತದೆ.)

(ಜಿ. ಶಿವನಂಜಯ್ಯನವರು ಪ್ರಾಂಶುಪಾಲ ರಾಗಿದ್ದು, ತುಮಕೂರು ಜಿಲ್ಲೆಯ ಜಯಚಾಮರಾಜಪುರದಲ್ಲಿ, ''ಕದಳಿ'' ಸಹಜ ಕೃಷಿಫಾರಂನ್ನು ನಡೆಸುತ್ತಿರುವರು)

ಪ್ರಪುಲ್ಲಚಂದ್ರರ ಕೃಷಿ ಯಂತ್ರಗಳು

ಪಿ.ಎಸ್. ಧನಂಜಯ, ಬೆಂಗಳೂರು

ಶಿವಮೊಗ್ಗ ಸಮೀಪದ ಹೊಸಹಳ್ಳಿ ಗ್ರಾಮದ ಡಾ. ಪ್ರಪುಲ್ಲಚಂದ್ರರವರು ಕೃಷಿಯಲ್ಲಿ ಸುಲಭವಾಗಿ ಅಳವಡಿಸಬಹುದಾದ ಹಾಗೂ ಕಡಿಮೆ ಖರ್ಚಿನ ತಂತ್ರಜ್ಞಾನವನ್ನು ಅವರ ಜಮೀನಿನಲ್ಲೆ ಆವಿಷ್ಕರಿಸಿರುವರು. ಅಂತಹ ಯಂತ್ರಗಳ ಲಾಭ ಹಾಗೂ ಖರ್ಚುಗಳನ್ನು ನಿಖರವಾಗಿ ಅಳೆದು ಅದನ್ನು ಸುತ್ತಮುತ್ತಲ ಹಳ್ಳಿಗಳಲ್ಲಿನ ರೈತರಿಗೆ ಹಾಗೂ ರಾಜ್ಯದ ಎಲ್ಲಾ ಕಡೆಗೂ ಪರಿಚಯಿಸಿರುವರು. ಅವರು ಆವಿಷ್ಕರಿಸಿದ ಕೆಲವು ತಂತ್ರಜ್ಞಾನಗಳು ಸುಮಾರು ಮೂರು ದಶಕಗಳಷ್ಟು ಹಳೆಯವಾದರೂ ಅವುಗಳ ಉಪಯುಕ್ತತೆ ಇಂದಿಗೂ ಪ್ರಸ್ತುತ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಅತಿ ಅವಶ್ಯವಾಗಿರುವ ಸುಸ್ಥಿರ ಕೃಷಿಯನ್ನು ಹೆಚ್ಚು ಸಮರ್ಪಕವಾಗಿ ಕೈಗೊಳ್ಳಲು ಮತ್ತೊಮ್ಮೆ ಅವರ ತಂತ್ರಜ್ಞಾನಗಳತ್ತ ಗಮನ ಹರಿಸಿ ಅದನ್ನು ಮನನ ಮಾಡಿಕೊಳ್ಳುವುದು ಅಗತ್ಯವಾಗಿದೆ. ಈಗ ನಾವು ಅವರು 60 ರ ದಶಕದಲ್ಲಿ ಆವಿಷ್ಕರಿಸಿದ 4 ತಂತ್ರಜ್ಞಾನಗಳತ್ತ ಕಣ್ಣು ಹಾಯಿಸೋಣ.

1. **ತೆಂಗಿನ ಕಾಯಿಗಳನ್ನು ಕೀಳುವ ಹಾಗೂ ಸಂಗ್ರಹಿಸುವ ಯಂತ್ರ** : 1966ರಲ್ಲಿ ಅಭಿವೃದ್ಧಿ ಪಡಿಸಲಾದ ಈ ಯಂತ್ರವು ಆಯತಾಕಾರದ ಏಣಿಯಂತಿದ್ದು ಮರಗಳ ಎತ್ತರಕ್ಕೆ ತಕ್ಕಂತೆ ಯಂತ್ರವನ್ನು ಮಾರ್ಪಡಿಸಬಹುದಾಗಿದೆ. ಈ ಏಣಿಯಲ್ಲಿ 4 ಭಾಗಗಳಿದ್ದು ಒಂದನ್ನೊಂದು ಮಡಿಸಬಹುದು. ಹೀಗಾಗಿ ಅದನ್ನು ಸುಮಾರು 15 ಅಡಿ ಎತ್ತರದವರೆಗೂ ಎತ್ತರಿಸಬಹುದು. ಈ ಅಂತರದಲ್ಲಿ ನೀರನ್ನು ಬಾವಿಯಿಂದ ಸೇದಲು ಬಳಸುವಂತಹ ರಾಟೆ (Pully) ಯನ್ನು ಹಾಗೂ ಹಗ್ಗವನ್ನು ಸೇರಿಸಲಾಗಿದ್ದು ಅವುಗಳ ಸಹಾಯದಿಂದ ಯಂತ್ರವನ್ನು ಎಳೆಯುವ ಒಂದು ಟ್ರ್ಯಾಕ್ಟರಿಗೆ ಸೇರಿಸಬೇಕು. ಬಿದಿರಿನ ಕೋಲಿನಿಂದ ತೆಂಗಿನಕಾಯಿಯನ್ನು ಕಿತ್ತು ಈ ಯಂತ್ರದಲ್ಲಿ ಶೇಖರಿಸಬಹುದು. ಈ ಯಂತ್ರದಲ್ಲಿ ಸುಮಾರು 200 ತೆಂಗಿನ ಕಾಯಿಗಳು ಹಿಡಿಸುತ್ತವೆ.ಈ ಯಂತ್ರದ ಸಹಾಯದಿಂದ ಒಬ್ಬನು 30 ನಿಮಿಷಗಳಲ್ಲಿ 200 ಕಾಯಿಗಳನ್ನು ಕೀಳಬಹುದಾದರೆ ಈ ಯಂತ್ರದ ಸಹಾಯವಿಲ್ಲದಿದ್ದರೆ ಅವನಿಗೆ ಎರಡು ಗಂಟೆಗಳಷ್ಟು ಕಾಲ ಹಿಡಿಯುತ್ತದೆ.

2. **ಮಣ್ಣನ್ನು ಎತ್ತಿ ಹಾಕುವ ಯಂತ್ರ** : ಇಳಿಜಾರು ಜಮೀನಿನಲ್ಲಿ ಸರ್ವೇ ಸಾಮಾನ್ಯವಾಗಿ ಉಂಟಾಗುವ ಮಣ್ಣಿನ ಸವಕಳಿಯನ್ನು ತಡೆಗಟ್ಟಲು ಇಳಿಜಾರಿಗೆ ಅಡ್ಡಲಾಗಿ ಮಣ್ಣಿನ ಬದುವನ್ನು ನಿರ್ಮಿಸುವುದಕ್ಕಾಗಿ ಪ್ರಮುಖವಾಗಿ ಉಪಯೋಗಿಸಲು 1962 ರಲ್ಲೇ ನಿರ್ಮಿತವಾದ ಈ ಯಂತ್ರವನ್ನು ತೋಟದ ಜಮೀನಿನಲ್ಲಿ ಭೂಮಿಯನ್ನು ಸಮತಟ್ಟಾಗಿಸಲೂ ಬಳಸಬಹುದಾಗಿದೆ. ಈ ಯಂತ್ರವನ್ನು ಹಳೆಯ ಹಾಗೂ ಉಪಯೋಗಿಸಿದ ಕಬ್ಬಿಣದ ತಟ್ಟೆಯಾಕಾರದ ಭಾಗಗಳಿಂದ ನಿರ್ಮಿಸಲಾಗಿದೆ. ಇದನ್ನು ಟ್ರ್ಯಾಕ್ಟರ್‌ಗೆ ಬಹಳ ಸುಲಭವಾಗಿ ಅಳವಡಿಸುವಂತೆ ಮಾರ್ಪಡಿಸಲಾಗಿದೆ. 4 ಅಡಿ ಉದ್ದ 3 ಅಡಿ ಅಗಲ ಹಾಗೂ 2 ಅಡಿ ಎತ್ತರವಿರುವ ಈ ಕಬ್ಬಿಣದ ಯಂತ್ರವು ಒಮ್ಮೆಗೆ 3 ಕ್ವಿಂಟಾಲ್‌ನಷ್ಟು ಮಣ್ಣನ್ನು ಎತ್ತಿಹಾಕುವ ಸಾಮರ್ಥ್ಯವನ್ನು ಹೊಂದಿದೆ. ಇದರ ಸಹಾಯದಿಂದ ಒಂದು ಗಂಟೆಯ ಅವಧಿಯಲ್ಲಿ 35 ಕ್ವಿಂಟಾಲ್ ಮಣ್ಣನ್ನು ಎತ್ತಿ ಹಾಕಬಹುದು.

3. **ತೆಂಗಿನ ಎಲೆಗಳನ್ನು ಸಂಗ್ರಹಿಸುವ ಯಂತ್ರ:** ತೆಂಗಿನ ತೋಟದಲ್ಲಿ ಬಿದ್ದಿರುವ ತೆಂಗಿನ ಎಲೆಗಳನ್ನು ಹಾಗೂ ಇತರೆ ಒಣಗಿ ಬಿದ್ದಿರುವ ತೆಂಗಿನ ಭಾಗಗಳನ್ನು ಎತ್ತಿ ಹಾಕುವ ಕೆಲಸವನ್ನು ಸುಲಭ ಮಾಡುವ ಈ ಯಂತ್ರವನ್ನು 1964 ರಲ್ಲಿ ಅಭಿವೃದ್ಧಿ ಪಡಿಸಿದರು. ಈ ಯಂತ್ರವು ಒಮ್ಮೆಗೆ ಸುಮಾರು 50 ತೆಂಗಿನ ಎಲೆಗಳನ್ನು ಸಂಗ್ರಹಿಸುವುದು. ಈ ಯಂತ್ರಕ್ಕೆ 4 ಹಿಡಿಕೆಗಳನ್ನು ಅಳವಡಿಸಲಾಗಿದ್ದು ಅವುಗಳ ಸಹಾಯದಿಂದ ತೆಂಗಿನ ಎಲೆಗಳನ್ನು ಬೇಕಾದ ಕಡೆಗಳಲ್ಲಿ ಹಾಕಬಹುದಾಗಿದೆ.

4. **ಪಿ.ವಿ.ಸಿ ಪೈಪುಗಳನ್ನು ಭೂಮಿಯಲ್ಲಿ ಹೂಳಲು ಹೊಸ ವಿಧಾನ.**

   ಸ್ಪ್ರಿಂಕ್ಲರ್ (ತುಂತುರು) ನೀರಾವರಿಯನ್ನು ಅಳವಡಿಸಿಕೊಳ್ಳುವ ರೈತರು ಅದಕ್ಕೆ ಬೇಕಾಗುವ ಪಿವಿಸಿ ಪೈಪುಗಳನ್ನು ಭೂಮಿಯಲ್ಲಿ ಅಳವಡಿಸಲು ಹಾರೆ, ಗುದ್ದಲಿಗಳನ್ನು ತೆಗೆದುಕೊಂಡು ಕಷ್ಟಪಡುತ್ತಿರುತ್ತಾರೆ. ಈ ತೊಂದರೆಯನ್ನು ನಿವಾರಿಸಲು 1970ರಲ್ಲಿ ಒಂದು ಹೊಸ ವಿಧಾನವನ್ನು ಅಳವಡಿಸಿಕೊಂಡರು. ಈ ವಿಧಾನಕ್ಕೆ ಪ್ರತ್ಯೇಕವಾದ ಯಂತ್ರದ ಅವಶ್ಯತೆ ಇರುವುದಿಲ್ಲ. ಇರುವ ಟ್ರ್ಯಾಕ್ಟರ್‌ನಲ್ಲೆ ಸ್ವಲ್ಪ ಮಾರ್ಪಾಡನ್ನು ಮಾಡಿದರಾಯಿತು. ಹೇಗೆಂದರೆ, ಟ್ರ್ಯಾಕ್ಟರ್‌ನಿಂದ ಮಣ್ಣಿನ ಹೆಂಟೆಯನ್ನು ಹೊಡೆಯಲು ಬಳಸುವ ಚೂಪಾದ ಬಗ್ಗಿದಂತಹ ಭಾಗಕ್ಕೆ ಭೂಮಿಯಲ್ಲಿ ಹುಗಿಯಬೇಕಾಗಿರುವ ಪಿ.ವಿ.ಸಿ. ಪೈಪನ್ನು ಒಂದು ಕಬ್ಬಿಣದ ತಂತಿಯ ಸಹಾಯದಿಂದ ಬಿಗಿಯ ಬೇಕು. ಆನಂತರ ಆ ಮೊನಚಾದ ಭಾಗವನ್ನು ಭೂಮಿಯಲ್ಲಿ ಒಂದೂ ಮುಕ್ಕಾಲು ಇಂಚು ಆಳಕ್ಕೆ ಇಳಿಸಬೇಕು. ನಂತರ ಟ್ರ್ಯಾಕ್ಟರ್‌ನ್ನು ಚಾಲೂ ಮಾಡಬೇಕು. ಮೊನಚಾದ ಭಾಗವು ಭೂಮಿಯ ಒಂದೆ ಆಳದಲ್ಲಿ ಸಾಗುತ್ತಿದ್ದಂತೆ ಪಿವಿಸಿ ಪೈಪು ಸಹ ಭೂಮಿಯಲ್ಲಿ ಸೇರುತ್ತಾ ಹೋಗುತ್ತದೆ. ಈ ವಿಧಾನದಿಂದ ಒಬ್ಬನು ಒಂದು ಘಂಟೆಯಲ್ಲಿ 600 ಅಡಿ ಉದ್ದ ಪೈಪನ್ನು ಭೂಮಿಯಲ್ಲಿ ಅಳವಡಿಸಬಹುದಾಗಿದೆ.

ಇವುಗಳಲ್ಲದೆ ಇನ್ನೂ ಹಲವಾರು ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಡಾ.ಪ್ರಪುಲ್ಲ ಚಂದ್ರರವರು ಅವರ ಎಲ್ಲಾ ತಂತ್ರಜ್ಞಾನಗಳನ್ನು ಒಮ್ಮೆಗೆ ತೋರಿಸಲು ಅನುವಾಗುವಂತೆ ಈ ಯಂತ್ರಗಳ ಸಂಗ್ರಹಾಲಯವನ್ನೂ ಸಹ ಜಮೀನಿನಲ್ಲಿ ತೆರೆದಿದ್ದಾರೆ. ಈ ಸಂಗ್ರಹಾಲಯದಲ್ಲಿ ನಾವು ಆ ಯಂತ್ರಗಳನ್ನು ಕಣ್ಣಾರೆ ನೋಡಬಹುದಲ್ಲದೆ ಅವುಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ.

ವಿಳಾಸ :

ಡಾ. ದೇವಂಗಿ ಪ್ರಪುಲ್ಲ ಚಂದ್ರ
ಹೊಸಹಳ್ಳಿ, ಶಿವಮೊಗ್ಗ (ತಾ) -577201
ದೂರವಾಣಿ : 22214

ವಿ.ಸೂ. ದೇವಂಗಿ ಪ್ರಪುಲ್ಲಚಂದ್ರರನ್ನು ಈ ಸಾರಿ ಧಾರವಾಡ ಕೃಷಿ ವಿ.ವಿ.ನಿಲಯ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿದೆ. ಇದು ಅವರಂತಹ ಪ್ರಯೋಗ ಶೀಲ ರೈತರೆಲ್ಲರಿಗೆ ಸಂದ ಗೌರವವಾಗಿದ್ದು, ಇದಕ್ಕಾಗಿ ಹಿತ್ತಲಗಿಡ ಪ್ರಪುಲ್ಲಚಂದ್ರ ಮತ್ತು ಧಾರವಾಡ ಕೃಷಿ ವಿ.ವಿ. ನಿಲಯವನ್ನು ಅಭಿನಂದಿಸುತ್ತದೆ. ಸಂ.

ಪ್ರಯೋಗ ಪರಿವಾರ : ಮಹಾರಾಷ್ಟ್ರದಲ್ಲಿ ಕೃಷಿ ವಿದ್ಯಾಲಯದ ನವೀನ ವಿಸ್ತರಣಾ ಕಾರ್ಯಕ್ರಮ

ಕೃಪಾ - ಬೆಂಗಳೂರು.

ನಾಸಿಕ್‌ನಲ್ಲಿರುವ ಯಶವಂತರಾವ್ ಚವ್ಹಾಣ್ ಮಹಾರಾಷ್ಟ್ರ ಮುಕ್ತ ವಿಶ್ವವಿದ್ಯಾನಿಲಯವನ್ನು ಗ್ರಾಮೀಣ ಜನರಿಗೆ ಉನ್ನತ ವ್ಯಕ್ತಿ ಪರ ತಾಂತ್ರಿಕ ವಿದ್ಯಾಭ್ಯಾಸವನ್ನು ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾಯಿತು. ಇದರ ಕೃಷಿ ವಿಜ್ಞಾನ ಶಾಲೆಯ ನವೀನ ವಿಸ್ತರಣಾ ಮಾದರಿಯೇ "ಪ್ರಯೋಗ ಪರಿವಾರ". ಸಾರಿಗೆ ಸಂಪರ್ಕ ದುರ್ಲಭ ವಾಗಿರುವವರ ದೂರ ದೂರದ ಬೆಟ್ಟಗಾಡಿನ ಹಳ್ಳಿಗಳಿಗೆ ಕೃಷಿ ಶಿಕ್ಷಣ ಮತ್ತು ತರಬೇತಿಯನ್ನು ಸಮರ್ಪಕವಾಗಿ ತಲುಪಿಸುತ್ತಿರುವ ಯೋಜನೆ 'ಪ್ರಯೋಗ ಪರಿವಾರ.' ಒಂದು ಸಮುದಾಯದ ಅಭಿರುಚಿ ಮತ್ತು ಆಸಕ್ತಿಯುಳ್ಳ ರೈತರು ಒಂದುಗೂಡಿ ಸಸ್ಯಸಂರಕ್ಷಣೆ, ಪೋಷಣೆ, ಮಣ್ಣು ಮತ್ತು ನೀರಿನ ನಿರ್ವಹಣೆ ಮತ್ತು ಕೃಷಿ ಉತ್ಪಾದನೆಯ ಬಗ್ಗೆ ಚರ್ಚೆ ಮಾಡುತ್ತಾರೆ; ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ. ತಮ್ಮ ಪರಿಸ್ಥಿತಿ, ಅನುಕೂಲ ಮತ್ತು ಅನುಭವದ ಮೇರೆಗೆ ಅಳವಡಿಸಿಕೊಂಡು ಜ್ಞಾನಾಭಿವೃದ್ಧಿ ಮಾಡಿಕೊಳ್ಳುತ್ತಾ ಬಂದಿದ್ದಾರೆ.

ಆಧುನಿಕ ಕೃಷಿ ವಿಧಾನಗಳು ನೀರು, ನೆಲ ಮತ್ತು ಗಾಳಿಯನ್ನು ಗಂಭೀರ ರೀತಿಯಲ್ಲಿ ಕಲುಷಿತಗೊಳಿಸಿ ಅಗಣಿತ ಸಮಸ್ಯೆಗಳಿಗೆ ಕಾರಣವಾಗಲಿವೆ. ಆದ್ದರಿಂದ ಪ್ರಯೋಗ ಪರಿವಾರವು ದೇಶೀಯ ಜ್ಞಾನದ ಬಗ್ಗೆ ತೀವ್ರ ಗಮನ ಹರಿಸುತ್ತದೆ. ಪರಂಪರಾನುಗತ ಸುಸ್ಥಿರ ಮೌಲ್ಯಗಳನ್ನು ಆಧುನಿಕ ಪದ್ಧತಿಗಳಿಗೆ ಒರೆ ಹಚ್ಚಿ ನೋಡಿ ತಮ್ಮ ಅನುಭವದಲ್ಲಿ ಸಾಕ್ಷಾತ್ಕಾರ ಗೊಂಡಿರುವುದನ್ನು, ರೈತರು ತಮ್ಮದೆ ಆದ ಭಾಷೆಯಲ್ಲಿ ದಾಖಲೆ ಮಾಡುತ್ತಾರೆ. ರೈತ ಬಂಧುಗಳು ಮಾತುಕತೆ ನಡೆಸಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ.

ಇಂದಿನವರೆಗೆ ಈ ವಿಶ್ವವಿದ್ಯಾನಿಲಯವು 20 'ಪ್ರಯೋಗ ಪರಿವಾರ'ಗಳನ್ನು ಸ್ಥಾಪಿಸಿದೆ. ಇವುಗಳ ಮೂಲಕ ಸಸ್ಯ ಸಂರಕ್ಷಣೆ, ಪೋಷಣೆ ಹಾಗೂ ಮಣ್ಣು ಮತ್ತು ನೀರಿನ ನಿರ್ವಹಣೆಯ ಬಗ್ಗೆ ದೇಶೀಯ ಜ್ಞಾನವನ್ನು ಸಂಗ್ರಹಿಸಿ ಸಂಸ್ಕರಿಸಿ ರೈತ ಸಮೂಹದೊಡನೆ ಅತ್ಯಧಿಕ ಪ್ರಮಾಣದಲ್ಲಿ ಹಂಚಿಕೊಳ್ಳಲಾಗುತ್ತದೆ. ವಿಶ್ವವಿದ್ಯಾನಿಲಯ, ಬೇಸಾಯಗಾರರಿಗೆ ಒಂದು ವೈಜ್ಞಾನಿಕ ವೇದಿಕೆಯನ್ನು ರೂಪಿಸಿ ಅವರನ್ನು ಸಕ್ರಿಯ ಕೃಷಿ ವಿಜ್ಞಾನಿಗಳನ್ನಾಗಿ ಮಾಡಿದೆ. ಪ್ರಯೋಗ ಪರಿವಾರದ ಪುನರುಪಯೋಗ ಸಂಸ್ಕರಣದಿಂದ ನವೀಕರಣಗೊಂಡಿರುವ ಕೆಲವು ದೇಶೀಯ ಪರಂಪರಾನುಗತ ಪದ್ಧತಿಗಳು ಹೀಗಿವೆ:

ಪಂಚಗವ್ಯ ಸಂಸ್ಕಾರ

ಭೂಮಿ ಸಂಸ್ಕಾರ :

ದನದ ಇಪ್ಪತ್ತೈದು ಕಿಲೋ ತಾಜಾ ಸಗಣಿ, 500 ಗ್ರಾಂ ಜೇನುತುಪ್ಪ ಮತ್ತು 250 ಗ್ರಾಂ ತುಪ್ಪವನ್ನು 200 ಲೀಟರ್ ನೀರಿನೊಡನೆ ಬೆರೆಸಿ ಒಂದು ಎಕರೆ ಜಮೀನಿಗೆ ಸಿಂಪಡಿಸುವುದು. ನಂತರ ನೀರು ಹಾಯಿಸಬೇಕು. ಮೂರು ದಿನಗಳೊಳಗೆ ಮಣ್ಣಿನಲ್ಲಿ ಪೋಷಕ ಸೂಕ್ಷ್ಮಾಣು ಜೀವಿಗಳು ಅನೇಕ ಪಟ್ಟು ಹೆಚ್ಚಿರುವುದು ಕಂಡುಬರುವದು. ಬ್ಯಾಕ್ಟೀರಿಯ ಆಕ್ಟಿನೋ ಮೈಸಿಟಿನ್ ಮತ್ತು ಶಿಲೀಂದ್ರಗಳೆಲ್ಲಾ ಸಚೇತನಗೊಂಡಿರುವುದು ಕಂಡುಬರುವುದು. ಮಣ್ಣಿನ ತಳದಲ್ಲಿರುವ ಎರೆ ಹುಳುಗಳು ಮೇಲ್ಮಣ್ಣಿಗೆ ಬಂದು ಜಮಾಯಿಸಿ ಬೆಳೆಯುವ ಗಿಡಗಳ ಬೇರಿಗೆ ಪೋಷಕಾಂಶಗಳು ಸಮೃದ್ಧವಾಗಿ ಸಿಗುವಂತಾಗುತ್ತದೆ.

ಬೀಜ ಸಂಸ್ಕಾರ :

ಇದಕ್ಕೆ ಪಂಚಗವ್ಯ ಸಂಸ್ಕಾರ ಎನ್ನುತ್ತಾರೆ. ದನದ ಸಗಣಿ, ಮೂತ್ರ ಮತ್ತು ನೀರನ್ನು ತಲಾ ಒಂದೊಂದು ಕಿಲೋ ಚೆನ್ನಾಗಿ ಬೆರೆಸಿ 100 ಗ್ರಾಂ ತುಪ್ಪವನ್ನು ಸೇರಿಸಿ ಬೀಜವನ್ನು ಈ ಮಿಶ್ರಣದಲ್ಲಿ ಹತ್ತು ನಿಮಿಷ ನೆನಸಿಡಿ. ಈ ಪಂಚಗವ್ಯ ಒಂದು ಜೈವಿಕ ಗೊಬ್ಬರ. ಇದರಿಂದ ಬೀಜಗಳು ಆರೋಗ್ಯಕರವಾಗಿ ಮೊಳಕೆಯೊಡೆದು ಪುಷ್ಟಿಯಾದ ಒಂದೇ ಸಮನಾಗಿ ಬೆಳೆಯುವ ಗಿಡಗಳಾಗುತ್ತವೆ.

ಸಸಿಗಳ ಸಂಸ್ಕಾರ :

ಯಾವುದೇ ಹಣ್ಣು, ತರಕಾರಿ ಅಥವಾ ಹೂವಿನ ಸಸಿಗಳ ಬೇರನ್ನು ಮೇಲೆ ಹೇಳಿದ ಪಂಚಗವ್ಯದಲ್ಲಿ ಹತ್ತು ನಿಮಿಷ ನೆನೆಸಿಟ್ಟು ನೆಟ್ಟರೆ ಸಸಿಗಳಿಗೆ ಕಿತ್ತು ನಾಟಿಮಾಡಿದ ಆಘಾತ ತಟ್ಟದೇ ಅವು ಶೀಘ್ರವೇ ಸದೃಢವಾಗಿ ಬೇರೂರುತ್ತವೆ.

ನರ್ಸರಿ ನಿರ್ವಹಣೆ :

ಮಣ್ಣನ್ನು ಏರು ಹಾಕಿ ಅದಕ್ಕೆ ಭೂಮಿ ಸಂಸ್ಕಾರ ಮಾಡಿ ಬೀಜಗಳಿಗೂ ಪಂಚಗವ್ಯದ ಸಂಸ್ಕಾರ ಮಾಡಿ ನೆಟ್ಟರೆ ಬೀಜಗಳು ವಾರದೊಳಗೆ ಚೆನ್ನಾಗಿ ಮೊಳಕೆ ಬರುತ್ತವೆ. ಬೆಳೆಯುವ ಸಸಿಗಳು ರೋಗ ಮತ್ತು ಕ್ರಿಮಿಕೀಟಗಳಿಂದ ಮುಕ್ತವಾಗಿ ಬೆಳೆಯಲು ಈ ಕೆಳಕಂಡಂತೆ, ಕ್ರಮಗಳನ್ನು ಕೈಗೊಳ್ಳಬಹುದು.

9 ನೇ ದಿನ 100 ಮಿಲಿ ಲೀಟರ್ ಹಸುವಿನ ಮೂತ್ರವನ್ನು ಹತ್ತು ಲೀಟರ್ ನೀರಿನಲ್ಲಿ ಬೆರೆಸಿ ಸಸಿಗಳ ಮೇಲೆ ಸಿಂಪಡಿಸಿದರೆ ವೈರಸ್‌ಗಳು ಬರುವುದಿಲ್ಲ.

12 ನೇ ದಿನ ಒಂದು ಕಿಲೋ ಬೇವಿನ ಹಿಂಡಿಯನ್ನು ಪುಡಿ ಮಾಡಿ ಎರಡು ಲೀಟರ್ ನೀರಿನಲ್ಲಿ ಬೆರೆಸಿ ರಾತ್ರಿ ಇಡೀ ನೆನಸಿಟ್ಟು ಮರು ದಿನ ನೀರನ್ನು ಬಸಿದು ಆ ನೀರಿಗೆ ಹತ್ತು ಲೀಟರ್ ನೀರು ಬೆರೆಸಿ ಗಿಡಗಳಿಗೆ ಸಿಂಪಡಿಸುವುದು. ಇದರಿಂದ ಕ್ರಿಮಿಕೀಟಗಳಾವುವೂ ಗಿಡಗಳ ಬಳಿ ಬಾರವು.

15ನೇ ದಿನ 20 ಗ್ರಾಂ ಇಂಗನ್ನು 100 ಮಿಲಿ ಲೀಟರ್ ಹಸುವಿನ ಹಾಲಿನಲ್ಲಿ ಕರಗಿಸಿ ಇದಕ್ಕೆ ಹತ್ತು ಲೀಟರ್ ನೀರನ್ನು ಬೆರೆಸಿ ಸಿಂಪಡಿಸಿದರೆ ಗಿಡಗಳಿಗೆ ಶಿಲೀಂಧ್ರಗಳಿಂದ ಕಾಯಿಲೆ ಬರುವುದಿಲ್ಲ.

18 ನೇ ದಿನ ಎರಡು ಕಿಲೋ ಕಟ್ಟಿಗೆ ಉರಿಸಿದ ಬೂದಿಯನ್ನು ಕಾಲು ಕೆಜಿ ಅರಿಶಿನದೊಡನೆ ಬೆರೆಸಿ ಮಿಶ್ರಣವನ್ನು ಗಿಡಗಳ ಮೇಲೆ ಉದುರಿಸಿದರೆ ಗಿಡದ ರಸ ಹೀರುವ ಹೇನುಗಳು (Aphids) ಬರುವುದಿಲ್ಲ.

20 ನೇ ದಿನ 200 ಮಿಲಿಲೀಟರ್ ಹಸುವಿನ ಮೂತ್ರ ಮತ್ತು ಹಾಲನ್ನು ಬೆರೆಸಿ ಇದನ್ನು 30 ಲೀಟರ್ ನೀರಿನಲ್ಲಿ ಕಲಸಿ ಸಿಂಪಡಿಸಿದರೆ ಗಿಡಗಳಿಗೆ ಎಲ್ಲಾ ತರಹದ ರೋಗ ನಿರೋಧಕ ಶಕ್ತಿ ದೊರೆತು ಗಿಡಗಳು ದಷ್ಟಪುಷ್ಟವಾಗಿ ಬೆಳೆಯುವುವು.

ಹಿತ್ತಲಗಿಡಕ್ಕೆ ನಿಮ್ಮ ಸಲಹೆ

ಹಿತ್ತಲಗಿಡವನ್ನು ಮತ್ತಷ್ಟು ವ್ಯವಸ್ಥಿತಗೊಳಿಸಲು ನಿಮ್ಮ ಮುಖ್ಯ ಮೂರು ಸಲಹೆಗಳನ್ನು ಇಂದೇ ಬರೆದು ಕಳುಹಿಸಿರಿ.

ಉತ್ತಮ ಸಲಹೆಗಳಿಗೆ ಪುಸ್ತಕಗಳ ಬಹುಮಾನ ನೀಡಲಾಗುವುದು

ಸಂ.

ಸಾಮೂಹಿಕ ಬೇಸಾಯ - ಹೆಗ್ಗನೂರಿನ ಹೆಗ್ಡೆಗಳ ಮಾದರಿ

ಟಿ.ಎಸ್.ಪ್ರಕಾಶ್ ಮತ್ತು ನರಸಿಂಹ ಎಸ್.

ಮಲೆನಾಡಿನಲ್ಲಿ ಒಂದೆರಡು ಮನೆಗಳನ್ನು ಸೇರಿಸಿಕೊಂಡು ಊರ ಹೆಸರಿಡಲಾಗುತ್ತದೆ. ಅದೇ ರೀತಿ ಉತ್ತರ ಕನ್ನಡದ, ಸಿದ್ದಾಪುರ ತಾಲ್ಲೂಕಿನ ಹೆಗ್ಗನೂರು ನಾಲ್ವರು ಹವ್ಯಕ ಹೆಗ್ಡೆ ರೈತರ ಒಂದು ಚಿಕ್ಕ ಊರು. ಜಿ.ಪಿ. ಹೆಗ್ಡೆ, ಎಂ.ಡಿ ಹೆಗ್ಡೆ,ಎಸ್.ಆರ್. ಹೆಗ್ಡೆ ಮತ್ತು ಎಮ್.ಪಿ. ಹೆಗ್ಡೆ ಇವರೇ ಆ ನಾಲ್ವರು. ಈ ಊರಿನ ಒಟ್ಟು ವಿಸ್ತೀರ್ಣ ಸುಮಾರು 5 ಕಿಮೀ. ಅದರಲ್ಲಿ ಈ ನಾಲ್ಕು ಹೆಗ್ಡೆ ಕುಟುಂಬಕ್ಕೆ ಸೇರಿದ ಒಟ್ಟು 29 ಎಕ್ರೆ ತೋಟ, 120 ಎಕ್ರೆ ಸೊಪ್ಪಿಗಾಗಿ ಇರುವ ಬೆಟ್ಟ. ಅಡಿಕೆಗೆ ಈಗಾಗಲೇ ಚಿನ್ನದ ಬೆಲೆ. ಜೊತೆಗೆ ಅಷ್ಟೆ ಬೆಲೆಯ ಏಲಕ್ಕಿ ಕರಿಮೆಣಸು, ವೀಳ್ಯದೆಲೆ, ಬಾಳೆ ಇತ್ಯಾದಿಗಳ ಬೆಳೆಗಳು. ಈ ಅಡಿಕೆ ತೋಟದೊಳಗೆ ಎಲ್ಲಾ ಬೆಳೆಗಳನ್ನು ಕಾಡು ಹಂದಿ, ದನ ಕರು, ಕಾಡುಕೋಣ ಕಳ್ಳಕಾಕರುಗಳಿಂದ ರಕ್ಷಿಸಿಡುವುದೇ ರೈತರಿಗೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ಇದಕ್ಕಾಗಿ ಬ್ಯಾಟರಿ ಚಾಲಿತ ವಿದ್ಯುತ್ ಐಬೆಕ್ಸ್ ಬೇಲಿ ಹಾಕುವುದನ್ನು ಈಗೀಗ ಈ ಪ್ರಾಂತ್ಯದ ರೈತರು ಶುರುಮಾಡಿರುವರು. ಆದರೆ ಹೆಗ್ಗನೂರಿನ ಈ ನಾಲ್ವರು ರೈತರು ಒಬ್ಬೊಬ್ಬರಾಗಿ ಈ ಕಾರ್ಯ ಕೈಗೊಂಡಲ್ಲಿ ಪ್ರತಿಯೊಬ್ಬರಿಗೂ ಅತೀ ದುಬಾರಿಯಾಗುತ್ತಿತ್ತು. ಕಾರಣ ಅವರ ತೋಟ ಒಂದೆಡೆ ಇರದೇ, ಹರಿದು ಹಂಚಿಹೋಗಿತ್ತು. ಹಾಗಾಗಿ ಈ ನಿಟ್ಟಿನಲ್ಲಿ ಒಂದುಗೂಡುವುದು ಅವರಿಗೆ ಅನಿವಾರ್ಯವಾಗಿತ್ತು. ಜೊತೆಗೆ, ಜಿ.ಪಿ. ಹೆಗ್ಡೆಯಂತಹ ನಿಸ್ವಾರ್ಥ ಮುಂದಾಳು ಅವರಿಗೆ ದೊರೆತು, ಇಡೀ ಕೃಷಿಗಾರಿಕೆ, ಹಾಗೂ ತಮ್ಮ ಇತರ ಚಟುವಟಿಕೆಗಳನ್ನೆಲ್ಲಾ ಒಂದುಗೂಡಿಸಿ ಸಹಕಾರಿ ತತ್ವದ ಮೇಲೆ ಹೇಗೆ ನಡೆಸಬಹುದೆನ್ನುವುದನ್ನು ಹೆಗ್ಗನೂರಿನ ಈ ನಾಲ್ವರು ಹೆಗ್ಡೆ ರೈತರು ತೋರಿಸಿಕೊಟ್ಟಿರುವರು. ಜಿ.ಪಿ. ಹೆಗ್ಡೆಯವರ ನೇತೃತ್ವದಲ್ಲಿ ಈ ರೈತರು ಕೈಗೊಂಡ ಮೊದಲ ಕೆಲಸ ತಮ್ಮ ಚಿಕ್ಕಪುಟ್ಟ ಚದುರಿದ ಹಿಡುವಳಿಗಳನ್ನು ಪರಿವರ್ತನೆ ಮೂಲಕ ಒಗ್ಗೂಡಿಸಿಕೊಳ್ಳುವ ಕಾರ್ಯ. ನಂತರ ನಾಲ್ವರು ಒಟ್ಟು ಸೇರಿ ತಮ್ಮ 29 ಎಕ್ರೆ ಹೊಲ, 120 ಎಕ್ರೆ ಬೆಟ್ಟ, ಮನೆ ಎಲ್ಲವನ್ನೂ ಸೇರಿಸಿ 5 ಕಿ.ಮೀ. ಸುತ್ತಳತೆಗೆ ಐಬೆಕ್ಸ್ ಬೇಲಿ ಹಾಕಿದ್ದು. ಇದಕ್ಕೆ ಅವರಿಗೆ ಒಟ್ಟು 70,000 ರೂ ತಗುಲಿದ್ದು, ತಮ್ಮ ಹೊಲದ ವಿಸ್ತೀರ್ಣಕ್ಕೆ ಮತ್ತು ಕಂದಾಯಕ್ಕೆ ಅನುಗುಣವಾಗಿ ಖರ್ಚನ್ನು ಹಂಚಿಕೊಂಡರು.

ಇದರಿಂದ ಏನಿಲ್ಲಾ ಅಂದರೂ ಒಬ್ಬೊಬ್ಬರಿಗೆ ರೂ. 20,000 ಉಳಿತಾಯವಾಯ್ತು ಎನ್ನುತ್ತಾರೆ. 20 ರಿಂದ 40 ಅಡಿ ಅಂತರದಲ್ಲಿ ಕಲ್ಲು ಕಂಬ ಹಾಕಿ, ಗಟ್ಟಿಮುಟ್ಟಾದ ಬೇಲಿಯನ್ನೇ ಹಾಕುವಂತಾದರು. ಬ್ಯಾಟರಿಯ ಬಗ್ಗೆ ನಿಗಾ, ಬೇಲಿಯ ಮುತುವರ್ಜಿಗಾಗಿ ಪ್ರತಿತಿಂಗಳೂ ಎರಡು ಆಳುಗಳ ಪಾಳಿಯನ್ನು ಇದೇ ರೀತಿ ಹಂಚಿಕೊಂಡು ಇಡುವಂತಾದರು. ಇದರಿಂದ ಈಗ ಯಾವುದೇ ಪ್ರಾಣಿಗಳ ಹಾವಳಿಯಿಲ್ಲದೆ, ಕಳ್ಳತನ ತಡೆದು, ಬೆಟ್ಟದ ತುಂಬ ಹಸಿ ಹುಲ್ಲು ಬೆಳೆಸುವಂತಾಯಿತು. ಇದೇ ತತ್ವವನ್ನು ಮಂಗನ ಹಾವಳಿ ತಡೆಯಲು ಬಳಸಿ, ಒಬ್ಬ ಕಾವಲು ಗಾರನನ್ನು ರೂ. 1500 ನೀಡಿ ವರ್ಷವಿಡೀ ಇಡುವಂತಾಯಿತು. ತೋಟದಲ್ಲಿ ಬೆಳೆ ಇದ್ದಾಗ ನಾಲ್ಕು ಮನೆಯಿಂದ ಒಬ್ಬೊಬ್ಬರಂತೆ, ಒಟ್ಟಾಗಿ ಸೇರಿ, ಹಾಡಿ, ಆಡಿ, ರಾತ್ರಿಕಾಯುವುದೂ ನಡೆಯುತ್ತಿದೆ. ಇವರ ಈ ಸಹಕಾರ ಧೋರಣೆ ಇಲ್ಲಿಗೇ ನಿಲ್ಲಲಿಲ್ಲ. ತಮ್ಮ ಕೃಷಿಗೆ ಕೂಲಿ ಆಳುಗಳು ನಿರಂತರವಾಗಿ ದೊರೆಯಲು, ಬೆಟ್ಟದ ಮೂಲೆಯಲ್ಲಿ 10 ಕುಟುಂಬಕ್ಕೆ ಒಟ್ಟಾಗಿ ನಿವೇಶನ ಕಟ್ಟಿಸಿಕೊಟ್ಟರು. ಜೊತೆಗೆ ಕರೆಂಟು, ಕೊಳವೆಬಾವಿ ಎಲ್ಲಾ ಸೌಲಭ್ಯ ದೊರಕಿಸಿದರು. ಹೀಗಾಗಿ, 25 ಗಂಡಾಳು, 20 ಹೆಣ್ಣಾಳುಗಳು ಇವರಿಗೆ ಸದಾ ದೊರಕುವಂತಾದರು. ವರ್ಷದಲ್ಲಿ ಕನಿಷ್ಟ 9 ತಿಂಗಳು ಈ ಕೂಲಿ ಆಳುಗಳಿಗೆ ಇವರ ತೋಟಗಳಲ್ಲೆ ಕೆಲಸ. ಗಂಡಾಳಿಗೆ 50 ರೂ, ಹೆಣ್ಣಾಳಿಗೆ 40 ರೂ, ಜೊತೆಗೆ ಚಹ, ತಿಂಡಿ; ಪ್ರತಿದಿನ ಬೆಟ್ಟದಿಂದ ಮನೆಗೆ ಬೇಕಾದಷ್ಟು ಸೌದೆ - ಇವೆಲ್ಲಾ ಸಿಕ್ಕ ಮೇಲೆ, ಈ ಕೂಲಿ ಆಳುಗಳೂ ಸಂತೃಪ್ತರಾಗಿ ಇವರ ತೋಟದಲ್ಲಿ ಮನೆ ಮಂದಿಯಂತೆ ದುಡಿಯತೊಡಗಿದರು.

ಅಡಿಕೆಗೆ ಬೀಳುವ ಮಾರಿ-ಕೊಳೆರೋಗದ ತಡೆಗಟ್ಟುವಲ್ಲಿ, ಭಾರೀ ಮಳೆಯಿಂದ ಪ್ರತಿ ವರ್ಷ ಹಾಳಾಗುವ ಊರು ರಸ್ತೆ ರಿಪೇರಿಯ ಕಾರ್ಯಗಳಲ್ಲಂತೂ ಇವರ ಸಹಕಾರಿ ಕಾರ್ಯ ತಂತ್ರ ಅಪಾರ ಪರಿಣಾಮಬೀರಿದೆ ಎನ್ನಬಹುದು. ಪಿರಿ ಪಿರಿ ಮಳೆಯಲ್ಲಿ ಒಬ್ಬರ ತೋಟಕ್ಕೆ ಕೊಳೆ ಔಷಧಿ ಹೊಡೆದು, ಪಕ್ಕದ ತೋಟದಲ್ಲಿ ಹೊಡೆಯದಿದ್ದಲ್ಲಿ ಏನೂ ಪರಿಣಾಮ ಆಗದು. ಇದಕ್ಕೆ ಈ ಹೆಗ್ಡೆಗಳು ಒಟ್ಟಾಗಿ, ಜೂನ್-ಜುಲೈ ಹೊತ್ತಿಗೆ ಪೂರ್ತಿ 15 ಎಕ್ರೆ ತೋಟಕ್ಕೆ 10-15 ದಿನಗಳಲ್ಲಿ ಒಂದೇ ಸಮನೆ ಔಷಧಿ ಹೊಡೆಯುತ್ತಿರುವರು. ಈ ರೀತಿ ಎರಡು ಬಾರಿ ಹೊಡೆದು, ಕೊಳೆರೋಗ ಹರಡದಂತೆ ತಡೆಯಲು ಯಶಸ್ವಿಯಾಗಿರುವರು. ಇದೇ ರೀತಿ ಮನೆಗೆ ಎರಡು ಆಳುಗಳಂತೆ ಶ್ರಮದಾನದ ಮೂಲಕ ಮಳೆಗಾಲ ಮುಗಿದೊಡನೆ ಊರ ದಾರಿಯನ್ನು ಪ್ರತಿವರ್ಷ ರಿಪೇರಿ ಮಾಡಿಕೊಳ್ಳುತ್ತಾರೆ. ಹಾಗೇ, ದನಕರುಗಳ ಕಾವಲು ಕೂಡ, ಒಟ್ಟಾಗಿ ನಿರ್ವಹಿಸುತ್ತಿರುವರು. ಇಷ್ಟೆಲ್ಲಾ ಆದ ಮೇಲೆ, ಸಹಕಾರ ಈ ಹೆಗ್ಡೆಗಳ ಕುಟುಂಬದ ಆಗು ಹೋಗುಗಳಿಗೆ ಹಬ್ಬಲಿರಲಾದೀತೆ. ಲಗ್ನ, ಮುಂಜಿ, ಹಬ್ಬ, ಸಾವು, ನೋವುಗಳನ್ನೂ ಈ ನಾಲ್ಕು ಕುಟುಂಬಗಳು ಒಟ್ಟಾಗಿ ಹಂಚಿಕೊಳ್ಳುತ್ತಿರುವುದು ನಮ್ಮ ರೈತ ಸಮುದಾಯ ನೋಡಿ ಕಲಿಯಬೇಕಾಗಿದೆ.

ಯುಗಾದಿ : ಏನು ? ಎಂತು ?

ಜಿ.ಬಸವರಾಜ್ ಮತ್ತು ಅಶ್ವತನಾರಾಯಣ್ ಷೈ.

ಯುಗಾದಿ ಎಂದರೆ ಯುಗದ ಆದಿ ಎಂದು. ಪ್ರತಿ ವರ್ಷದ ಆರಂಭವೇ ಯುಗಾದಿ ಎನ್ನಬಹುದು. ನಮ್ಮ ಶಕೆ - ಶಾಲಿವಾಹನ ಮಹಾರಾಜನಿಂದ ಕಾಲ ಎಣಿಕೆ ಮಾಡಲು ಪ್ರಾರಂಭಿಸಿ ಶಾಲಿವಾಹನ ಶಕೆ ಎಂದೇ ಖ್ಯಾತಿ ಹೊಂದಿದೆ. ಇಲ್ಲಿಯವರೆಗ 1917 ವರ್ಷಗಳು ಸಂದಿವೆ. ಇದೇ ರೀತಿ ಇನ್ನಿತರ ಧರ್ಮಗಳಲ್ಲೂ ಸಂಸ್ಕೃತಿಯಲ್ಲೂ ಯುಗಾದಿ ಆಚರಿಸುತ್ತಾರೆ. ಆಂಗ್ಲ ಭಾಷೆಯಲ್ಲಿ ERA ಎನ್ನುತ್ತಾರೆ. ಕ್ರಿಸ್ತ ಶಕೆ 1995. ವಿಕ್ರಮ ಶಕೆ 2052 ಆಗಿದೆ. ಹಿಜರಿಸಿನ್ ಕಾಲ ಎಣಿಕೆ ಈಗ್ಗೆ 1416 ವರ್ಷಗಳು ಉರುಳಿವೆ, ಬಸವೇಶ್ವರ ಸಂವತ್ಸರ 864 ವರ್ಷಗಳಾಗಿವೆ ಎಂದು ಎಣಿಕೆ ಹಾಕಲಾಗಿದೆ.

ಆಯಾ ಧರ್ಮ, ಸಂಸ್ಕೃತಿಯುಳ್ಳವರಿಗೆ ಆಯಾ ಯುಗಾದಿ ಪ್ರಾರಂಭವಾಗುತ್ತವೆ. ಯಾವುದೇ ಶಕೆಗಳಾದರು ಎಲ್ಲವೂ [illegible] ಇವು ಉರುಳಿ ಮತ್ತೆ ಮತ್ತೆ ನಗೆಮಾಡುತ್ತವೆ. ಕಾಲ ಚಕ್ರ ಯಾರಿಗೂ ಕಾಯುವುದಿಲ್ಲ. ಈ ಕಾರಣದಿಂದಲೇ ರಸ ಋಷಿ ದ.ರಾ. ಬೇಂದ್ರೆ "ಯುಗ ಯುಗಾದಿ ಕಳೆದರೂ [illegible]" .... ಎಂದು ಹೇಳಿದ್ದಾರೆ.

ಯುಗಾದಿಯನ್ನು ಚಾಂದ್ರಮಾನ ಹಾಗು ಸೌರಮಾನ ರೀತಿಯಾಗಿ ಆರಂಭಿಸುವ ಆಚರಿಸುವ ಪದ್ಧತಿಗಳೂ ನಮ್ಮಲ್ಲಿವೆ. ಸೂರ್ಯ, ಚಂದ್ರರ ಗತಿಯನ್ನು ಅನುಸರಿಸಿ ಕಾಲಮಾನ ಲೆಕ್ಕಾಚಾರ ಹಾಕುವುದು ಜ್ಯೋತಿಷ್ಯ ಶಾಸ್ತ್ರದ ಪದ್ಧತಿ. ಸೂರ್ಯನ ಚಲನೆಯನ್ನು ಆಧರಿಸಿ ಲೆಕ್ಕಾಚಾರ ಹಾಕಿದ ಕಾಲಮಾನಕ್ಕೆ ಸೌರಮಾನವೆಂತಲೂ, ಚಂದ್ರನ ಗತಿಯನ್ನು ಅನುಸರಿಸಿ ಲೆಕ್ಕಾಚಾರ ಹಾಕಿದ ಕಾಲಮಾನಕ್ಕೆ ಚಾಂದ್ರಮಾನವೆಂತಲೂ ಹೆಸರು. ಕರ್ನಾಟಕದಲ್ಲಿರುವ ಹಿಂದುಗಳು ಆಚರಿಸುವುದು ಚಾಂದ್ರಮಾನ ಯುಗಾದಿ ಪದ್ಧತಿಯಾಗಿದ್ದು ಚಾಂದ್ರಮಾನ ಪಂಚಾಂಗವೇ ಆಗಿದೆ.

ನಾವು ಹಬ್ಬಗಳನ್ನು ಋತುಗಳಿಗನುಸಾರವಾಗಿ ಆಚರಿಸುತ್ತೇವೆ. ಈ ಸಮಯದಲ್ಲಿ ಹಲವಾರು ಆಚರಣೆಗಳನ್ನು ಪಾಲಿಸುತ್ತೇವೆ. ವಿಚಾರವಂತರಾದ ನಮ್ಮ ಪೂರ್ವಿಕರು, ಈ ಆಚರಣೆಗಳನ್ನು ರೂಡಿಸಿದ್ದಾರೆ. ಇವು ಮೂಢನಂಬಿಕೆಯಾಗಿರದೆ ಈಗಿನ ವಿಜ್ಞಾನಿಗಳು ಇದನ್ನು ಪುಷ್ಟೀಕರಿಸುತ್ತಾರೆ. ಉದಾಹರಣೆಗೆ ಸಂಕ್ರಾಂತಿಯನ್ನು ಚಳಿಗಾಲದಲ್ಲಿ ಆಚರಿಸುತ್ತೇವೆ. ಈ ಸಮಯದಲ್ಲಿ ಎಳ್ಳು-ಬೆಲ್ಲ ತಿನ್ನುತ್ತೇವೆ. ಇವೆರೆಡೂ ಪ್ರೋಟೀನ್ ಹಾಗು ಸಕ್ಕರೆಯುಕ್ತ ಆಹಾರ. ಇದರಿಂದ ದೇಹಕ್ಕೆ ಚಳಿ ತಡೆಯಲು ಸಾದ್ಯವಾಗಬಹುದೇನೋ ?

ಯುಗಾದಿ ಹಬ್ಬವು ವರ್ಷದ ಪ್ರಥಮ ಹಬ್ಬವಾಗಿದ್ದು ಅತ್ಯಂತ ಸಡಗರ ಸಂತಸದ ಹಬ್ಬ, ಇದನ್ನು ಬೇಸಗೆಯಲ್ಲಿ ಆಚರಿಸುತ್ತೇವೆ. ಬೇವು-ಬೆಲ್ಲವನ್ನು ದೇವರಿಗೆ ನೈವೇದ್ಯ ಮಾಡಿದ ನಂತರ ತನ್ನ ಇಷ್ಟ ಮಿತ್ರರೊಂದಿಗೆ, ಕುಟುಂಬ ಸಮೇತ ತಿನ್ನುವುದು ಒಂದು ರೂಢಿ. ಬೇವು ಬೆಲ್ಲದಂತೆ ನಮ್ಮ ಜೀವನದಲ್ಲಿ ಸಿಹಿ-ಕಹಿ ಎರೆಡನ್ನು ಏಕ ರೀತಿಯಲ್ಲಿ ಕಾಣುವ ಶಕ್ತಿಯನ್ನು ಶ್ರೀ ಹರಿಯು ದಯಪಾಲಿಸಲಿ ಎಂದಿರಬೇಕು.

ಬೇವು ಕ್ರಿಮಿನಾಶಕ ಹಾಗು ಬೆಲ್ಲ ಆಯಾಸ ಪರಿಹಾರಕ. ಯುಗಾದಿ ಸಮಯದಲ್ಲಿ ಜನರು ಪಾನಕವನ್ನು ಸೇವಿಸುತ್ತಾರೆ. ಇದು ಕೂಡ ಉತ್ತಮ ಆಯಾಸ ಪರಿಹಾರಕವಲ್ಲದೆ ಉತ್ತಮ ಆಹಾರ ಕೂಡ.

ಬಿದಿಗೆ ಚಂದ್ರನ ದರ್ಶನದೊಂದಿಗೆ ಯುಗಾದಿ ಹಬ್ಬವು ಮುಕ್ತಾಯವಾಗುತ್ತದೆ. ಬಿದಿಗೆ ಚಂದ್ರನದರ್ಶನ ಆಯುರ್‌ವರ್ಧಕ. ಕಾರಣ ಚಂದ್ರಮ ಮನೋಕಾರಕ, ಇಂದುಶೀತಲ ಅಲ್ಲವೇ? ಅವನ ದರ್ಶನದಿಂದ ಮನಃ ಶಾಂತಿ ಸಿಗುತ್ತದೆ.

ಪುರಾತನ ಭಾರತೀಯ ಚಿಂತನೆ : ಜೀವಿ ವಿವಿಧತೆ ಮತ್ತು ಆಹಾರಾಂಶಗಳ ಸಮತೋಲನ

ಮೂಲ : ವನಜಾ ರಾಮಪ್ರಸಾದ್, ಬೆಂಗಳೂರು

ಭಾಷಾಂತರ : ತೇಜಸ್ವಿನಿ ಶರ್ಮ

ಪರಿಸರವನ್ನು, ಪ್ರಕೃತಿಯನ್ನು ಆಧರಿಸಿದ ಪುರಾತನ ಭಾರತೀಯ ಚಿಂತನೆಯನ್ನು, ಅದರಲ್ಲಡಗಿದ್ದ ಸುಸ್ಥಿರ ಜೀವನ ಪದ್ಧತಿಯ ಬಗೆಗಿನ ಕಾಳಜಿಯನ್ನು ಹೊರಗೆಳೆಯುವ ಪ್ರಯತ್ನ ಇಂದು ಅಗತ್ಯವಾಗಿದೆ. ನಮ್ಮ ಪುರಾತನರು ಪ್ರಕೃತಿಯನ್ನು ಸ್ತ್ರೀಯೆಂದು ಪರಿಗಣಿಸಿ, 'ಶಕ್ತಿ' ಎಂದು ಆರಾಧಿಸುತ್ತಿದ್ದರು. ತೈತ್ತೇರೀಯ ಉಪನಿಷತ್‌ನಲ್ಲಿ 'ಯಸ್ಮಾತ್ ಭೂತಾನಿ ಜಯಂತಿ' ಅರ್ಥಾತ್ ಎಲ್ಲಾ ಜೀವಿಗಳ ಜನನಿ ಈ ಮಹಾಸತ್ವಶಕ್ತಿ ಎಂದು ವಿವರಿಸಲಾಗಿದೆ.

ಅಥರ್ವಣ ವೇದದಲ್ಲಿ ಭೂಮಾತೆಯ ವೈಶಾಲ್ಯತೆ, ವೈವಿಧ್ಯತೆ ಹಾಗೂ ಅಪಾರ ಗುಣಗಳ ಕುರಿತು ವಿವರವಾದ ವರ್ಣನೆಗಳಿವೆ.

ನವಗ್ರಹಗಳು, ನವಧಾನ್ಯ ಮತ್ತು ಆಹಾರ

ವೇದಗಳಲ್ಲಿ ಸೂರ್ಯನನ್ನು ಜಗತ್ತಿನ ಆತ್ಮವೆಂದೂ, ಮೂಲನೆಂದೂ ಗುರುತಿಸಲಾಗಿದೆ. ಇತರ ಗ್ರಹಗಳನ್ನು ಸೂರ್ಯನ ಬೆಳಕನ್ನೂ, ಕಿರಣವನ್ನೂ ಪ್ರತಿಫಲಿಸುವ ಘಟಕಗಳಾಗಿ ಪರಿಗಣಿಸಲಾಗಿದೆ. ಈ ಕಿರಣಗಳು ಜೈವಿಕ ಕ್ರಿಯೆಯನ್ನು, ಮಾನವನ ಚಟುವಟಿಕೆಯನ್ನು ನಿಯಂತ್ರಿಸುತ್ತವೆ ಎಂದು ಗ್ರಹಿಸಲಾಗಿದೆ. ಮಂಗಳ, ಬುಧ, ಬೃಹಸ್ಪತಿ (ಗುರು). ಶುಕ್ರ, ಶನಿ, ರವಿ, ಸೋಮ (ಚಂದ್ರ). ರಾಹು ಮತ್ತು ಕೇತುಗಳು ಈ ನವಗ್ರಹಗಳೆಂದು ಪರಿಗಣಿಸಿ ಒಟ್ಟಾಗಿ ಆರಾಧಿಸಲಾಗುತ್ತದೆ. ಸೂರ್ಯ ಮತ್ತು ಈ ಗ್ರಹಗಳ ಚಲನೆಗಳು ಸಮುದ್ರದ ಅಲೆಗಳನ್ನು, ಜೀವರಾಶಿಯನ್ನು, ಸಸ್ಯ ಸಂಕುಲವನ್ನು ನಿಯಂತ್ರಿಸುತ್ತದೆ ಎಂದು ವಿವರಿಸಲಾಗಿದೆ. ಹಿಂದಿನ ನಂಬಿಕೆಗಳಂತೆ ಗಿಡವನ್ನು ಅಮಾವಾಸ್ಯೆ ಹತ್ತಿರವಾದಾಗ ಕತ್ತರಿಸಬಾರದೆಂದು, ಹಾಗೇ ಕತ್ತರಿಸಿದಲ್ಲಿ ಅದು ಸರಿಯಾಗಿ ಪುನಃ ಬೆಳೆಯಲಾರದೆಂದು ಹೇಳಲಾಗಿತ್ತು. ಅನೇಕ ಸಂಶೋಧನೆಗಳು ಗೋಧಿ ಗಿಡಗಳು ಹುಣ್ಣಿಮೆಯ ಅವಧಿಯಲ್ಲಿ ವೇಗವಾಗಿ ಬೆಳೆಯುವುದೆಂದೂ, ಹುಣ್ಣಿಮೆಯ ಒಂದೆರಡು ದಿನಗಳ ಹಿಂದೆ ಬಿತ್ತಿದ ಜೋಳ ಚೆನ್ನಾಗಿ ಬೆಳೆಯುವುದೆಂದೂ ಸಾಧಿಸಿ ತೋರಿಸಿವೆ.

ಅನೇಕ ಪೂಜೆಗಳಲ್ಲಿ ಒಂಬತ್ತು ಗ್ರಹಗಳನ್ನು, ಒಂಭತ್ತು ಧಾನ್ಯಗಳಾಗಿ ಗುರುತಿಸಿ ಆರಾಧಿಸುತ್ತಾರೆ. ಈ ಒಂಬತ್ತು ಧಾನ್ಯಗಳು ನಮ್ಮ ಸಮತೋಲನ ಆಹಾರದಲ್ಲಿ ಅಗತ್ಯವಾದ ಪೋಷಕಾಂಶಗಳನ್ನು ಒಳಗೊಂಡಿರುವುದು ಗಮನಾರ್ಹ ಈ ನವಧಾನ್ಯಗಳೆಂದರೆ ಗೋಧಿ, ಭತ್ತ, ಕಡಲೆ, ಉದ್ದು, ಹುರುಳಿ, ಅವರೆ, ತೊಗರಿ ಮತ್ತು ಎಳ್ಳು. ಮುಖ್ಯ ಆಹಾರಾಂಶಗಳಾದ ಪಿಷ್ಟ, ಸಸಾರಜನಕ, ಕೊಬ್ಬು ಇವುಗಳನ್ನು ಈ ನವಧಾನ್ಯಗಳು ಒಳಗೊಂಡಿರುವುದು ಒಂದು ಮುಖ್ಯ ಅಂಶವಾದರೆ, ಇನ್ನೊಂದು ಮುಖ್ಯ ಅಂಶ ಇವು ಮಿಶ್ರ ಬೇಸಾಯ ಪದ್ಧತಿಯನ್ನು, ನಿರಂತರ ಕೃಷಿಯನ್ನು ಪ್ರತಿಬಿಂಬಿಸುವುದು.

ಒಂಬತ್ತು ಆಹಾರಧಾನ್ಯಗಳಂತೆ, ಒಂಬತ್ತು ವೃಕ್ಷಗಳನ್ನು ಒಂಬತ್ತು ಗ್ರಹಗಳೆಂದು ಪರಿಗಣಿಸಿ ಆರಾಧಿಸಲಾಗುತ್ತಿತ್ತು. ಈ ಒಂಬತ್ತು ಸಸ್ಯಗಳನ್ನು ಗ್ರಹಗಳಾಗಿ ಆರಾಧಿಸುವ ಸೂತ್ರ ಹೀಗಿದೆ.

ಅರ್ಕಸಂ ಇದಂ ಆದಿತ್ಯಾಯ
ಪಲಾಶಗಂ ಸೋಮಾಯ
ಖದಿರಂ ಅಂಗಾರಕಾಯ
ಅಪಾಮಾರ್ಗಂ ಬುಧಾಯ
ಅಶ್ವಥ್ಥಂ ಬೃಹಸ್ಪತಯೇ
ಔದುಂಬರಾಗ ಶುಕ್ರಾಯ
ಶಮಿಗಂ ಶನೈಶ್ಚರಾಯ
ರಾಹುವೇ ದೂರ್ವಾಯ
ಕೇತುವೇ ಕುಶಾಯ

ಸೂರ್ಯ - ಎಕ್ಕ (*Calotropis gigartea*), ಚಂದ್ರ - ಮುತ್ತುಗ (*Butea Monosperma*), ಮಂಗಳ - ಕಗ್ಗಲಿ (*Acacia Catechu*), ಬುಧ - ಉತ್ತರಾಣಿ (*Achynanthes aspera*), ಗುರು - ಅರಳಿ (*Ficus religiosa*), ಶುಕ್ರ - ಅತ್ತಿ (*Ficus Glomrerata*), ಶನಿ - ಬನ್ನಿ (*Acaci Ferruginee*), ರಾಹು - ಗರಿಕೆ (*Cynodon dactylon*), ಕೇತು - ದರ್ಭೆ (*Erogrostis cynosunoides*)

ದೇವಾಲಯಗಳಲ್ಲಿ ವೃಕ್ಷಗಳನ್ನು ನೆಟ್ಟು ಅವಕ್ಕೆ ಬ್ರಹ್ಮ, ವಿಷ್ಣು, ಮಹೇಶ್ವರನ ಸ್ಥಾನ ಕೊಟ್ಟು ಆರಾಧಿಸುತ್ತಾರೆ. ಇಂತಹ ಆರಾಧನ ಶ್ಲೋಕವೊಂದು ಹೀಗಿದೆ.

"ಮೂಲತೋ ಬ್ರಹ್ಮ ರೂಪಾಯ
ಮಧ್ಯತೋ ವಿಷ್ಣು ರೂಪಾಯ
ಅಗ್ರತೋ ಶಿವರೂಪಾಯ
ವೃಕ್ಷ ರಾಜಾಯ ತೇ ನಮಃ"

ವೇದಕಾಲದಲ್ಲಿ ಪಂಚವಟಿ ಎಂದರೆ ಐದು ವೃಕ್ಷಗಳು ಇರುವ ಜಾಗವನ್ನು ಧ್ಯಾನ, ತಪಸ್ಸು, ಸಾಧನೆಗಳಿಗೆ ಅತ್ಯಂತ ಶ್ರೇಷ್ಠ ಸ್ಥಾನ ಎಂದು ಪರಿಗಣಿಸುತ್ತಿದ್ದರು. ಈ ಐದು ವೃಕ್ಷಗಳು ಹಾಗು ಅವನ್ನು ನೆಡತಕ್ಕ ಸ್ಥಳಗಳನ್ನು ಹೀಗೆ ಸೂಚಿಸಲಾಗಿದೆ.

ಪೂರ್ವಕ್ಕೆ – ಅರಳಿ, ದಕ್ಷಿಣಕ್ಕೆ – ನೆಲ್ಲಿ
ಪಶ್ಚಿಮಕ್ಕೆ – ಆಲ. ಈಶಾನ್ಯಕ್ಕೆ – ಅಶೋಕ
ಉತ್ತರಕ್ಕೆ – ಬಿಲ್ವಪತ್ರೆ

ಜೀವವೈವಿಧ್ಯವನ್ನು ನವಧಾನ್ಯ, ನವವೃಕ್ಷಗಳಾಗಿ ಗುರುತಿಸಿದ್ದೇ ಅಲ್ಲದೆ, ಸೃಷ್ಟಿಯ ಮೂಲವಾದ ಆದಿಶಕ್ತಿಯ ರೂಪವನ್ನೂ ನವದುರ್ಗೆಯರಾಗಿ ಕಂಡು ಪೂಜಿಸಿದ್ದಾರೆ ನಮ್ಮ ಪುರಾತನರು. ಅಷ್ಟೇ ಅಲ್ಲ 'ನವಪತ್ರ' ಅರ್ಥಾತ್ ಒಂಭತ್ತು ಸಸ್ಯಗಳ ಎಲೆಗಳನ್ನು ಈ ದೇವಿಯರ ಆರಾಧನೆಗೆ ಉಪಯೋಗಿಸುತ್ತಾರೆ.

ಹಿತ್ತಲ ಗಿಡದ ವ್ಯಕ್ತಿ :

ಯಲ್ಲಪ್ಪರೆಡ್ಡಿಗೆ ಪಾವನಾ ಪರಿಸರ ಪ್ರಶಸ್ತಿ

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ನಿಷ್ಠೆ, ಪ್ರಾಮಾಣಿಕ ಸೇವೆಯಿಂದ ಹೆಸರು ಪಡೆದ ಶ್ರೀ ಯಲ್ಲಪ್ಪರೆಡ್ಡಿಯವರು, ಅರಣ್ಯ ಸಂವರ್ಧನೆಯನ್ನು ಸಂಸ್ಕೃತಿ, ಪರಂಪರೆಗಳ ಸಂರಕ್ಷಣೆಯ ಜೊತೆಗೆ ಕೊಂಡಿ ಹಾಕಲು ಪ್ರಯತ್ನಿಸಿ ರಾಜ್ಯದ ಅನೇಕ ಕಡೆ ಪವಿತ್ರವನ, ನಕ್ಷತ್ರ ವನ, ಮೂಲಿಕಾ ವನಗಳಂತಹ ಅನನ್ಯ ಪ್ರಯೋಗಗಳನ್ನು ನಡೆಸಿದರು. ಸರಕಾರಿ ಸೇವೆಯಲ್ಲಿದ್ದರೂ, ಮಾತು, ಕೃತಿ, ಬರವಣಿಗೆಗಳ ಮೂಲಕ ಜನಜಾಗೃತಿಯಲ್ಲಿ ತೊಡಗಿದರು. ರಾಜ್ಯ ಸರ್ಕಾರದ ವಿಜ್ಞಾನ ಮತ್ತು ಪರಿಸರ ಇಲಾಖೆಯ ಕಾರ್ಯದರ್ಶಿಯಾಗಿ, ಮಾಲಿನ್ಯ ನಿಯಂತ್ರಣ ಮಂಡಲಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ರೆಡ್ಡಿಯವರು, ಕೊಜೆಂಟ್ರಿಕ್ಸ್ ಯೋಜನೆಯ ಸ್ಥಾಪನೆಯಲ್ಲಿ ಸರ್ಕಾರ ತೋರಿಸಿದ ತುರಾತುರಿಯ ವಿರುದ್ಧ, ಅದರಿಂದ ಪರಿಸರದ ಮೇಲಾಗುವ ದುಷ್ಪರಿಣಾಮದ ವಿರುದ್ಧ ನಿರ್ಭೀತಿಯಿಂದ ದನಿ ಎತ್ತಿ, ಖಂಡಿಸಿ, ತ್ಯಾಗ ಪತ್ರ ನೀಡಿ ಹೊರಬಂದರು. ಶ್ರೀ ಯಲ್ಲಪ್ಪರೆಡ್ಡಿಗೆ, ಸ್ವಾತಂತ್ರ್ಯಯೋಧ ದಿ. ಬಕ್ಕೆಮನೆ ನಾರಾಯಣ ಹೆಗಡೆ ಮತ್ತು ಪಾರ್ವತಿ ಹೆಗಡೆ ದಂಪತಿಗಳ ನೆನಪಿನ, ಪಾವನಾ ಪರಿಸರ ಪ್ರಶಸ್ತಿಯನ್ನು ಜೂನ್ ೯, ೧೯೯೬ ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನೀಡಿ ಗೌರವಿಸಲಾಯಿತು.

ಪುಸ್ತಕ ಅವಲೋಕನ :

ಜನೋಪಯೋಗಿ ಸಸ್ಯ ಸಂಪತ್ತು

ಲೇಖಕರು. ಇ. ವಿಠಲರಾವ್, ಕಿನ್ಯ ದ.ಕ.

ಕರ್ನಾಟಕ ಅರಣ್ಯ ಇಲಾಖೆಯು ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ (ಜೆ.ಎಫ್.ಪಿ.ಎಂ.) ಎಂಬ ಹೊಸ ಕಾರ್ಯ ಯೋಜನೆ ಜಾರಿಗೆ ತಂದಿರುವ ಸಂದರ್ಭದಲ್ಲಿ ಅರಣ್ಯ ಇಲಾಖೆಯು ಗ್ರಾಮಸ್ಥರ ಸಹಕಾರದಿಂದ 'ವೈವಿಧ್ಯಮಯ ಅರಣ್ಯ' ಬೆಳೆಸಲು ಬೇಕಾದ ಮರಗಳಾವುವು, ಈ ಮರಗಳಿಂದ ಉಪಯೋಗಗಳೇನು ಮುಂತಾದುವನ್ನು ತಿಳಿಸುವ ಇ. ವಿಠಲರಾವ್‌ರವರ "ಜನೋಪಯೋಗಿ ಸಸ್ಯ ಸಂಪತ್ತು" ಎಂಬ ಕಿರು ಹೊತ್ತಿಗೆ ಸಮಯೋಚಿತ. ಪ್ರಕೃತಿಯ ನಿಯಮಗಳನ್ನು ಹೆಚ್ಚಾಗಿ ಸ್ವಂತ ಅನುಭವದ ಆಧಾರದ ಮೇಲೆ ಸರಳವಾದ ಶೈಲಿಯಲ್ಲಿ ಸಾಮಾನ್ಯ ಗ್ರಾಮಾಂತರ ಜನರಿಗೆ ಅರ್ಥವಾಗುವಂತೆ ವಿವರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಲೇಖಕರು ತಿಳಿಸಿರುವಂತೆ, ಬಹು ಉಪಯೋಗಿ ಮರಗಳಿರುವಂತಹ ವೈವಿಧ್ಯಮಯ ಕಾಡು ಬೆಳೆಸುವುದರಿಂದ ಗ್ರಾಮೋದ್ಯೋಗಗಳಿಗೆ, ಸಣ್ಣ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಗ್ರಾಮದ ಜನರಿಗೆ ಬಿಡುವಿನ ವೇಳೆಯಲ್ಲಿ ಉದ್ಯೋಗ ಕಲ್ಪಿಸಲು ನೆರವಾಗುತ್ತದೆ. ಅಲ್ಲದೆ, ವೈವಿಧ್ಯಮಯ ಅಥವಾ ಮಿಶ್ರಕಾಡನ್ನು ಬೆಳೆಸುವುದರಿಂದ ಕೃಷಿ ಉಪಕರಣಗಳಿಗೆ, ಔಷಧಿ, ಗೊಬ್ಬರ, ನಾರು, ಹಣ್ಣುಗಳು, ಜೇನು ಮುಂತಾದ ವೈವಿಧ್ಯಮಯ ಪದಾರ್ಥಗಳು, ಒಂದಲ್ಲ ಇನ್ನೊಂದು ವರ್ಷಪೂರ್ತಿ ದೊರೆಯುವುದಲ್ಲದೆ, ಪ್ರಾಣಿ ಪಕ್ಷಿ ಕೀಟಗಳಿಗೂ ಆಶ್ರಯವಾಗಿ, ಫಸಲು ಅಧಿಕವಾಗಲು, ಹಾನಿಕಾರಕ ಕ್ರಿಮಿ ಕೀಟಗಳನ್ನು ನಿಯಂತ್ರಿಸಲು ನೆರವಾಗುತ್ತದೆ ಎಂಬುದು ದಿಟ. ಆದ್ದರಿಂದ ಪ್ರಕೃತಿಯಲ್ಲಿ ಕಾಣುವಂತ ಸ್ಥಳೀಯ ನೈಜ ಕಾಡಿನ ರಚನೆಯನ್ನು ಮಾದರಿಯಾಗಿಟ್ಟುಕೊಂಡು ಗ್ರಾಮಗಳಲ್ಲಿ ಕಾಡುಬೆಳೆಸಬೇಕೆಂಬುದು ಸಮಂಜಸ ಮತ್ತು ಅರ್ಥಪೂರ್ಣ.

ಈ ಕೈಪಿಡಿಯಲ್ಲಿ 289 ಗಿಡಮರಗಳ ಪಟ್ಟಿಯನ್ನೇ ಕೊಡಲಾಗಿದೆ. ಇವೆಲ್ಲವನ್ನೂ ಎಲ್ಲಾ ಸ್ಥಳಗಳಲ್ಲಿಯೂ ಬೆಳೆಸಲು ಸಾಧ್ಯವಾಗದು. ಮಲೆನಾಡಿನಲ್ಲಿ, ಬೆಟ್ಟದ ತಪ್ಪಲುಗಳಲ್ಲಿ, ಬಯಲುಸೀಮೆಯಲ್ಲಿ ಯಾವ ಯಾವ ಗಿಡಮರಗಳನ್ನು ಮಿಶ್ರಮಾಡಿ ವೈವಿಧ್ಯಮಯ ಕಾಡನ್ನೂ ಬೆಳೆಸಬಹುದೆಂಬುದನ್ನು ಪ್ರತ್ಯೇಕವಾಗಿ ಲೇಖಕರು ತಿಳಿಸಿದ್ದರೆ ಒಳಿತಿತ್ತು. ಕೋಷ್ಟಕದಲ್ಲಿ 'ಕನ್ನಡದ ಹೆಸರಿಗೆ' ಬದಲಿಗೆ ಅನೇಕ ಹೆಸರುಗಳು ಸ್ಥಳೀಯವಾದ್ದರಿಂದ 'ಸ್ಥಳೀಯ' ಹೆಸರೆಂದು ಕೊಟ್ಟಿದ್ದರೆ ಸರಿಯಿತ್ತು. ಕನ್ನಡ ಮತ್ತು ಇಂಗ್ಲೀಷ್ ಹೆಸರುಗಳ ಪ್ರತ್ಯೇಕ ಪಟ್ಟಿಗಳನ್ನು ಕೊಡುವುದಕ್ಕೆ ಬದಲು ಒಂದೇ ಕೋಷ್ಟಕದಲ್ಲೇ ಅಳವಡಿಸಬಹುದಿತ್ತು. ಶೀರ್ಷಿಕೆಯಲ್ಲಿ 'ಹಳ್ಳಿಗಳಲ್ಲಿ' ಸುಲಭವಾಗಿ ಬೆಳೆಸಬಹುದಾದ ಸಸ್ಯ ಸಂಪತ್ತೆಂದು ಹೇಳಿದ್ದಾರೆ. ಬದಲಾಗಿ 'ಮಲೆನಾಡಿನಲ್ಲಿ' ಎಂದಿದ್ದರೆ ಹೆಚ್ಚು ಸೂಕ್ತವೆನಿಸುತ್ತಿತ್ತು. ಏಕೆಂದರೆ ಪಟ್ಟಿಯಲ್ಲಿ ಸೇರಿಸಿರುವ ಅನೇಕ ಮರಗಳು ಮಲೆನಾಡಿನವು. ದಕ್ಷಿಣ ಅಭಿಮುಖವಾದ ಪದವು ಪ್ರದೇಶದಲ್ಲಿ ಎತ್ತರದ ಮೋಪಿನ ಮರಗಳನ್ನು ಬೆಳೆಸುವುದು ಪ್ರಯಾಸಕರವೆಂಬುದು ಮತ್ತೊಂದು ಗಮನಾರ್ಹ ಅಂಶ. ಮರಬೆಳೆಗಾರರು ಇದನ್ನೂ ಗಮನದಲ್ಲಿಟ್ಟುಕೊಂಡು ಆದಷ್ಟೂ ಉತ್ತರ ಮತ್ತು ಪೂರ್ವ ಅಭಿಮುಖದ ಪದವು ಪ್ರದೇಶದಲ್ಲಿ ಮೋಪಿನ ಮರಗಳನ್ನು ಬೆಳೆಸಬಹುದು. ಇದಕ್ಕೆ ದಕ್ಷಿಣದ ತಪ್ಪಲುಗಳಲ್ಲಿ ಮರಗಳು ಗಾಳಿಯ ಹೊಡೆತಕ್ಕೆ ಗುರಿಯಾಗುವುದಲ್ಲದೆ ಬಹುಶಃ ದಕ್ಷಿಣದ-ಪಶ್ಚಿಮದ ಬಿಸಿಲಿನ ಶಾಖಕ್ಕೂ ಮರುಗುತ್ತವೆ.

ಜೆ.ಎಫ್.ಪಿ.ಎಂ. ಅಡಿಯಲ್ಲಿ ಗ್ರಾಮಾರಣ್ಯ ಸಮಿತಿಗಳಿಗೆ ಈ ಕಿರುಹೊತ್ತಿಗೆ ಒಳ್ಳೆಯ ವಿಷಯ ಸೂಚಿಯಾಗಿದೆ. ಏಕ ಜಾತಿ ಮರಗಳು ಸಲ್ಲವೆಂದು ಹೇಳಿರುವುದು ಒಪ್ಪುವಂತಾದ್ದು. ಆದರೆ ಮಿಶ್ರಜಾತಿ ಅರಣ್ಯಬೆಳೆಸುವಾಗ ಸ್ಥಳೀಯ ಸ್ವಾಭಾವಿಕ ಅರಣ್ಯದ ಒಂದು ಮಾದರಿಯನ್ನು ಅನುಸರಿಸುವುದು ಸೂಕ್ತ. ಕೆಲವು ವೇಳೆ ಸೂರು ಮರಗಳನ್ನೂ (Shelterwood) ಬೆಳೆಸಿದಾಗ ಪಕ್ಕಿ ಪಕ್ಷಿಗಳಿಂದಲೇ ಅನೇಕ ಜಾತಿಯ ಸಸ್ಯಗಳು ತಾವಾಗಿಯೇ ಸೂರಿನಡಿಯಲ್ಲಿ ವೃದ್ಧಿಯಾಗುತ್ತವೆ. ಈ ಕಿರುಹೊತ್ತಿಗೆಯಲ್ಲಿನ 45 ಪುಟಗಳಲ್ಲಿನ 12 ಪುಟಗಳು (ಮರಗಳ ಇಂಗ್ಲೀಷ್ ಹೆಸರು ಮತ್ತು ಕುಟುಂಬದ ಪಟ್ಟಿ) ಗ್ರಾಮಸ್ಥರಿಗೆ ಅನವಶ್ಯಕವಾದರೂ ಉಳಿದ ಭಾಗವು - ಪ್ರಕೃತಿ ನಿಯಮಾನುಸಾರ ಅರಣ್ಯವೆಂದರೇನು, ನಾವು ಯಾವ ರೀತಿ ಅರಣ್ಯಾಭಿವೃದ್ಧಿ ಕಾರ್ಯಕ್ರಮ ಕೈಕೊಳ್ಳಬೇಕು ಎಂಬ ವಿಷಯಗಳನ್ನೂ ತಿಳಿಯಲೋಸುಗ ಪರಿಸರ ಕಾಳಜಿ ಇರುವಂತಹ ಪ್ರತಿಯೊಬ್ಬರೂ ಓದಲೇ ಬೇಕಾದುದಾಗಿದೆ.

ಡಾ. ಎ. ಭಾಸ್ಕರ್, ಸಹ ಪ್ರಾಧ್ಯಾಪಕರು,
ಅರಣ್ಯಶಾಸ್ತ್ರ ವಿಭಾಗ, ಕೃಷಿ ವಿ.ವಿ.ನಿಲಯ,
ಬೆಂಗಳೂರು.

ಪ್ರಕಾಶಕರು : ನಾಗರೀಕ ಸೇವಾ ಟ್ರಸ್ಟ್
ಗುರುವಾಯನಕೆರೆ, ದ.ಕ.

ಬೆಲೆ : ರೂ.10

ದೇಶೀಯ ಜ್ಞಾನ

ಅಡಿಕೆಯಲ್ಲಿ ಬಂಜೆತನ ನಿವಾರಣೆ

ಕೆಲವು ಅಡಿಕೆ ಮರಗಳು, ಬಹಳ ವರ್ಷ ವಯಸ್ಸಾಗಿದ್ದರೂ, ಫಲವನ್ನೇ ಕೊಡುತ್ತಿರುವುದಿಲ್ಲ. ಅಂತಹ ಮರಗಳಲ್ಲಿ ಇಳುವರಿಯನ್ನು ಪಡೆಯಲು, ಶಿರಸಿ ತಾಲೂಕಿನ ಶ್ರೀ ಮಧುಕೇಶ್ವರ ಹೆಗಡೆ ಮುಂಡಿಗೇಸರ ಇವರು ಅನುಸರಿಸಿದ, ಸೂಕ್ತ ಹಾಗು ಸರಳ ಚಿಕಿತ್ಸೆಯೊಂದು ಇಲ್ಲಿದೆ.

ಅವರು ಈ ಚಿಕಿತ್ಸೆಯನ್ನು ಎಂಟು ಮತ್ತು ಒಂಭತ್ತನೇ ಗಿಣ್ಣಿನ ಮಧ್ಯ ಇರುವ ಹೊರ ತೊಗಟೆಗೆ ಮಾಡುತ್ತಾರೆ. ಆ ಹೊರ ತೊಗಟೆಯನ್ನು, ಕೈ ಬೆರಳಿಗೆ ಉಂಗುರ ಹೇಗೋ ಆ ರೀತಿಯಲ್ಲಿ, ಕಾಂಡದ ಸುತ್ತ ಭರ್ಜಿ ಅಥವಾ ಉಳಿಯಿಂದ ಕೆತ್ತುತ್ತಾರೆ. ಕೆತ್ತುವಾಗ ಒಳ ಕಾಂಡಕ್ಕೆ ಹಾನಿಯಾಗದ ಹಾಗೆ ಎಚ್ಚರವಹಿಸುವುದು ಅತ್ಯಗತ್ಯ ಎಂದು ಒತ್ತಿ ಹೇಳುತ್ತಾರೆ. ಹೀಗೆ ಮಾಡಿದ ಮುಂದಿನ ವರ್ಷವೇ ಅಡಿಕೆ ಮರವು ಸಿಂಗಾರ ಹೊಡೆದು ಫಲ ನೀಡುವುದು ಎನ್ನುತ್ತಾರೆ.

ಗಿರೀಶ್ ಬಿ.ಎನ್. ಶಿವಮೊಗ್ಗ

ಗೋಬರ್ ಅನಿಲ ಹೆಚ್ಚಿಸಲು

ಸುಮಾರು 8-10 ಗೋಡಂಬಿ ಹಣ್ಣನ್ನು ಸಗಣಿಯ ಜೊತೆ ಗೋ ಅನಿಲ ಸ್ಥಾವರಕ್ಕೆ ಕಳುಹಿಸಿದರೆ ಅನಿಲ ಉತ್ಪಾದನೆ ರಾತ್ರೋರಾತ್ರಿ ಹೆಚ್ಚುತ್ತದೆ.

ಗೋ ಅನಿಲ ಸ್ಥಾವರದಿಂದ ಬರುವ ಸ್ಲರಿಯನ್ನು ಪುನಃ ಬಳಸುವುದರಿಂದ ಮತ್ತೊಂದು ಸ್ಥಾವರದಲ್ಲಿ ಮತ್ತಷ್ಟು ಅನಿಲ ಪಡೆಯಬಹುದು.

ನರಸಿಂಹ ಮೂರ್ತಿ, (ಶಿರಸಿ)

ಬೀಜ ಮತ್ತು ಕೊಂಬೆಗಳನ್ನು ಬೆಳೆಸುವ ಗುಟ್ಟು :

ಯಶಸ್ವಿಯಾಗಿ ಬೆಳೆಯುವುದಿಲ್ಲ ಎಂದು ಕೈಬಿಟ್ಟ ಹಲವಾರು ಬೀಜಗಳು ನೀರಿನಲ್ಲಿ 4 - 5 ದಿನಗಳು ನೆನೆಸಿಟ್ಟು ನೆಟ್ಟರೆ ಚೆನ್ನಾಗಿ ಮೊಳಕೆ ಬರುತ್ತವೆ. ಗಟ್ಟಿಯಾದ ಬೀಜಗಳನ್ನು ಖರ್ಜೂರ, ಅಂಟುವಾಳ ಇಂತಹವನ್ನು ಒಂದೆರಡು ವಾರಗಳೇ ನೆನಸಿಟ್ಟರೆ ಉತ್ತಮ. ನಾನು ಸುಮಾರು ಎಲ್ಲ ಬೀಜಗಳನ್ನೂ ನೆನೆಸಿಟ್ಟೇ ನೆಡುತ್ತೇನೆ - ಬಹಳ ನಾಜೂಕಾದ ಸೊಪ್ಪಿನ ತರಹದ್ದು ಬಿಟ್ಟು. ನೆನಸಿಟ್ಟ ಬೀಜಗಳು (ತೊಗರಿ, ಜೋಳ, ತರಕಾರಿ ಇತ್ಯಾದಿ) ಬೇಗ ಮೊಳಕೆ ಬರುತ್ತವೆ. ಮಣ್ಣಿನಲ್ಲಿ ಹಾಕಿ ಬೆಳೆಸುವುದಕ್ಕಿಂತ ಒಂದೆರಡು ವಾರಗಳು ಉಳಿಯುತ್ತವೆ. ದ್ವಿದಳ ಧಾನ್ಯಗಳನ್ನು ಅವುಗಳ ಹೊರ ಸಿಪ್ಪೆ ಒಡೆಯುವ ಮುನ್ನ ನೆಡಬೇಕು.

ಗಿಡಗಳ ರೆಂಬೆ ಕಡ್ಡಿಗಳು (ಹೂವು, ಗುಲಾಬಿ ಮತ್ಯಾವುದೇ ಆಗಲಿ) ನೀರಿನಲ್ಲಿ ನೆಡುವ ತುದಿಯನ್ನು ನೆನೆಸಿಟ್ಟು ನೆಟ್ಟರೆ ಬಾರದಿರುವ ಕಡ್ಡಿಗಳೂ ಚೆನ್ನಾಗಿ ಚಿಗುರುತ್ತವೆ, ಆದರೆ ಹಾಲಿರುವ ಕಡ್ಡಿ ಟೊಂಗೆಗಳನ್ನು ಮಾತ್ರ ಒಂದೇ ದಿನ ನೆನೆಸಿಡಿ ಹಾಗೇ ಬಹಳ ರಸ ತುಂಬಿರುವ ಉದಾಹರಣೆಗೆ ನುಗ್ಗೆ ಟೊಂಗೆಗಳನ್ನೂ ಹೆಚ್ಚು ನೀರಿನಲ್ಲಿ ಇಡಬಾರದು.

ಸಗಣಿ ಅಥವಾ ಗೊಬ್ಬರಾನಿಲದ ಸ್ಲರಿ ಗಿಡಗಳಿಗೆ ಹಾಕಿದಾಗ ಬಹಳ ಗೆದ್ದಲಿನ ತೊಂದರೆ ಇರುತ್ತಿತ್ತು. ಇದಕ್ಕೆ ಹೊಂಗೆ, ಸೀತಾಫಲ ಮತ್ತು / ಅಥವಾ ಬೇವಿನ ಎಲೆಗಳನ್ನು ಸೇರಿಸಿ ಹಾಕಿದರೆ ಗೆದ್ದಲು ಬರಲಿಲ್ಲ.

ಕೃಪಾ- ಬೆಂಗಳೂರು.

ಮಣ್ಣು ಸತ್ವಯುತವಾಗಬೇಕೆ ?

50 ಕೆ.ಜಿ. ದನದ ಸೆಗಣಿಗೆ. 1 ಕೆ.ಜಿ. ಆಕಳ ತುಪ್ಪ ಹಾಗೂ 1 ಕೆ.ಜಿ. ಜೇನುತುಪ್ಪವನ್ನು ಮಿಶ್ರಮಾಡಿ 1 ಎಕರಿಗೆ ಸತತವಾಗಿ 2-3 ವರ್ಷ ಹಾಕುತ್ತಿದ್ದಲ್ಲಿ (ವರ್ಷಕ್ಕೊಮ್ಮೆ) ಮಣ್ಣು ಫಲವತ್ತಾಗುತ್ತದೆ ಎಂಬುದು ಶ್ರೀ ಪುರುಷೋತ್ತಮ ರಾವ್, ತೀರ್ಥಹಳ್ಳಿ, ಇವರ ಅನುಭವ.

ಬಿ.ಎ. ಅನಿಲ್ ಕೌಶಿಕ್ ಶಿವಮೊಗ್ಗ

ಕತ್ತಾಳೆ ಗೊಬ್ಬರ

ಕತ್ತಾಳೆ (Agave) ಎಲೆಗಳನ್ನು ಕಡಿದು, ಮಣ್ಣಿನಲ್ಲಿ 45 ದಿನಗಳ ಕಾಲ ಹುಗಿದಿಟ್ಟರೆ, ಅದು ಒಳ್ಳೆಯ ಗೊಬ್ಬರವಾಗಿ ಮಾರ್ಪಾಡಾಗುತ್ತದೆ. ಇದು ನಮ್ಮ ತಾತನವರು ಹೇಳುತ್ತಿದ್ದ ವಿಷಯ.

ಶಾಂತಾ ಓಂಕಾರಯ್ಯ, ಬೆಂಗಳೂರು

ನಿಮ್ಮ ವಾಹನದ ರೇಡಿಯೇಟರ್ "ಶಾಖ" ಹಾರಿಯೆ ?

ವಾಹನದ ಒಳಅಂಗಾಗಗಳು ಹೆಚ್ಚು ಬಿಸಿಯಾಗದಂತೆ ಎಚ್ಚರವಹಿಸುವ, ನೀರು ಹೊತ್ತ ಸಾಧನ `ರೇಡಿಯೇಟರ್'.

ತುಂಬಿಸಿದ ನೀರು ಹನಿ ಹನಿಯಾಗಿ ನೆಲ ಮುಟ್ಟುತ್ತಿದ್ದರೆ....... ಅದೂ ಪ್ರಯಾಣದ ಮಧ್ಯದಲ್ಲಿ. ಗಮನಕ್ಕೆ ಬಂತು, ರೇಡಿಯೇಟರ್ ತೂತು. ಅಲ್ಲಲ್ಲಿ ನೀರು ತುಂಬಿಸಿ ವಾಹನವನ್ನು ಹುರಿದುಂಬಿಸಿ ಊರೊಂದಕ್ಕೆ ತಂದಾಯಿತು.

ಛೇ ! ಅಂದು ಭಾನುವಾರ. ಅದೃಷ್ಟಕ್ಕೆ, ಮೆಕಾನಿಕ್ ಸಿಕ್ಕ. ರಜೆಯ ಕಾರಣ ಬೇಕಾದ ಸಲಕರಣೆಗಳಾವುದು ಆತನಿಗೆ ಸಿಗುವಂತಿರಲಿಲ್ಲ.

ಮೆಕಾನಿಕ್‌ಗೆ ಏನೆನಿಸಿತೋ ಬಾಳೆಕಾಯಿ ತರಲು ಹೇಳಿದ. ಆ ಬಾಳೆಕಾಯಿಯನ್ನು ತುಂಡರಿಸಿದಾಗ ಬರುವ ಹಾಲಿನಂತಹ ದ್ರವವನ್ನು ತೂತಿಗೆ ನೆಕ್ಕಿಸಿದ. "ಸ್ವಾಮಿ, ಹೋಗಿ ಬನ್ನಿ. ಆಕಸ್ಮಿಕವಾಗಿ ಮತ್ತೆ ಸೋರುವುದು ಆರಂಭವಾದರೆ, ಈ ಬಾಳೆಕಾಯಿ ಉಪಯೋಗಿಸಿ" ಎನ್ನುತ್ತಾ ಬಾಳೆಕಾಯಿಯ ತಾಂಬೂಲ ಕೈಗಿತ್ತ. 500 ಕಿ.ಮೀ. ಪ್ರಯಾಣ ಮಾಡಿದರೂ ರೇಡಿಯೇಟರ್ `ಅಳದೆ' ಇದ್ದಾಗ ಪಿರಿಯಾಪಟ್ಟಣದ ಆತನ ಬಗ್ಗೆ ಗೌರವ ಹೆಚ್ಚುವುದರ ಜೊತೆಗೆ ಹೆಸರನ್ನು ಕೇಳದೆ ಬಂದದ್ದಕ್ಕೆ ಪಶ್ಚಾತಾಪ ಆಗಿತ್ತು. ಇತ್ತ ಆತ ಕೊಟ್ಟ ಬಾಳೆಕಾಯಿ ಮಾಗಿತ್ತು. ಆತನ ಸರಳ ಉಪಾಯದಷ್ಟೆ !

[ಬಾಳೆಕಾಯಿ, starch ನಿಂದ ಸಮೃದ್ಧ. ಬಿಸಿಯಾಗುವ ರೇಡಿಯೇಟರ್, starch ಅನ್ನು Dextrin ಆಗಿ ಪರಿವರ್ತಿಸ ಬಹುದೇನೊ. Dextrin ಉತ್ತಮವಾದ ಅಂಟು ಪದಾರ್ಥತಾನೆ ? Dextrin, ಮತ್ತು ಕಾಯಿ ಸೀಳಿದಾಗ ದೊರೆವ ಹಾಲಿನಂತಹ ದ್ರವ (Latex) ನಮ್ಮ ಪ್ರಮಾಣಕ್ಕೆ ಶುಭ ಕೋರಿರಬೇಕು !]

ಡಾ ಸಿ.ಎ. ಶ್ರೀನಿವಾಸ ಮೂರ್ತಿ

ಕೃಷಿ ವಿ.ವಿ.ನಿಲಯ

ಹೊರರಾಜ್ಯಗಳಿಂದ

ಅಸ್ಸಾಂ ರಾಜ್ಯದಿಂದ

1. ನಿಂಬೆ ಗಿಡದ ಹುಳುವಿನ ಹತೋಟಿ

ಮೀನು ತೊಳೆದ ನೀರನ್ನು ನಿಂಬೆ ಗಿಡದ ಮೇಲೆ ಎಸೆಯುತ್ತಾರೆ, ಮೀನಿನ ಕಟು ವಾಸನೆ ನಿಂಬೆ ಗಿಡಕ್ಕೆ ಕಾಟ ಕೊಡುವ ಹುಳುವನ್ನು ಓಡಿಸುತ್ತದೆ ಎನ್ನುತ್ತಾರೆ ಅಲ್ಲಿನ ಜನ.

2. ಭತ್ತದಲ್ಲಿ ಕೀಟ ನಿಯಂತ್ರಣ

ಅಸ್ಸಾಂ ರಾಜ್ಯದ ಕೆಲವು ಪ್ರಾಂತ್ಯದಲ್ಲಿ ಚಕ್ಕೋತ *(Citrus grandis)* ಸಿಪ್ಪೆಯನ್ನು ಪುಡಿಮಾಡಿ ಭತ್ತದ ಗದ್ದೆಯ ನೀರಿಗೆ ಹರಡುತ್ತಾರೆ. ಸಿಪ್ಪೆಯಲ್ಲಿನ ಕಹಿ ಅಂಶ ಕೀಟಗಳನ್ನು ಗದ್ದೆಯಿಂದ ಓಡಿಸುತ್ತದೆ ಎಂಬ ನಂಬಿಕೆ ಜನರದ್ದು.

3. ಬೀಜದ ಮೊಳಕೆ

ಹೀರೆಯಂತಹ ಗಟ್ಟಿ ಬೀಜ ಸಿಪ್ಪೆಯನ್ನು ಹೊಂದಿರುವ ಬೀಜಗಳು ಮೊಳಕೆಯೊಡೆಯಲು ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಇದನ್ನು ಕಡಿಮೆ ಮಾಡಲು ಅಲ್ಲಿನ ಜನರು ಉಪಾಯ ಹುಡುಕಿದ್ದು ಬಾಳೆ ಗಿಡದ ಕಾಂಡದಲ್ಲಿ. ಇದಕ್ಕೆ ಅರ್ಧ ಅಥವಾ ಒಂದು ಅಡಿ ಉದ್ದದ ಕಾಂಡವನ್ನು ಕತ್ತರಿಸಿಕೊಳ್ಳುತ್ತಾರೆ. ಕಾಂಡದ ಒಂದು ಪದರದ ಮೇಲ್ಭಾಗವನ್ನು ಉದ್ದವಾಗಿ ಸಿಗಿದು ಮೇಲೆತ್ತಿ ಬೀಜವನ್ನು ಅದರೊಳಗೆ ಹುಗಿದಿಟ್ಟು ಮತ್ತೆ ಮುಚ್ಚುತ್ತಾರೆ. ಮೊದಲೇ ಸಿದ್ಧವಾಗಿಟ್ಟ ಹೊಂಡದಲ್ಲಿ ಇಂತಹ ತುಂಡುಗಳನ್ನು ಹುಗಿದು ಮುಚ್ಚುತ್ತಾರೆ. ಕಾಂಡದಲ್ಲಿನ ನೀರಿನ ಅಂಶ ಬೀಜಕ್ಕೆ ಸತತವಾಗಿ ನೀರುಣಿಸಿ, ಮೆದುವಾಗಿ ಮೊಳಕೆಯೊಡೆಯಲು ನೆರವಾಗುತ್ತದೆ.

ಒರಿಸ್ಸಾ ರಾಜ್ಯದಿಂದ

1. ತೇಗದ ಬೀಜದ ಮೊಳಕೆ :

ಅ. ಬೀಜವನ್ನು ಒಂದು ಬಟ್ಟೆಯಲ್ಲಿ ಸುತ್ತಿ ಸೆಗಣಿ ರಾಶಿಯಲ್ಲಿ ಮುಚ್ಚಿಡುತ್ತಾರೆ. ಬೀಜ ಬೇಗನೆ ಮೊಳಕೆಯೊಡೆಯಲು ಇದು ನೆರವಾಗುತ್ತದೆ.

ಆ. ಹುತ್ತದೊಳಗೆ ಬಟ್ಟೆಯಲ್ಲಿ ಕಟ್ಟಿದ ಬೀಜಗಳನ್ನು ಹಾಕಿಡುತ್ತಾರೆ. ಬೀಜವನ್ನು ಕೆರೆಯುವ ಹುಳುಗಳು ಬೀಜ ಮೊಳಕೆಯೊಡೆಯಲು ಪರೋಕ್ಷವಾಗಿ ನೆರವಾಗುತ್ತವೆ.

2. ಬೆಂಡೆ ಬೀಜದ ಮೊಳಕೆ :

ಬೀಜವನ್ನು ಬಟ್ಟೆಯಲ್ಲಿ ಸುತ್ತಿ ನೀರಿನಲ್ಲಿ ಮುಳುಗಿಸಿ ದಿನವಿಡೀ ಸೂರ್ಯನ ಬಿಸಿಲಿಗಿಡುತ್ತಾರೆ. ರಾತ್ರಿಯಾದೊಡನೆ ಆ ಬೀಜಗಳನ್ನು ಒಣ ಹುಲ್ಲಿನ ನಡುವೆ ಮುಚ್ಚಿಡುತ್ತಾರೆ. ಹೀಗೆ ಸಿದ್ಧಗೊಳಿಸಿದ ಬೀಜವನ್ನು ಮಾರನೇ ದಿನ ಬಿತ್ತಿದರೆ ಬೀಜ ಬೇಗನೆ ಮೊಳಕೆಯೊಡೆಯುವುದು ಎಂಬುದು ಅಲ್ಲಿನ ಜನರ ಅನುಭವ

3. ಬೀಜ ಸಂಗ್ರಹಣೆ :

ತೊಗರಿ ಬೀಜವನ್ನು ತೇವವಾದ ಕೆಂಪು ಮಣ್ಣಿನಲ್ಲಿ ಕಲಸಿ ಒಣಗಿಸುವುದರಿಂದ 'ಹುಳು ಹುಪ್ಪಟೆಗಳ' ಬಾಧೆಯಿಲ್ಲದೆ ರಕ್ಷಿಸಬಹುದು.

4. ಭತ್ತದ ಗದ್ದೆಯಲ್ಲಿ ಸಸ್ಯ ಸಂರಕ್ಷಣೆ

ಅ. ಹೊಗೆಸೊಪ್ಪಿನ ಗಿಡದ ಕಾಂಡವನ್ನು ಸುಟ್ಟು ಭತ್ತದ ಗದ್ದೆಯಲ್ಲಿ ಹರಡುವುದರಿಂದ ಕೀಟ ನಿಯಂತ್ರಿಸಬಹುದು.

ಆ. ಶಿಸ್ಸು *(Dalbergia sissoo)* ಮರದ ತುಂಡುಗಳನ್ನು ಸುಟ್ಟು ಹೊಗೆ ಹಾಕುವುದರಿಂದ ಕೂಡಾ ಭತ್ತದ ಗದ್ದೆಯ ಕೀಟಗಳನ್ನು ಹತೋಟಿಯಲ್ಲಿಡಬಹುದು.

5. ಕಾಂಡ ಕೊರೆಯುವ ಹುಳುವಿಗೆ :

ಕಾಂಡ ಕೊರೆಯುವ ಹುಳುವಿನ ಕಾಟ ತಪ್ಪಿಸಲು ಕಾಂಡ ಕೊರೆದ ಜಾಗಕ್ಕೆ ಉಪ್ಪು ತುಂಬಿಸುತ್ತಾರೆ. ಇನ್ನು ಕೆಲವು ಪ್ರದೇಶಗಳಲ್ಲಿ ಟಾರು ಹಾಗೂ ಸೀಮೆಎಣ್ಣೆ (2:1) ಮಿಶ್ರಣವನ್ನು ಕಾಂಡ ಕೊರೆದ ಜಾಗಕ್ಕೆ ಲೇಪನ ಮಾಡುವುದರಿಂದ ಕೂಡಾ ಇದನ್ನು ನಿಯಂತ್ರಿಸಲಾಗುತ್ತದೆ.

ತಮಿಳು ನಾಡಿನಿಂದ

1. ಶೇಂಗಾ ಹೊಲದಲ್ಲಿ ಕೆಂಪು ತಲೆ ಕಂಬಳಿ ಹುಳುವಿನ ಹತೋಟಿ

ಹೊಲದ ಮೂರೂ ಪಕ್ಕದಲ್ಲಿ ಜನರು ನಿಂತು ಗಟ್ಟಿಯಾಗಿ ಶಂಖ ಊದುತ್ತಾರೆ. ನಾಲ್ಕನೇ ಮೂಲೆಯಿಂದ ಹೊರ ಹೊರಡುವ ಹುಳಗಳನ್ನು ಹಿಡಿದು ನಾಶಗೊಳಿಸುತ್ತಾರೆ.

2. ಸೊಯಾಬೀನ್ ಬೀಜದ ಮೊಳಕೆ :

ಚಿಗರೆ *(Albigia amara)* ಎಲೆಗಳನ್ನು ಪುಡಿ ಮಾಡಿ ಸುಮಾರು ಒಂದು ಕೆ.ಜಿ. ಸೊಯಾಬೀನ್ ಬೀಜಕ್ಕೆ 150 ಗ್ರಾಂ. ಎಲೆಯ ಪುಡಿ ಬೆರೆಸಿ ಬಿತ್ತುವುದರಿಂದ ಮೊಳಕೆಯ ಪ್ರಮಾಣ ಹೆಚ್ಚಾಗುತ್ತದೆ.

3. ಮೆಣಸಿನ ಗಿಡದ ಹೂವು ಉದುರುವುದನ್ನು ತಡೆಗಟ್ಟುವುದು :

ಇಟ್ಟಿಗೆ ಗೂಡಿನ ಬೂದಿಯನ್ನು ಸೆಗಣಿಯೊಂದಿಗೆ ಬೆರಸಿ ನೀರಿನಲ್ಲಿ ಸೇರಿಸಿ ತೆಳುಗೊಳಿಸಿ ಮೆಣಸಿನ ಗಿಡದ ಮೇಲೆ ಸಿಂಪಡಿಸುವುದರಿಂದ ಹೂವು ಉದುರುವುದನ್ನು ತಡೆಗಟ್ಟಬಹುದು.

4. ಭತ್ತದ ಗದ್ದೆಯಲ್ಲಿ ಎಲೆ ತಿನ್ನುವ ಹುಳುವಿನ ನಿಯಂತ್ರಣ :

ಭತ್ತ ನಾಟಿ ಮಾಡಿದ ಮೂವತ್ತು ದಿನಗಳ ನಂತರ ಪುಡಿಮಾಡಿ ಬೇವಿನ ಹಿಂಡಿಯನ್ನು ಗದ್ದೆಗೆ ಉದುರಿಸುವುದರಿಂದ ಎಲೆ ತಿನ್ನುವ ಹುಳುವನ್ನು ನಿಯಂತ್ರಿಸಬಹುದು.

5. ಬದನೆಯಲ್ಲಿ ಬೇರುಹುಳದ ನಿಯಂತ್ರಣ :

ಪುಡಿ ಮಾಡಿದ ಬೇವಿನ ಹಿಂಡಿಯನ್ನು ಬದನೆಕಾಯಿಯ ಗಿಡದ ಬುಡಕ್ಕೆ ಹಾಕುವುದರಿಂದ ಬೇರು ತಿನ್ನುವ ಹುಳು (Root grub)ವನ್ನು ಹತೋಟಿಯಲ್ಲಿಡಬಹುದು.

ಮೂಲ : ಹನಿ ಬೀ, ಸಂಚಿಕೆ 1, ಸಂಪುಟ 1

ಭಾಷಾಂತರ : ತೇಜಸ್ವಿನಿ

ಹಿತ್ತಲಗಿಡ ಸ್ಪರ್ಧೆ

ಹಿತ್ತಲಗಿಡಕ್ಕೆ ಕೃಷಿ, ಪಶುಪಾಲನೆ ಗ್ರಾಮೀಣ ಕಸುಬು, ಪರಿಸರ, ಪಕ್ಷಿಗಳ ಕುರಿತಾದ ಜನಪದ ಕಥೆ, ಲಾವಣಿ, ನಂಬಿಕೆ, ಹಾಡು, ಒಗಟು, ಗಾದೆಗಳನ್ನು ಬರೆದು ಕಳುಹಿಸಿರಿ. ಉತ್ತಮವಾದ ಮೊದಲು ಐದು ಬರಹಗಳಿಗೆ ಬೆಂಗಳೂರಿನ ಇಕ್ರಾ ಸಂಸ್ಥೆಯವರು ಪ್ರಕಟಿಸಿರುವ ಈ ಕೆಳಗಿನ ಮೂರು ಕನ್ನಡ ಪುಸ್ತಕಗಳನ್ನು ಬಹುಮಾನವಾಗಿ ನೀಡಲು ಆ ಸಂಸ್ಥೆಯವರು ಮುಂದೆ ಬಂದಿರುವರು.

ಪುಸ್ತಕಗಳು

೧. ಸಾವಯವ ಬೇಸಾಯ : ಒಂದು ಒಳನೋಟ ಲೇಖಕ ಎಸ್.ಎನ್. ಗೋಷ್
೨. ಕಾಂಪೋಸ್ಟ್ ಗೊಬ್ಬರ : ಕಲೆ ಮತ್ತು ವಿಜ್ಞಾನ
೩. ರಾಸಾಯನಿಕಗಳು ಕೊಲ್ಲುತ್ತವೆ : ಎಸ್.ಎನ್. ಗೋಶ್

ನಾಡಿ ವಿಜ್ಞಾನ- ಭಾರತೀಯ ನಾಟಿ ವೈದ್ಯ ಶಾಸ್ತ್ರ

ಜಿ.ಎಸ್. ಹೆಗಡೆ ಗೋದ್ಲ ಬೀಳ, ಸಿದ್ದಾಪುರ ತಾಲೂಕು, ಉ.ಕ. 581 355

ಆಧುನಿಕ ವೈದ್ಯ ಪದ್ಧತಿ ಬಳಕೆಯಲ್ಲಿ ಬರುವ ಮೊದಲು ಪ್ರಾಚೀನ ವೈದ್ಯಕೀಯದ ಚರಕ, ಸುಶ್ರುತ ವಾಗ್ಭಟಾದಿಗಳ ಕಾಲದಲ್ಲಿ ಭಾರತೀಯ ವೈದ್ಯಕೀಯ ಅತ್ಯುನ್ನತ ಮಟ್ಟದಲ್ಲಿತ್ತೆಂದು ತಿಳಿದುಬರುತ್ತದೆ. ಆಯುರ್ವೇದ ವೈದ್ಯಕೀಯದ ಮೂಲ ಗ್ರಂಥಗಳಾದ ಚರಕ ಸಂಹಿತೆ, ಸುಶ್ರುತ ಸಂಹಿತೆ, ವಾಗ್ಭಟರ ಅಷ್ಟಾಂಗ ಹೃದಯಗಳನ್ನೆಲ್ಲ ಅವಲೋಕಿಸಿದಾಗ ರೋಗ ನಿರ್ಧಾರದಲ್ಲಿ (ನಿಧಾನ) ಅಷ್ಟ ವಿಧಪರೀಕ್ಷೆ ತಿಳಿಸಿದ್ದಾರೆ. ಇದರಲ್ಲಿ ಮೊದಲಿನದೇ ನಾಡಿ ಪರೀಕ್ಷೆ. ಚಲನಾ ವ್ಯತ್ಯಯದ ಮೇಲಿನಿಂದ ತ್ರಿದೋಷಗಳನ್ನು ವಾತ, ಪಿತ್ತ, ಕಫ ಸ್ಥಿತಿಗಳನ್ನು ತಿಳಿದು ಚಿಕಿತ್ಸಿಸಲು ಸೂಚಿಸಿದ್ದಾರೆ. ಶಾರ್ಙ್ಗಧರನಿಂದ ಮುಂದೆ ಎಲ್ಲಾ ಗ್ರಂಥಗಳಲ್ಲಿ ನಾಡಿ ಪರೀಕ್ಷೆಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿದ್ದಾರೆ. ಆಯುರ್ವೇದ ಇತಿಹಾಸದಂತೆ ನಾಡಿ ವಿಜ್ಞಾನದ ಮೂಲ ಪುರುಷ ಶಾರ್ಙ್ಗಧರ ಎನ್ನಬಹುದಾಗಿದೆ. ಅಥರ್ವ ವೇದದಲ್ಲಿ ನಾಡಿ ಕುರಿತು ಉಲ್ಲೇಖ ಇದೆ ಎನ್ನಲಾಗಿದೆ.

ನಾಡಿ ವಿಜ್ಞಾನ ಗ್ರಂಥಾಧಾರಗಳಿಂದ ಕಲಿಯಬಹುದಾದ ವಿದ್ಯೆಯಲ್ಲ. ಗುರು ಉಪದೇಶ ಅಂದರೆ ಪ್ರತ್ಯಕ್ಷಜ್ಞಾನಾನುಭವದಿಂದ ಹಾಗೂ ಸತತಾಭ್ಯಾಸದಿಂದ ಕರಗತ ಮಾಡಿಕೊಳ್ಳಬೇಕಾದ ಒಂದು ಕಲೆ ಎಂಬ ಭಾವನೆ ಇದೆ. ಇದರಿಂದಾಗಿಯೇ ಪರಂಪರಾಗತ ವೈದ್ಯ ಮನೆತನದಲ್ಲಿ ಹರಿದು ಬಂದಿದೆ.

"ಜೀವಿ ಜೀವಿಸಿರುವುದನ್ನು ಯಥಾರ್ತವಾಗಿ ತಿಳಿಸುವಂಥ ನಾಡಿಯು ತೋಳಿನ ಕೊನೆ, ಹಸ್ತದ ಬುಡ ಭಾಗ, ಹೆಬ್ಬೆರಳಿಗಿಂತ ಸ್ವಲ್ಪ ಕೆಳಭಾಗದಲ್ಲಿರುತ್ತದೆ. ಅದರ ಸ್ವಾಭಾವಿಕವಾದ ಚಲನೆಯಿಂದ ದೇಹದ ಸುಖ ದುಃಖ ಈ ಎರಡರ ಸ್ಥಿತಿಯನ್ನು ನಾಡಿ ನಡೆ ಬಲ್ಲವರು ತಿಳಿಯುತ್ತಾರೆ" ಎನ್ನುವುದು ಮೊದಲ ಶ್ಲೋಕದ ತಾತ್ಪರ್ಯ. ನಾಡಿ ಜೀವ ಸಾಕ್ಷಿಯಾದುದರಿಂದ ಮತ್ತು ವೈದ್ಯಕೀಯ ಉಪಚಾರಕ್ಕೆ ಬೇಕಾಗುವ ಮಾಹಿತಿಯನ್ನು ವಾತ - ಪಿತ್ತ- ಕಫಗಳನ್ನು ತಿಳಿಸಿಕೊಡುವುದರಿಂದ ಅದರ ಸಂಪೂರ್ಣ ಜ್ಞಾನ ವೈದ್ಯನಾದವನಿಗೆ ಇರಬೇಕೆಂಬುದು ಶಾಸ್ತ್ರಕಾರನಾದ ಶ್ರೀ ಶಾರ್ಙ್ಗಧರ ದೇವನ ಅಭಿಪ್ರಾಯ. ಅನಂತರದ ಗ್ರಂಥಗಳೆಂದರೆ ಭಾವ ಪ್ರಕಾಶ, ಯೋಗರತ್ನಾಕರ, ಕಣಾಧಕೃತ, ನಾಡಿ ವಿಜ್ಞಾನ, ರಾವಣ ಕೃತ, ನಾಡಿ ಪರೀಕ್ಷಾ ಗ್ರಂಥಗಳು, ಈ ನಾಲ್ಕು ಗ್ರಂಥದಲ್ಲಿ ನಾಡಿ ಕುರಿತು ವಿವರಿಸಿದ ಮೂಲ ಶ್ಲೋಕಗಳನ್ನು ಸಂಗ್ರಹಿಸಲಾಗಿದೆ.

ನಾಡಿ ಪರೀಕ್ಷೆಯಿಂದ ರೋಗಿಯ ರೋಗದ ಸ್ಥಿತಿ ಗತಿ ಅಲ್ಲದೆ ಔಷಧಿಯ ಪರಿಣಾಮ ಹಾಗೂ ಸಾವಿನ ಕುರಿತು ನಿಖರವಾಗಿ ತಿಳಿಯಬಹುದೆಂಬುದು ಶಾಸ್ತ್ರಜ್ಞರ ಅಭಿಪ್ರಾಯ. ನಾಡಿ ನೋಡಿಯೇ ಈ ವ್ಯಕ್ತಿ ಇಂಥ ಆಹಾರ ಸೇವಿಸಿದ್ದಾನೆ, ಈ ವ್ಯಕ್ತಿಯ ಸಾವು ಸದ್ಯಕ್ಕಿಲ್ಲ, ನೀವು ಮಂಗಳ ಕಾರ್ಯ ಮಾಡಿತೊಂದರೆ ಇಲ್ಲ ಎಂಬಿತ್ಯಾದಿ ನಿಖರವಾಗಿ ತಿಳಿಸಿದ ಬಗ್ಗೆ ಸುದ್ದಿ ಹೇಳುವ ಹಿರಿಯರಿದ್ದಾರೆ. ಸುಮಾರು ೨-೩ ತಲೆ ಮಾರಿನ ಹಿಂದೆ ಕೂಡಾ ಈ ಜ್ಞಾನ ಹಿರಿಯರಲ್ಲಿ ಇರುವುದು ಕೇಳಿಬರುತ್ತದೆ. ನಾಡಿ ಚಲನೆಯ ಸೂಕ್ಷ್ಮ ಅವಲೋಕನ, ಏಕಾಗ್ರತೆ ಸಾಧಿಸುವುದು ಅಷ್ಟು ಸುಲಭದ ಮಾತಲ್ಲ. ಇಂದಿನ ಅವಸರದ ಬದುಕಿನಲ್ಲಿ ನಾಡಿ ನಿರ್ಣಯದ ಎಲ್ಲಾ ಅಂಶ ಗಮನದಲ್ಲಿರಿಸಿಕೊಂಡು ತರ್ಕಿಸಿ ನಿರ್ಧರಿಸುವುದು ಕಷ್ಟಸಾಧ್ಯವಾಗಿದೆ. ಇದರಿಂದಲೇ ಈ ಪರೀಕ್ಷೆ ವಿಧಾನ ಇಲ್ಲವಾಗಿದೆ ಎಂದು ಯಾರೂ ತಿಳಿಯಬಹುದಾಗಿದೆ. ವೈದ್ಯಕೀಯದ ಜೀವಾಳದಂತಿರುವ ನಾಡೀ ವಿಜ್ಞಾನ, ಸಂಶೋಧನೆಗೆ ಒಳಪಟ್ಟು, ಯಾಂತ್ರೀಕೃತಗೊಂಡಲ್ಲಿ ಪೂರ್ವಜರ ಶ್ರಮಕ್ಕೊಂದು ಸಾರ್ಥಕತೆ ಬಂದೀತು.

ಕೃಪೆ : ಮಂಜುವಾಣಿ, ಮೇ 1995

ಸ್ವಅನುಭವದ ಕೆಲವು ಔಷಧಿ ಉಪಚಾರಗಳು

ಚೆನ್ನ ಬಸವರೆಡ್ಡಿ ಪಂಚೇರಾಳ ಶಿವಾ ಪ್ರಿಂಟರ್ಸ್
ಗಂಜ ರಸ್ತೆ ರಾಯಚೂರು

ಮಲೇರಿಯಾ ಹಾಗೂ ಸಾಮಾನ್ಯ ಜ್ವರ

ಬೇವಿನ ಎಲೆ ಹಾಗೂ ನಾಲ್ಕೈದು ಕರಿ ಮೆಣಸಿನ ಕಾಳು ಮಿಶ್ರಣ ಸೇವಿಸುವುದರಿಂದ ಜ್ವರ ನಿಂತು ಮೈ ಪೂರ್ಣ ಬೆವರುವುದು. ಬೇವಿನ ಎಲೆ ಹಾಗು ಮೆಣಸಿನ ಪುಡಿಯ ಮಿಶ್ರಣದ ಗೋಲಿಯನ್ನು ಮಾಡಿ ಸೇವಿಸುವುದು, ಸರಳ ವಿಧಾನ. ಬೇವಿನ ಎಲೆಯ ವಿಷ ಸಹಿಸದವರು ಇದರ ಬದಲು ಈರುಳ್ಳಿ, ಎಸಾವಯವ ಕೃಷಿ ಅಥವಾ ಕುಂಡದಲ್ಲಿ ಬೆಳೆಸಿದ್ದರೆವಿ, ಜಜ್ಜಿ, ಕರಿಮೆಣಸಿನ ಪುಡಿ ಹಾಕಿ, ತಿನ್ನುವುದರಿಂದ ಮಲೇರಿಯಾ ಗುಣವಾಗುವುದು.

ದಂತ ಸಮಸ್ಯೆ

ಹತ್ತು ಮಿಲಿಗ್ರಾಂ ಶುದ್ಧೀಕರಿಸಿದ ಶೇಂಗಾ, ಎಳ್ಳು ಅಥವಾ ಸೂರ್ಯಕಾಂತಿ ಎಣ್ಣೆಯನ್ನು ಬಾಯಿಯಲ್ಲಿ ಹಾಕಿಕೊಂಡು 20 ನಿಮಿಷ ಬಾಯಿ ಮುಕ್ಕಳಿಸುವುದರಿಂದ ಬಾಯಿಯಲ್ಲಿ ಕ್ರಿಮಿಗಳು ಹೊರ ಹೋಗಿ, ಆರೋಗ್ಯ ಉಂಟಾಗುವುದು. ಹಲ್ಲು ಗಟ್ಟಿ ಯಾಗುವವು. ರಕ್ತ ಶುದ್ಧಿಯಾಗುವುದು,ಧೀರ್ಘಕಾಲದ ರೋಗಗಳು ಹಿಂದೆ ಸರಿಯುವುವು. ಎಣ್ಣೆ (ಪುಲ್ಲಿಂಗ್ ಮಾಡುವಾಗ) ಮುಕ್ಕಳಿಸುವಾಗ ನುಂಗಬಾರದು. ೨೦ ನಿಮಿಷಗಳ ನಂತರ ಅಂದರೆ, ಎಣ್ಣೆ ನೀರಾದ ನಂತರ ಯಾರು ತಿರುಗಾಡದ ಜಾಗದಲ್ಲಿ ಉಗುಳಬೇಕು. ಈ ಎಣ್ಣೆಯಲ್ಲಿ ಕ್ರಿಮಿಗಳು ವಿಷಕಾರಿ ವಸ್ತುಗಳು ಸಂಗ್ರಹವಾಗಿರುತ್ತವೆ.

ನೆಗಡಿ

- ತುಳಸಿ ಎಲೆಗಳನ್ನು ಒಂದು ಹಿಡಿಯಷ್ಟು (ಗಿಡಕ್ಕೆ ರಸಾಯನಿಕ ಗೊಬ್ಬರಗಳು ಇತರೆ ರಾಸಾಯನಿಕಗಳು ಸಂಪರ್ಕವಾಗಿರಬಾರದು), ತೆಗೆದುಕೊಂಡು ಮೂರು ಕಪ್ಪು ನೀರಿನಲ್ಲಿ ಹಾಕಿ ಬೆಲ್ಲದ ಜೊತೆಗೆ ಕುದಿಸಬೇಕು. ಒಂದು ಕಪ್ಪಿನಷ್ಟು ಕಶಾಯ ಆದಾಗ ಅದನ್ನು ಹಾಲಿನ ಜೊತೆಗೆ ಅಥವಾ ಹಾಗೇ ಉಪಯೋಗಿಸಬಹುದು.
- ತುಳಸಿಗೆ ಕರಿಮೆಣಸು ಮಿಶ್ರಮಾಡಿ ಕಶಾಯ ಮಾಡಿದರೂ ನೆಗಡಿ ಕಡೆಮೆಯಾಗುತ್ತದೆ.
- ತುಳಸಿ, ಹಸಿ ಶುಂಠಿಯ ಮಿಶ್ರಣದ ಕಶಾಯ ನೆಗಡಿ ಕಡೆಮ ಮಾಡುತ್ತದೆ.
- ದಿನ ನಿತ್ಯ ತುಳಸಿಯನ್ನು ಸ್ವಲ್ಪ ತೆಗೆದುಕೊಳ್ಳುವುದರಿಂದ ನೆಗಡಿ ಸುಳಿಯುವುದಿಲ್ಲ.

ಕೆಮ್ಮು

ಬೆಳ್ಳುಳ್ಳಿ ಬೆಲ್ಲದ ಮಿಶ್ರಣದಿಂದ ಕೆಮ್ಮು ನಿವಾರಣೆಯಾಗುತ್ತದೆ. ತುಳಸಿ ನಿತ್ಯ ಸೇವಿಸುವುದರಿಂದ ಕೆಮ್ಮು ಬಾರದು.

ಹಲ್ಲು ಸ್ವಚ್ಛಗೊಳಿಸಲು

ಬೇವಿನ ಕಡ್ಡಿಯಿಂದ ಹಲ್ಲು ಉಜ್ಜುವ ಪದ್ಧತಿ ಹಳ್ಳಿ ಕಡೆ ಪ್ರಚಲಿತವಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಪ್ರತಿದಿನ ಮಾವಿನ ಎಲೆಗಳನ್ನು (ಒಂದು ಬಾರಿಗೆ 3 ಎಲೆ ಸಾಕು) ಅಗಿದು ರಸವನ್ನು ಒಂದೆರಡು ನಿಮಿಷ ಬಾಯಿಯಲ್ಲೇ ಇರಿಸಿಕೊಂಡು ನಂತರ ಉಗಿದು ಬಾಯಿ ತೊಳೆದುಕೊಂಡರೆ, ಹಲ್ಲುಗಳು ಹುಳುಕಾಗುವುದಿಲ್ಲ ಎಂಬ ವಿಷಯ ಬಹಳ ಜನರಿಗೆ ತಿಳಿದಿಲ್ಲ. ಹೀಗೆ ಮಾಡುವುದರಿಂದ ಹಲ್ಲು ಸೂಕ್ಷ್ಮವಾಗುವಿಕೆ, (Sensitive) ಕೂಡ ಇಲ್ಲವಾಗುತ್ತದೆ, ಬಾಯಿ ವಾಸನೆ ಬರುವುದೂ ದೂರವಾಗುತ್ತದೆ.

ಶಾಂತಾ ಓಂಕಾರಯ್ಯ, ಬೆಂಗಳೂರು

ಜೀವಚಾಲಕ ಸಾಗುವಳಿ (Biodynamic farming)

ಉಷಾಕಿರಣ್. ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು

ಒಂದು ತಿಳಿವಳಿಕೆ ಕಾರ್ಯಾಗಾರ

ಫೆಬ್ರವರಿ 21 ರಂದು ಬೆಳಿಗ್ಗೆ ನಾನು ವಿಶ್ವಪ್ರಜ್ಞ ಸಂಸ್ಥೆಯಲ್ಲಿ ಶ್ರೀ ವಿನಯ್ ಗುರೂಜಿಯವರನ್ನು ಭೇಟಿಮಾಡಬೇಕಾಗಿತ್ತು. ಆದರೆ ಅವರು ಆದಿನ ಇಕ್ರಾ ಬಳಗದವರು ನಡೆಸುತ್ತಿರುವ ಜೀವಚಾಲಕ ಸಾಗುವಳಿ ಕಾರ್ಯಾಗಾರದಲ್ಲಿ ಭಾಗವಹಿಸಲು ಹೋಗುತ್ತಿರುವುದರಿಂದ ನಾನು ಅವರನ್ನು ಅಲ್ಲಿಯೇ ಭೇಟಿಮಾಡಬಹುದೆಂದು ತಿಳಿಯಿತು. ಇಕ್ರಾ ಬಳಗದ ಬಾಬು, ವಾಸು ನನ್ನನ್ನು ಅವರ ಸಂಸ್ಥೆಗೆ ಹಲವಾರು ಬಾರಿ ಕರೆದಿದ್ದರು. ಆದ್ದರಿಂದ ನಾನು ಇದು ಒಳ್ಳೆಯ ಸಂದರ್ಭವೆಂದು ಆಸಕ್ತಿಯಿಂದಲೇ ಅಲ್ಲಿಗೆ ಹೋದೆ. ಕಾರ್ಯಾಗಾರ ನಡೆಯುವ ಸ್ಥಳ ಇಂದಿರಾನಗರವೆಂದು ಕೊಂಡಿದ್ದುದು ಬದಲಾಗಿ ಹೊಸೂರು ರಸ್ತೆಯ ಕ್ಲಾರೆಟ್ ನಿವಾಸವೆಂದು ತಿಳಿದು, ವಾಸು ಅವರೊಂದಿಗೆ ನಾನು ಅಲ್ಲಿಗೆ ಹೋದೆ. ಆದರೆ ವಿನಯ್ ಗುರೂಜಿಯವರಿಗೆ ಇತರ ಕಾರ್ಯಭಾರಗಳಿಂದ ಅಷ್ಟು ದೂರ ಬರುವುದು ಸಾಧ್ಯವಾಗಲಿಲ್ಲ.

10-30ಕ್ಕೆ ಕ್ಲಾರೆಟ್ ನಿವಾಸಕ್ಕೆ ಹೋದಾಗ ಪ್ರೊ. ಪೀಟರ್ ಪ್ರಾಕ್ಟರ್ ಅವರು ಜೀವಚಾಲಕ ಸಾಗುವಳಿಯ ಬಗ್ಗೆ ತಿಳಿಸುತ್ತಾ ಸಂಬಂಧಪಟ್ಟ ಛಾಯಚಿತ್ರಗಳನ್ನು ತೋರಿಸುತ್ತಿದ್ದರು. ಜೀವಚಾಲಕ ವಿಧಾನಗಳನ್ನು ಕೈಗೊಂಡ ಕ್ಷೇತ್ರಗಳಲ್ಲಿ ಸೋಯಾ ಅವರೆಯಂತಹ ಬೇರುಗಂಟು ದ್ವಿದಳ ಬೆಳೆಗಳ ಬೇರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೇರುಗಂಟುಗಳು ಮೂಡಿರುವುದನ್ನು ಹಾಗೂ ಹಸುವಿನ ಕೊಂಬಿನಲ್ಲಿ ಹಸುವಿನ ಸಗಣಿಯನ್ನು ಶೇಖರಿಸುವ ವಿಧಾನಗಳನ್ನು ಛಾಯಾಚಿತ್ರಗಳೊಂದಿಗೆ ವಿವರಿಸುತ್ತಿದ್ದರು. ಹಸುವಿನ ಸಗಣಿಯನ್ನು ಹಸುವಿನ ಕೊಂಬಿನಲ್ಲಿ ಶೇಖರಿಸುವುದರಿಂದ ಅದು ಕಾಸ್ಮಿಕ್ ಶಕ್ತಿಯನ್ನು ಹೀರಿಕೊಳ್ಳುವ ವಿಧಾನ ನನಗೆ ಕುತೂಹಲ ಕರವೆನ್ನಿಸಿತು. ಸೆಪ್ಟೆಂಬರ್‌ನಿಂದ ಮಾರ್ಚ್‌ವರೆಗೆ ಉತ್ತಮ ಗುಣಮಟ್ಟದ ಭೂಮಿಯಲ್ಲಿ ಸ್ವಲ್ಪವೇ ಆಳದಲ್ಲಿ ಈ ಸಗಣಿ ತುಂಬಿದ ಕೊಂಬುಗಳನ್ನು ಶೇಖರಿಸಿ ಇಡಬೇಕು. ಅನಂತರ ತೆಗೆದಾಗ ಅದಕ್ಕೆ ಒಂದು ಹದವಾದ ಗುಣವಿರುತ್ತದೆ. ಕಾಸ್ಮಿಕ್ ಶಕ್ತಿಯನ್ನು ಪಡೆದುಕೊಂಡು ಶಕ್ತಿಪೂರ್ಣವಾಗಿರುವ ಈ ಸಗಣಿಯನ್ನು ಕೇವಲ 25 ಗ್ರಾಂ ಪ್ರಮಾಣದಲ್ಲಿ 13 ಲೀಟರ್ ನೀರಿನಲ್ಲಿ ಬೆರೆಸಬೇಕು. ಬೆರೆಸುವುದಕ್ಕೂ ಒಂದು ವಿಶೇಷ ವಿಧಾನವಿದೆ. ಒಂದು ಸಾರಿ ಬಲ ಸುತ್ತು ತಿರುಗಿಸಿ ಕಲೆಸಬೇಕು ಹಾಗೂ ಇನ್ನೊಂದು ಸಾರಿ ಎಡಸುತ್ತು ತಿರುಗಿಸಿ ಕಲೆಸಬೇಕು. ಇದರಿಂದ ಅದರಲ್ಲಿ ವಿಶೇಷ ಪರಿಣಾಮ ಉಂಟಾಗುತ್ತದೆ. ಹೀಗೆ ತಯಾರಿಸಿದ ದ್ರಾವಣವನ್ನು ಒಂದು ಎಕರೆ ಭೂಮಿಗೆ ಸಿಂಪಡಿಸಲು ಸಾಕಾಗುತ್ತದೆ. ಇದರಿಂದ ಆ ಮಣ್ಣಿನಲ್ಲಿರುವ ಸೂಕ್ಷ್ಮಜೀವಿ ವರ್ಗದ ಸಂರಕ್ಷಣೆಗೆ ನೆರವಾಗಿ ಮಣ್ಣಿನ ಫಲವತ್ತತೆಯಲ್ಲಿ ಸುಧಾರಣೆಯಾಗುತ್ತದೆ. ಈ ವಿಧಾನವನ್ನು ಈಗಾಗಲೇ ಸಾವಯವ ಸಾಗುವಳಿ ನಡೆಸುತ್ತಿರುವವರು ಅನುಸರಿಸುತ್ತಿದ್ದಾರೆ. ಉತ್ತರ ಭಾರತದಲ್ಲಿ ಅದರಲ್ಲೂ ಇಂದೂರಿನಲ್ಲಿ ಇದು ವಿಶೇಷವಾಗಿ ಕಾರ್ಯಾಚರಣೆಯಲ್ಲಿದೆ.

ಸಣ್ಣ ಪ್ರಮಾಣದಲ್ಲಿ ವೈಯಕ್ತಿಕ ಆಸಕ್ತಿಯಿಂದ ಸ್ವತಃ ತಾವೇ ಸಾವಯವ ಸಾಗುವಳಿ ನಡೆಸಲು ಬಯಸುವವರಿಗೆ ಈ ಕಾರ್ಯಾಗಾರ ಆಸಕ್ತಿ ಪೂರ್ಣವೆನ್ನಿಸಿತು. ಬ್ಯಾಂಕುಗಳಂತಹ ಹಲವಾರು ಕೃಷಿಯೇತರ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ತಮ್ಮ ತೋಟಗಳಲ್ಲಿ ಅಥವಾ ಜಮೀನುಗಳಲ್ಲಿ ಈ ಸುಲಭ ವಿಧಾನಗಳನ್ನು ಅನುಸರಿಸಲು ಇದು ಪ್ರಾಯೋಗಿಕ ಅನುಭವಗಳನ್ನೂ ಸಹ ಒದಗಿಸಿತು. ಹಾಗೆ ಬಂದಿದ್ದ ಇಬ್ಬರು ಮಹಿಳಾ ಬ್ಯಾಂಕ್ ಅಧಿಕಾರಿಗಳು Slurry ಯನ್ನು ಉಪಯೋಗಿಸಿ ಸಾವಯವ ಗೊಬ್ಬರದ ರಾಶಿ ಸಿದ್ಧಪಡಿಸುವ ವಿಧಾನದ ಪ್ರಾತ್ಯಕ್ಷಿಕೆಯಲ್ಲಿ ತೀವ್ರ ಆಸಕ್ತಿಯಿಂದ ಪಾಲುಗೊಂಡರು. ನ್ಯೂಜಿಲ್ಯಾಂಡ್‌ನವರಾದ ಪ್ರೊ.ಪೀಟರ್ ಪ್ರಾಕ್ಟರ್ ಅವರಿಗೆ ಭಾರತದಲ್ಲಿ ಪ್ರಚಲಿತವಿರುವ ಹಲವು ಕುತೂಹಲಕರ ಉಪಯುಕ್ತ ಪದ್ಧತಿಗಳನ್ನು ನಮ್ಮಂತಹ ಆಧುನಿಕ ಭಾರತೀಯರಿಗೆ ಪುನಃ ತಿಳಿಸಿ ಹೇಳುವುದೆಂದರೆ ಸಂತೋಷದ ವಿಷಯ. ಮರದ ಸಣ್ಣ ಸಣ್ಣ ಹಸುರು ಕೊಂಬೆಗಳನ್ನು ಕಿತ್ತು ಸಾವಯವ ರಾಶಿಯ ಮಧ್ಯೆ ಮಧ್ಯೆ ಹಾಕುತ್ತಿದ್ದಾಗ ಅವರಿಗೆ ತಮ್ಮ ನ್ಯೂಜಿಲ್ಯಾಂಡಿನ ಗೆಳೆಯರೊಬ್ಬರು ಭಾರತಕ್ಕೆ ಹೋಗಿ ಮರಳಿ ಬಂದಾಗ ಹೆಚ್ಚು ಆರೋಗ್ಯಪೂರ್ಣವಾಗಿ ಮತ್ತು ಕಾಂತಿಯುಕ್ತವಾಗಿ ಕಾಣುತ್ತಿದ್ದ ಸಂಗತಿ ನೆನಪಿಗೆ ಬಂದಿತು. ಇದರ ರಹಸ್ಯವೇನು ಎಂದು ಕೇಳಿದಾಗ ಆ ಗೆಳೆಯರು ಭಾರತದಲ್ಲಿ ಆಗಾಗ ಬೇವಿನ ಮರದಡಿಯಲ್ಲಿ ಮಲಗುತ್ತಿದ್ದೆ, ಅದರ ಗಾಳಿಯನ್ನು ಸೇವಿಸಿದ್ದರ ಪರಿಣಾಮ ಇದು, ಭಾರತೀಯ ಕೃಷಿಕ ಮಹಿಳೆಯೊಬ್ಬಳಿಂದ ಈ ಸೃಷ್ಟಿ ರಹಸ್ಯ ನನಗೆ ತಿಳಿಯಿತು ಎಂದರಂತೆ. ಹಾಗೆ ಪ್ರೊ.ಪೀಟರ್ ಅವರು ಮಧ್ಯಾಹ್ನ ಊಟದ ಸಮಯದಲ್ಲಿ ಕೈಯಿಂದ ಅನ್ನ ಕಲೆಸಿ ಬೆರಳುಗಳಿಂದ ತಿನ್ನುವುದನ್ನು ಆನಂದಿಸುತ್ತಾ ಅದರ ವಿಶೇಷತೆಯನ್ನು ಸಹ ಹೇಳುತ್ತಿದ್ದರು.

ಅಂಗವಿಕಲರಲ್ಲಿ ಮಾನಸಿಕವಾಗಿ ಮತ್ತು ಶಾರೀರಕವಾಗಿ ಅರೆಯಾಗಿರುವ ಚೈತನ್ಯ ಬಿಂದುವನ್ನು ಜಾಗೃತಗೊಳಿಸುವ ಉದ್ದೇಶದಿಂದ ಅವರಿಗೆ ಸಾವಯವ ವಿಧಾನದಲ್ಲಿ ಬೆಳೆದ ಆಹಾರೋತ್ಪನ್ನಗಳನ್ನು ದೊರಕಿಸಲು ಹಾಗೂ ಸಾವಯವ ಕೃಷಿಯನ್ನು ಅವರ ಕೈಯಿಂದಲೇ ಮಾಡಿಸುವಂತೆ ಅವರಿಗೆ ಕಲಿಸಿಕೊಡಲು ಶ್ರಮವಹಿಸಿದ ರುಡಾಲ್ಫ್ ಸ್ಟೈನರ್ ಮುಖ್ಯವಾಗಿ ತೀವ್ರ ಮಾನವೀಯ ಅನುಕಂಪ ಹೊಂದಿದ ಒಬ್ಬ ದಾರ್ಶನಿಕ ವ್ಯಕ್ತಿ. ಕ್ಯಾಂಪ್‌ಹಿಲ್ ಆದರ್ಶಗ್ರಾಮ ಅವರ ಕನಸಿನ ಪ್ರತಿರೂಪ. ಅಂಗವಿಕಲರಿಗಾಗಿಯೇ ಇರುವ ಈ ಆದರ್ಶಗ್ರಾಮದ ಕಾರ್ಯಕ್ರಮಗಳ ಭಾಗವಾಗಿರುವ ಪ್ರೊ. ಪೀಟರ್ ಪ್ರಾಕ್ಟರ್ ಈ ಮಾನವಿಕ ಸಂದೇಶವನ್ನು ವಿಶ್ವದಲ್ಲಿ ಪ್ರಸರಿಸುವ ಹೊಣೆ ಹೊತ್ತಿದ್ದಾರೆ. ಕೇವಲ ವ್ಯಾವಹಾರಿಕ ವಾಗಿರುವ ಇಂದಿನ ಬದುಕಿನಲ್ಲಿ ಈ ಮಾನವೀಯ ಅನುಕಂಪದ ಎಳೆ ಮಾನವ ಜನಾಂಗಕ್ಕೆ ಒಂದು ಸ್ಫೂರ್ತಿಯ ಸೆಲೆಯಾಗಿದೆ.

ನಮ್ಮ ವಿಶ್ವಪ್ರಜ್ಞ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ವಿನಯ್ ವಿನೇಕರ್ ಗುರೂಜಿಯವರೂ ಸಹ ಇಂತಹುದೇ ಆದರ್ಶದ ಆಶಯದಿಂದ ವಿಶ್ವಧಾಮ ಗ್ರಾಮದಲ್ಲಿ ಅಸಹಾಯಕರು ಮತ್ತು ಅಂಗವಿಕಲರೊಂದಿಗೆ ಆರೋಗ್ಯಶಾಲಿಗಳಾದ ಬುದ್ಧಿಜೀವಿಗಳು ಒಂದಾಗಿ ಬೆರೆತು ವಸುಧೈವ ಕುಟುಂಬದಂತೆ ಸಂಪೂರ್ಣ ಸುರಕ್ಷಿತ ಪ್ರಕೃತಿ ವಿಧಾನಗಳಿಂದ ಆರೋಗ್ಯಪೂರ್ಣ ನೆಮ್ಮದಿಯ ಬದುಕು ನಡೆಸುವಂತಾಗಬೇಕು ಎಂಬ ಉದ್ದೇಶ ಹೊಂದಿದವರು. ಈ ಮಾರ್ಗ ಸಾಧನೆಗೆ ಜೀವಚಾಲಕ ಸಾಗುವಳಿಯಂತಹ ಪ್ರಕೃತಿ ವಿಧಾನಗಳು ಹೆಚ್ಚು ಉಪಯುಕ್ತವೆನಿಸಿತು. ಕಾರ್ಯಕ್ರಮ ಮುಗಿಸಿ ಸಂಜೆ ಮನೆಗೆ ಬರುವಾಗ ಮನಸ್ಸು ವಿಶ್ವಧಾಮ ಗ್ರಾಮದಲ್ಲಿ ಸಾವಯವ ಕೃಷಿ ನಡೆಸುವ ಕನಸು ನೇಯುತ್ತಿತ್ತು.

ಸಾವಯುವ ಕೃಷಿ : ಇತಿ ಮಿತಿಗಳು (ಎಲ್ಲ ಹಂತಗಳಲ್ಲೂ ಸಾಧ್ಯವೇ ?)

"ಸಾವಯುವ ಕೃಷಿ ಒಂದು ಆದರ್ಶವಾದ ವಿಧಾನವಾದರೂ ಇದಕ್ಕೆ ಇತಿ ಮಿತಿಗಳಿವೆ. ಹಾಗಾಗಿ ಇಂತಹ ವಿಷಯುಗಳಲ್ಲಿ ದುಡುಕುವುದಕ್ಕಿಂತ ಸಾಧ್ಯಾ ಸಾಧ್ಯತೆಗಳನ್ನು ಪರಿಶೀಲಿಸಿ ಒಂದೊಂದೇ ಹೆಜ್ಜೆ ಇಡುವುದು ಒಳ್ಳೆಯದು" ಎಂಬುದಾಗಿ ಹಿತ್ತಲ ಗಿಡ ಸಂಚಿಕೆ 2-3ರಲ್ಲಿ (ಪುಟ 10) ಡಾ. ಬಿ.ಆರ್. ಹೆಗಡೆಯವರು ಸಲಹೆ ಮಾಡಿದ್ದಾರೆ. ಸಾವಯುವ ಕೃಷಿ ಒಂದು ಆದರ್ಶ ವಿಧಾನ ಎಂಬುದನ್ನು ನಾನೂ ಒಪ್ಪುತ್ತೇನೆ. ಹಾಗೆಂದು ಇದು ಅಸಾಧ್ಯ ಅಲ್ಲ. ರಾಸಾಯನಿಕ ಕೃಷಿ ಅನಿವಾರ್ಯವೂ ಅಲ್ಲ. ನಮ್ಮ ಮಾನಸಿಕ ಇತಿ ಮಿತಿಗಳನ್ನು ಸಾವಯುವ ಕೃಷಿಗೆ ಆರೋಪಿಸುವುದು ಸಾಧುವಲ್ಲ.

ನಾವಿಂದು ಕೃಷಿ ಉತ್ಪನ್ನಗಳನ್ನು Export ಮಾಡುತ್ತೇವೆಂದು ಹೆಮ್ಮೆ ಪಡಬಹುದು. ಆದರೆ ಊಟಕ್ಕಿಲ್ಲದೆ ಬಳಲುವ ಜನ ಇನ್ನೂ ನಮ್ಮಲ್ಲಿದ್ದಾರೆ ಎಂಬುದು ನಮಗೆ ಗೊತ್ತಾಗಬೇಕಿದೆ. ರಾಸಾಯನಿಕ ಕೃಷಿ ಮಾಡಿ Export ಮಾಡುವುದಾದರೆ ದೇಶದ ಹೊಟ್ಟೆ ತುಂಬುವುದಿಲ್ಲ. "ಪಂಚತಾರ ಸಂಸ್ಕೃತಿ" ನಮ್ಮ ಇಂದಿನ ಗುರಿ. ಈ ಗುರಿಗಾಗಿ ನಾವು ಇಂದು ಉತ್ಪಾದನೆ ಹೆಚ್ಚು ಮಾಡುವ ತರಾತುರಿಯಲ್ಲಿದ್ದೇವೆಯೇ ಹೊರತು ನಿಜವಾಗಿ ಬಡವರ ಹೊಟ್ಟೆ ತುಂಬಿಸುವುದಕ್ಕಾಗಿ ಅಲ್ಲ. ನಿಜವಾಗಿ ಉತ್ಪಾದನೆ ಕಡಿಮೆ, ಆಗಿರುವುದೂ ಇಲ್ಲ. ನಮ್ಮ ಎಲ್ಲಾ ವಿಲಾಸೀ ಹೋಟೆಲುಗಳನ್ನು ಬಂದ್ ಮಾಡಿದರೆ ಇಂದಿರುವ ಆಹಾರವೇ ದ್ವಿಪಟ್ಟು ಜನಕ್ಕೆ ಸಾಕಾದೀತು. ಹಂದಿಗಳಿಗೆ, ಕೋಳಿಗಳಿಗೆ ತಿನ್ನಿಸಿ ಮತ್ತೆ ನಾವು ಅದನ್ನು ತಿನ್ನುವ ಅವಿವೇಕ ತಪ್ಪಿದರೆ ನಮ್ಮ ಉತ್ಪತ್ತಿ ಮತ್ತೆ ದ್ವಿಪಟ್ಟು ಜನಕ್ಕೆ ಬಂದೀತು. (ಅಮೇರಿಕದಲ್ಲಿ 60% ಆಹಾರೋತ್ಪನ್ನ ಪಶುಗಳಿಗಾಗಿ ಬೆಳೆಯುವುದಂತೆ !) ಈ ಬಗ್ಗೆ ಯೋಚಿಸದೆ ಭೂಮಿಯ ಜೀವಧಾರಕ ಶಕ್ತಿಯ ಬಗ್ಗೆ ಸಂಶಯಿಸುವುದು ಸಮಂಜಸವಾಗಿರುವುದಿಲ್ಲ.

"ನಮ್ಮ ಆಹಾರ ಬೆಳೆಗಳು ಇಂದು ಭೂಮಿಯಿಂದ ಹೀರುವ ಪೋಷಕಾಂಶಗಳ ಪ್ರಮಾಣ 32 ದಶಲಕ್ಷ ಟನ್‌ಗಳು. ಇಷ್ಟು ದೊಡ್ಡ ಪ್ರಮಾಣದಲ್ಲಿ ಸಾವಯುವ ಗೊಬ್ಬರವನ್ನು ಉತ್ಪಾದಿಸುವುದು ಸಾಧ್ಯವಿಲ್ಲ" ಎಂದು ಹೇಳಲಾಗಿದೆ. ಪ್ರಪಂಚದ ಎಲ್ಲ ವ್ಯಾಪಾರಗಳೂ ಚಕ್ರೀಯ (Cyclic) ಚಲನೆಗೆ ಒಳಪಟ್ಟಿದೆ, ಎಂಬುದು "ನಿಜ ವಿಜ್ಞಾನಿ" ತಿಳಿದುಕೊಂಡ ಸತ್ಯ. ಈ ಸತ್ಯ ಸಾವಯುವ ಗೊಬ್ಬರದ ಮಟ್ಟಿಗೆ ಮಾತ್ರ ಸುಳ್ಳಾಗಿರುವುದು ದೊಡ್ಡ ವಿಪರೀತವೇ ಸರಿ. 32 ದಶಲಕ್ಷ ಟನ್ ಪೋಷಕಾಂಶ ಬಳಸಿ ಬೆಳೆದ ಬೆಳೆಗಳು ಈ ಭೂಮಿ ಬಿಟ್ಟು ಎಲ್ಲಿಗೂ ಹೋಗುವುದಿಲ್ಲ. ಈ ಎಲ್ಲವನ್ನೂ ತಿಂದು ಇಲ್ಲಿರುವ ನಾವು ಬೆಳೆಯುತ್ತಿದ್ದೇವೆ. ಆದರೆ ನಾವು ಮಾತ್ರ ಬೆಳೆಯುತ್ತಿದ್ದೇವೆ. ನಮ್ಮ ಬುದ್ಧಿ ಬೆಳೆಯುತ್ತಿಲ್ಲ (ದುರ್ಬುದ್ಧಿ ಬೆಳೆಯುತ್ತಿದೆ.)

ಹಾಗಾಗಿ ಈ ಪೋಷಕಾಂಕಗಳ ಮರು ಹೂಡಿಕೆ (Re cycle Return) ಸಾಧ್ಯವಾಗುತ್ತಿಲ್ಲ ಈ ವಿವೇಕವೇ ಸಾವಯುವ ಕೃಷಿಯ ತಿರುಳು. 32 ದಶಲಕ್ಷ ಟನ್ ಎಂದು ದೊಡ್ಡ ಸಂಖ್ಯೆ ಹೇಳಿ ನಮ್ಮನ್ನು ಗಾಬರಿ ಪಡಿಸುವುದು ಸರಿಯಲ್ಲ. ಲಕ್ಷಾಂತರ ವರ್ಷಗಳ ಸಂಚಯ ಶಕ್ತಿಯಾದ ರಾಸಾಯನಿಕ ಗೊಬ್ಬರವನ್ನು ಕೃತಕವಾಗಿ ಇದಕ್ಕಿಂತ ಜಾಸ್ತಿಯಾಗಿ ಉತ್ಪಾದಿಸಲು ನಮ್ಮಗೆ ಸಾಮರ್ಥ್ಯ ಇದೆ. ಇಷ್ಟು ಮರ ಗಿಡಗಳನ್ನು ಬೆಳೆಸಲು ಸಾಧ್ಯವಿಲ್ಲವೇ ? 32 ದಶಲಕ್ಷ ಟನ್ ಎಂದರೆ "32 ಲಕ್ಷ ಲಾರಿ ಲೋಡುಗಳು". ಲಕ್ಷಾಂತರ ರೂಪಾಯಿ ಬೆಲೆಯ ಲಾರಿಗಳೇ ಇದಕ್ಕಿಂತ ಜಾಸ್ತಿ ಸಂಖ್ಯೆಯಲ್ಲಿ ನಮ್ಮಲ್ಲಿವೆ. ನಮ್ಮ ದೇಶದ ಭಾರಿ ಉದ್ದಿಮೆಗಳ ಸಂಪತ್ತಿನ ಎದುರು ಈ ಲಾರಿಗಳ ಸಂಖ್ಯೆ ಬಿಂದು ಬಿಂದು ಮಾತ್ರ. ಇಷ್ಟೊಂದು ಸಂಪತ್ತುಳ್ಳ ದೇಶಕ್ಕೆ ಇಷ್ಟು ಸಾವಯುವ ಗೊಬ್ಬರವನ್ನು ಸೃಷ್ಟಿಸಿಕೊಳ್ಳುವ ವೀರ್ಯತೆ ಇಲ್ಲವೇ ? ನಮ್ಮ ದೇಶದ ಒಟ್ಟು ವಿಸ್ತೀರ್ಣ ಸಮಾರು 125 ಕೋಟಿ ಎಕ್ರೆಗಳು. ಎಂದರೆ 32 ದಶಲಕ್ಷವನ್ನು ಪ್ರತಿ ಎಕ್ರೆಗೆ ಹಂಚಿದರೆ ಬರುವ ಪ್ರಮಾಣ ಕೇವಲ 25 ಕಿಲೊ ಗ್ರಾಂಗಳು. ಇಷ್ಟನ್ನು ಉತ್ಪಾದಿಸಲಾಗದ ನಮಗೆ ಈ ಭೂಮಿಯಲ್ಲಿ ಬೆಳೆದದ್ದನ್ನು ತಿನ್ನಲು ಹಕ್ಕುಂಟೇ ಸ್ವಾಮಿ ? ವಾಸ್ತವವಾಗಿ ರಾಸಾಯನಿಕ ಕೃಷಿ ಪದ್ಧತಿಗಳ ದೋಷಕಾರಣವಾಗಿ 32 ದಶಲಕ್ಷ ಟನ್‌ಗಳನ್ನು ಮೀರಿ ಮೇಲ್ಮಣ್ಣು ಸವಕಳಿಗೊಂಡು ಸಾಗರ ಸೇರುತ್ತಿದೆ. ಇಂತ ಕೃಷಿ ಪದ್ಧತಿ ಬಿಟ್ಟು ಸಾವಯುವ ಕೃಷಿ ಮಾಡಿ ಈ ಸವಕಳಿಯನ್ನು ಉಳಿಸಿ ಗೊಬ್ಬರ ಉಳಿಸುವ ಬಗೆಗೆ ನಮ್ಮ ಬುದ್ಧಿ ಯಾಕೆ ಓಡುವುದಿಲ್ಲ ?

ಪ್ರತಿಯೊಂದು ಸಸ್ಯವೂ ಪ್ರಕೃತಿಯ ಕೂಸು - ನಮ್ಮದಲ್ಲ. ಅದು ರೂಪಗೊಂಡದ್ದು (Design) ಕಡಿಮೆ ಪೋಷಕಾಂಶವುಳ್ಳ ಸಾವಯುವ ಗೊಬ್ಬರಕ್ಕಾಗಿ. ಈ ಗೊಬ್ಬರ ಹೀರಿ ಲೋಕಕ್ಕೆ ಬೇಕಾದಷ್ಟು ಆಹಾರವನ್ನೂ, ಐಶ್ವರ್ಯವನ್ನೂ ಕೊಡುವ ಸಾಮರ್ಥ್ಯ ಭೂಮಿಗಿದೆ ಎಂಬುದಕ್ಕೆ ಇಂದು ಇಲ್ಲವಾಗುತ್ತಿರುವ ಕಾಡುಗಳೇ ಸಮರ್ಥ ಸಾಕ್ಷಿ. ಈ ಸಾಕ್ಷಿಯ ಹಿನ್ನಲೆಯಲ್ಲಿ ಅಲ್ಲಿ ಇಲ್ಲಿ ಮಾಡಿರುವ ಕೃಷಿ ಪ್ರಯತ್ನಗಳು ನಮಗೆ ಮಾದರಿಗಳು. ಎಲ್ಲ ಸಮಸ್ಯೆಗಳಿಗೂ ಸಮರ್ಥ ಉತ್ತರವಾಗಬಲ್ಲ ಕಾಡು ಬೆಳೆಸಿ, ಕಾಡಿನ ಜೊತೆಯಲ್ಲಿ ಸಹಬಾಳ್ವೆ ನಡೆಸಿ, ಸಾವಯುವ ಕೃಷಿ ಮಾಡುವ ಜಾಣ್ಮೆಯನ್ನು ನಾವು ಬೆಳಸಕೊಳ್ಳಬೇಕಾಗಿದೆ. ವಂದನೆಗಳು.

ಎ.ಪಿ. ಚಂದ್ರಶೇಖರ್, ಮೈಸೂರು.

ಅಮೇರಿಕದಿಂದ ....!

ಹನೀ ಬಿ ಪತ್ರಿಕೆ ಸಂಪುಟ 6. ಸಂಚಿಕೆ 3ರಲ್ಲಿ ಪ್ರಕಟಗೊಂಡ `ಹಿತ್ತಲ ಗಿಡ' ಪತ್ರಿಕೆಯಿಂದ ಆಯ್ದು ಬಾಷಾಂತರಿಸಿದ ಕೃಷಿ ಪದ್ಧತಿಗಳನ್ನು ಓದಿ, ಮೆಚ್ಚಿ, ಅಮೇರಿಕದ 65 ವರ್ಷ ವಯಸ್ಸಿನ ಜಾನಸ್‌ಬ್ಲು ಸಮಾರು 6 ಪುಟಗಳ ಪತ್ರದಲ್ಲಿ ಪ್ರತಿಕ್ರಿಯಿಸಿದ್ದಾರೆ. ಅದರ ಮುಖ್ಯ ಸಾರಾಂಶ ಇಂತಿದೆ.

'I hope to see leadership, research-type yet farmer oriented. People become active and have power in our planet on a big scale to reverse the distructive forces of industrialised profit seeking mega powers who have destiny of not to care about life or natural systems on earth'.

ಆಧ್ಯಾತ್ಮಿಕತೆಯಲ್ಲಿ, ರಾಸಾಯನಿಕ ಕೃಷಿಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಆಕೆ ತಾನು ಅನುಸರಿಸಿದ ಎರಡು ಪದ್ಧತಿಗಳನ್ನು ನಮ್ಮೊಡನೆ ಹಂಚಿದ್ದಾರೆ. ಹೂವುಗಳ ಹುಳದ ಕಾಟಕ್ಕೆ ಸಿಕ್ಕಿ ಸಾಯುತ್ತಿದ್ದ ತನ್ನ ಸೇಬಿನ ಮರದ ಸುತ್ತ ಸಣ್ಣ ಸಣ್ಣ ಗುಂಡಿಗಳನ್ನು ತೆಗೆದು ಅದರಲ್ಲಿ ನೀರು ಹಾಗು ಗೊಬ್ಬರ ತುಂಬಿಸಿದರಂತೆ. ಗಿಡ ಇದರಿಂದ ನಿಧಾನವಾಗಿ ಮತ್ತೆ ಚಿಗುರಿತು ಎನ್ನುತ್ತಾರೆ. ಪಕ್ಕದವನ ತೋಟದಿಂದ ತನ್ನ ತೋಟಕ್ಕೆ ನುಗ್ಗಿ ಹಾವಳಿ ಮಾಡುತ್ತಿದ್ದ ಹಸುಗಳ ಕಾಟ ತಡೆಯುವುದು ಹೇಗೆ ಎಂಬ ಚಿಂತೆ ಹತ್ತಿತಂತೆ. ಅಮೇರಿಕದ ಕಾನೂನಿನ ಪ್ರಕಾರ ಹಸುಗಳು ನುಗ್ಗದಂತೆ ತೋಟಕ್ಕೆ ಬೇಲಿ ಹಾಕಿ ಕಾಯುಬವುದು ತೋಟದ ಯಜಮಾನನ ಜವಾಬ್ದಾರಿ. ಅರವತ್ತೈದು

ಪ್ರತಿಕ್ರಿಯೆ

ವರ್ಷದ ತಾನು ಮತ್ತೆ ಬೇಲಿ ರಿಪೇರಿಮಾಡುವ ಪ್ರಯತ್ನಕ್ಕೆ ಇಳಿಯುವ ಬದಲು ಬೇರೆ ಜಾಗದಲ್ಲಿ ಕಾವಲು ಹೂಡಿ ಹಲವು ಬಾರಿ ಅಲ್ಲಿಯೇ ಮಲಗಿದೆ. ತನ್ನ ಕಷ್ಟ ನೋಡಲಾರದೆ ಪಕ್ಕದ ಮನೆಯಾತ ತಾನೇ ಕಿತ್ತ ಬೇಲಿಯನ್ನು ರಿಪೇರಿ ಮಾಡಿಸಿದ. ಅದಕ್ಕೆ ಕೃತಜ್ಞತೆಯ ಕುರುಹಾಗಿ 3 - 4 ಸೇಬಿನ ಗಿಡಗಳನ್ನು ಕೊಡುವ ಯೋಚನೆ ಈಕೆಯದಂತೆ. ಭೂಮಿಯ ಮೇಲೆ ಕಿತ್ತಾಟ ಮಾಡಿ ಬದುಕದೆ ಇತರರೊಳಗೆ ಹಂಚಿ ಮನುಷ್ಯ ಮಾತ್ರವಲ್ಲದೆ ಇತರ ಪ್ರಾಣಿ, ಪಕ್ಷಿ, ಸಸ್ಯ ಸಂಕುಲಗಳೊಂದಿಗೆ ಹೊಂದಾಣಿಕೆಯೊಂದಿಗೆ ಬದುಕಬೇಕೆಂಬುದು ಆಕೆ ಕಂಡುಕೊಂಡು ನಮಗೆ ಬರೆದ ಪತ್ರದ ಸಾರಾಂಶ.

ಜಾನಸ್‌ಬ್ಲೂ, ನ್ಯೂ ಮೆಕ್ಸಿಕೋ, U.S.A.

ರೈತರ ಕೈಪಿಡಿಯಂತಿರುವ 'ಹಿತ್ತಲ ಗಿಡ' ಚಾತುರ್ಮಾಸಿಕ ಪತ್ರಿಕೆ ಅಚ್ಚುಕಟ್ಟಾಗಿ ಪ್ರಕಟಗೊಂಡು ಬರುತ್ತಿದೆ. ಪತ್ರಿಕೆಯು ಸಾವಯವ ರೈತರಿಗೆ ಹಾಗೂ ಹೊಸದಾಗಿ ಸಾವಯವ ಕೃಷಿ ಮಾಡುವವರಿಗೆ ಒಂದು ದಾರಿ ದೀಪವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಪರಿಸರದೊಂದಿಗೆ ಮನುಷ್ಯ ಸಹಬಾಳ್ವೆ ಮಾಡಲು ತಿಳಿಯಲು ಒಂದು ಪಾಠಶಾಲೆಯಂತಿದೆ.

ಚಿನ್ನ ಬಸವ ರೆಡ್ಡಿ, ಹೊಂಬರಾಳ, ರಾಯಚೂರು.

ಹಿತ್ತಲಗಿಡದ ಎರಡನೇ ಸಂಚಿಕೆ ಕೈಸೇರಿತು. ತುಂಬಾ ಚೆನ್ನಾಗಿದೆ. ಬಹಳಷ್ಟು ಶಬ್ದ, ವಿಚಾರಗಳು ಉತ್ತರ ಕರ್ನಾಟಕದ ಜನರಿಗೆ ಅಪರಿಚಿತ. ಉದಾ. ಪುನರ್‌ಪುಳಿ, ಚಕ್ಕೋತ, ಇತ್ಯಾದಿ. ಸಾವಯವ ಕೃಷಿ ಬಗ್ಗೆ ನನಗೆ ಆಸಕ್ತಿ ಇದೆ. ಈ ಬಗ್ಗೆ ನಡೆಯುವ ವಿಚಾರ ಸಂಕಿರಣ, ಕಾರ್ಯಾಗಾರಕ್ಕೆ ವಿವರ ನೀಡಿರಿ. ಬಯೋಡೈನಾಮಿಕ್ ಕೃಷಿ ಬಗ್ಗೆ ಮತ್ತಷ್ಟು ವಿವರಬೇಕಾಗಿದೆ.

ಚನ್ನಮಲ್ಲಪ್ಪ ಪಾಟೀಲ, ಸುರಪುರ.

ನಾನು `ಅಶ್ವಿನಿ' ಸಂಗೋಧ್ಯ ಕೇಂದ್ರದ ಮೂಲಕ ಸಿದ್ದಾಪುರ ತಾಲೂಕಿನಲ್ಲಿ ಗೊದ್ದಬೀಳದಲ್ಲಿ ಭಾರತೀಯ ನಾಡಿ ವಿಜ್ಞಾನದ ಕುರಿತು ಸಂಶೋಧನೆ ನಡೆಸಿ, ಗ್ರಂಥ ರಚನೆ ಮಾಡುತ್ತಿರುವೆನು. ನಾಡಿ ವಿಜ್ಞಾನದಲ್ಲಿ ಯೋಗ, ಆಯುರ್ವೇದ, ಜ್ಯೋತಿಷ್ಯ - ಈ ರೀತಿ ತ್ರಿಕಾಲಜ್ಞಾನ ವಿಭಾಗಗಳಿವೆ. ಆಯುರ್ವೇದಿಯ ವನಸ್ಪತಿ ಗುಣಧರ್ಮ ಹಾಗೂ ನಾಡಿ ಚಲನೆ ರೇಖಮಾಲಾ ಕ್ರಮದಲ್ಲಿ ತರುವ ಪ್ರಯತ್ನ ನಡೆಸಲಾಗಿದೆ. ತಮ್ಮ ಪತ್ರಿಕೆ ಈ ರೀತಿಯ ವಿಚಾರಗಳಿಗೆ ಪ್ರಾಮುಖ್ಯತೆ ನೀಡುವುದಾದಲ್ಲಿ ಲೇಖನ ಸಿದ್ದಪಡಿಸಿ ಕಳಿಸಲಾಗುತ್ತದೆ.

ಜಿ.ಎನ್. ಹೆಗಡೆ, ಗೋದ್ದಬೀಳ,

Statement about ownership and other particulars of "HITTALA GIDA" as per Form No.1 (Rule 3)

1. Place of Publication	:	Bangalore
2. Periodicity of publication	:	Quartarly
3. Printer's Name	:	S. Sridhar,
Nationality	:	Indian
Address	:	Nava Bharath Enterprises, No.10, Sirur Park 'B' St., Seshadripuram, Bangalore - 560 020.
4. Publisher's Name	:	Smt. K. Meenakshi
Nationality	:	Indian
Address	:	No. 399, 14 - B Cross, New Town Yelahanka, Bangalore - 560 064.
5. Editor's (Hon.) Name	:	T.N. Prakash
Nationality	:	Indian
Address	:	No. 416, 14 - B Cross, New Town Yelahanka, Bangalore - 560 064.
6. Name and Address of the Individual who own's the Newspaper	:	Smt. K. Meenakshi No. 399, 14 - B Cross, New Town Yelahanka, Bangalore - 560 064.

I, Smt. K. Meenakshi here by declare that the particulars given above are true to the best of my knowledge and belief.

Sd/-

Bangalore
Date : 13.09.96

Smt. K. Meenakshi
(Publisher and Owner)

ನಿಮಗೆ ಗೊತ್ತೆ........?

ಇಂದಿನ ಕಾಗದದ ಬೆಲೆಗೆ, ಕಾಗದವನ್ನು ಉತ್ಪಾದಿಸುವಾಗ ಆಗುವ ಪರಿಸರ ನಷ್ಟದ ಮೌಲ್ಯವನ್ನು ಸೇರಿಸಿದಾಗ, ಅಂದರೆ ವಾಯು ಮತ್ತು ನೀರಿನ ಮಾಲಿನ್ಯ, ಬಿಸಾಡುವ ನಿಷ್ಪ್ರಯೋಜಕ ವಸ್ತುಗಳು ಮತ್ತು ಅದರ ಶುದ್ಧೀಕರಣ ಹಾಗೂ ಬಿದಿರಿನ ಮುಖ ಬೆಲೆಗಳನ್ನು ಸೇರಿಸಿದಾಗ ಗ್ರಾಹಕರು ಇಂದು ಕೊಳ್ಳುವ ಬೆಲೆಗಿಂತ ದುಪ್ಪಟ್ಟು ಹೆಚ್ಚು ಬೆಲೆ ತೆರಬೇಕಾಗುತ್ತದೆ. ಕಾಗದ ಹಾಗೂ ಪರಿಸರದ ಬಗ್ಗೆ ನೀವು ಕಾಳಜಿ ಇರುವ ಗ್ರಾಹಕರಾಗಿದ್ದಲ್ಲಿ, ಈಗಿನಿಂದಲೇ ಕಾಗದದ ಬಳಕೆಯನ್ನು ಮಿತಿಗೊಳಿಸಿ. ಕಾಗದವನ್ನು ಪುನರ್ಬಳಸಿ, ಕಾಗದದ ಪುನರುತ್ಪಾದನಾ ಪ್ರಕ್ರಿಯೆನ್ನು ಪ್ರೋತ್ಸಾಹಿಸಿ. *ಕಾಗದ ಕಟ್ಟೆ* - ಬೆಂಗಳೂರು

*ವಿ.ಸೂ. ಹಿತ್ತಲ ಗಿಡದ ಈ ಸಂಚಿಕೆಯನ್ನು ಕಬ್ಬಿನ ತ್ಯಾಜ್ಯ **Bagasse**, ಕಾಗದದಿಂದ ಮುದ್ರಿಸಲಾಗಿದೆ. ಸಂ.*

ಅರಳೀ ಕಟ್ಟೆ - ಗೋಷ್ಠಿ, ಸಂಕಿರಣ ಇತ್ಯಾದಿ

ಆಗಿದ್ದು

ದ್ವಿತೀಯ ಪಾರಂಪರಿಕ ವಿಜ್ಞಾನ ಮತ್ತು ಭಾರತೀಯ ತಂತ್ರಜ್ಞಾನಗಳ ಸಮ್ಮೇಳನ (Second Congress on Traditional Sciences and Technologies of India) ಮದ್ರಾಸ್ : ಅಣ್ಣಾ ವಿ.ವಿ., ಡಿಸೆಂಬರ್ 27 ರಿಂದ 31, 1995

ಮದ್ರಾಸಿನಲ್ಲಿ ನಡೆದ ಈ ಸಮ್ಮೇಳನದಲ್ಲಿ ಕೃಷಿ ಜೀವ ವೈವಿಧ್ಯತೆ, ಅರಣ್ಯ, ನೀರು ನಿರ್ವಹಣೆ, ಮೀನುಗಾರಿಕೆ, ಸ್ಥಳೀಯ ಮಾರುಕಟ್ಟೆಗಳು, ಆರೋಗ್ಯ, ಆಹಾರ ಮತ್ತು ಪೌಷ್ಠಿಕತೆ, ವಾಸ್ತುಶಾಸ್ತ್ರ ಇವೇ ಮೊದಲಾದ ಒಟ್ಟು 15 ವಿಷಯಗಳಲ್ಲಿ ಸುಮಾರು 311 ಪ್ರಬಂಧಗಳು ಮಂಡಿಸಲ್ಪಟ್ಟವು.

ಸ್ಥಳೀಯ ತಳಿಗಳು, ಬೀಜ ಸಂಗ್ರಹಣಾ ವಿಧಾನಗಳು, ವೇದಗಳಲ್ಲಿ ಬರೆಯಲ್ಪಟ್ಟಿರುವ ಹಾಗೂ ಪುರಾತನ ಭಾರತದಲ್ಲಿ ಬಳಕೆಯಲ್ಲಿದ್ದ ಕೃಷಿ ಪದ್ಧತಿಗಳು, ಕೀಟ ಮತ್ತು ರೋಗ ಹತೋಟಿಗೆ ಪ್ರಚಲಿತವಾಗಿರುವ ಸ್ಥಳೀಯ ಪದ್ಧತಿಗಳು ಇವುಗಳ ಕುರಿತಾದ ಪ್ರಬಂಧಗಳ ಜೊತೆಗೆ ಕೀಟ ಮತ್ತು ರೋಗ ಹತೋಟಿಗೆ ಬಳಸುವ ಸಸ್ಯಗಳಲ್ಲಿ ರಾಸಾಯನಿಕ ಗುಣ ವಿಶೇಷಗಳನ್ನು ಪ್ರಯೋಗಾತ್ಮಕವಾಗಿ ಸಿದ್ಧಪಡಿಸಿದ ಲೇಖನವೂ ಮಂಡಿಸಲ್ಪಟ್ಟಿತು.

ಸ್ಥಳೀಯ ಕೃಷಿ ಪದ್ಧತಿಗಳಲ್ಲಿ ಅಡಕವಾಗಿರುವ ಸುಸ್ಥಿರತೆ, ನಿರಂತತೆಯ ಕುರಿತು ಚರ್ಚೆಯಾದಂತೆ, ಅದನ್ನು ಉಳಿಸಿಕೊಳ್ಳುವ ಅಗತ್ಯ, ಕಾಯ್ದೆ ಕಾನೂನುಗಳು ಇವುಗಳ ಜೊತೆಗೇ ಜೀವ ವೈವಿಧ್ಯತೆ, ಗ್ರಾಹಕನ ಜವಾಬ್ದಾರಿಯ ಕುರಿತು ಚರ್ಚೆಯಾದದ್ದು ಆಸಕ್ತಿಯ ವಿಷಯ.

ಏಷ್ಯಾ ಮಟ್ಟದಲ್ಲಿನ "ಸಂಸ್ಕೃತಿ ಮತ್ತು ಕೃಷಿ" ಮೇಲಿನ ವಿಚಾರ ಸಂಕಿರಣ ಬಾಂಕಾಂಕ್, ಥೈಲ್ಯಾಂಡ್, ಡಿಸೆಂಬರ್ 18-22, 1995

ವಿಶ್ವಸಂಸ್ಥೆಯ ಅಂಗ ಸಂಸ್ಥೆಯಾದ ಯನೆಸ್ಕೊ (UNESCO) 1995 ನೇ ವರ್ಷವನ್ನು "ಸಂಸ್ಕೃತಿ ಮತ್ತು ಕೃಷಿ" ವಿಚಾರಕ್ಕೆ ಪ್ರಚಾರ ಮತ್ತು ಒತ್ತು ಕೊಡುವ ವರ್ಷವನ್ನಾಗಿ ಪರಿಗಣಿಸಿತ್ತು. ಈ ಹಿನ್ನೆಲೆಯಲ್ಲಿ, ಪಾರಂಪರಿಕ ಕೃಷಿ ಪದ್ಧತಿಯನ್ನು ಜಾಗತಿಕ ಮಟ್ಟದಲ್ಲಿ ಅನುಸರಿಸುವ ಸಾಧ್ಯತೆಯನ್ನು ಕುರಿತಾಗಿ ಥೈಲ್ಯಾಂಡಿನ ರಾಜಧಾನಿ ಬಾಂಕಾಂಕ್‌ನಲ್ಲಿ ಏಷ್ಯಾಖಂಡದ ಪ್ರಾದೇಶಿಕ ಮಟ್ಟದ ವಿಚಾರ ಸಂಕಿರಣ ಒಂದನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಚೈನಾ, ಭಾರತ, ಮಲೇಸಿಯ, ನೇಪಾಳ, ಫಿಲಿಫೈನ್ಸ್, ಶ್ರೀಲಂಕಾ, ವಿಯಟ್ನಾಂ ಮತ್ತು ಥೈಲ್ಯಾಂಡಿ ದೇಶಗಳ ವಿಜ್ಞಾನಿಗಳು, ತಜ್ಞರು ಮತ್ತು ರೈತರು ಪಾಲ್ಗೊಂಡಿದ್ದರು. ಹಿತ್ತಲ ಗಿಡದ ಸಂಪಾದಕ, ಪ್ರಕಾಶ್ ಕಮ್ಮರಡಿಯವರು ಭಾರತದ ಪರವಾಗಿ ಪ್ರತಿನಿದಿಸಿದ್ದರು. ಇದರ ಮುಖ್ಯ ಉದ್ದೇಶ ಏಷ್ಯಾಖಂಡದ ರೈತರ ಸಮಸ್ಯೆಯನ್ನು ಅರಿತು, ಪರಿಹಾರ ಕಂಡುಕೊಳ್ಳುವುದು, ಕೃಷಿಯಲ್ಲಿನ ಸಾಂಸ್ಕೃತಿಕ ಆಯಾಮವನ್ನು ಗುರುತಿಸಿ, ಗಟ್ಟಿಮಾಡುವುದು ಮತ್ತು ವಿವಿಧ ದೇಶಗಳಲ್ಲಿ ನಡೆಯುತ್ತಿರುವ ಪರ್ಯಾಯ ಕೃಷಿ ಪ್ರಯೋಗಗಳ ಬಗ್ಗೆ ಮಾಹಿತಿ, ವಿವರಗಳನ್ನು ಹಂಚಿಕೊಂಡು, ಏಷ್ಯಾದೇಶದ ಜನತೆ ಒಗ್ಗೂಡಿ ಪ್ರಯತ್ನಿಸುವ ರೀತಿಗಳನ್ನು ಅರಿಯುವುದಾಗಿತ್ತು.

ಮುಂದಿನದ್ದು

"ಮಹಿಳೆ, ಭೂಮಿ ಮತ್ತು ಕಾಡು" ಕುರಿತಾದ ಅಂತರಾಷ್ಟ್ರೀಯ ಸಮ್ಮೇಳನ ಶ್ರೀಲಂಕಾದ "ಕ್ಯಾಂಡಿ" 4-6 ನವೆಂಬರ್ 1996

ಮಹಿಳೆ, ಭೂಮಿ ಹಾಗೂ ಕಾಡಿನ ಅಭಿವೃದ್ಧಿ ಕುರಿತಾಗಿ ನಡೆಯಲಿರುವ ಸಮ್ಮೇಳನ ಮುಖ್ಯವಾಗಿ ಈ ಕೆಳಕಂಡ ವಿಷಯಗಳನ್ನು ಉದ್ದೇಶಿಸಿ ಚರ್ಚಿಸಲಿದೆ.

ಭೂ ಒಡೆತನದ ಕುರಿತಾದ ಮಹಿಳೆಯ ಹಕ್ಕು, ಮಹಿಳೆ ಹಾಗೂ ಸ್ಥಳೀಯ ಮೇಲ್ವಿಚಾರಣೆ, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಕಾಯ್ದೆ ಕಾನೂನುಗಳು ಸಾಂಕ್ಸೃತಿಕ ಹಾಗೂ ವ್ಯಾವಹಾರಿಕ ಆಚರಣೆಯಲ್ಲಿ ಭೂಮಿ ಹಾಗೂ ಕಾಡಿಗೆ ಸಂಬಂಧಿಸಿದಂತೆ ಮಹಿಳೆಯ ಪಾತ್ರ ಮತ್ತು ಉಸ್ತುವಾರಿ ವಿಚಾರಗಳು. ಹೆಚ್ಚಿನ ವಿವರಗಳಿಗೆ ಈ ಮುಂದಿನ ವಿಳಾಸಕ್ಕೆ ಸಂಪರ್ಕಿಸಬಹುದು :

Prof. Anoja Wickramasinghe,
Reginal Co-Ordinator -
Corrensa,
Department of Geography,
The University of Peradeniya,
Peradeniya, Srilanka

ಸುಸ್ಥಿರ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗಾಗಿ "ನೆಲಮಟ್ಟದ ಜನರ ಶೋಧಕ ಮತ್ತು ಕತೃತ್ವ ಪ್ರವೃತ್ತಿ" [Creativity and Innovation at Grossroots] ಬಗೆಗಿನ ಅಂತರರಾಷ್ಟ್ರೀಯ ಸಮ್ಮೇಳನದ ಮತ್ತಷ್ಟು ವಿವರಗಳು

ಸ್ಥಳ : ಐ.ಐ.ಎಂ. ಅಹಮದಾಬಾದ್,
ದಿನಾಂಕ : ಜನವರಿ **11-14, 1997**

ಪ್ರೊ. ಅನಿಲ್‌ಗುಪ್ತಾರವರ "ಸೃಷ್ಟಿ" ಸಂಸ್ಥೆಯ ನೆರವಿನಿಂದ ಸಂಘಟಿಸುತ್ತಿರುವ ಈ ಸಮ್ಮೇಳನದಲ್ಲಿ ಐದು ಮುಖ್ಯ ವಿಚಾರಗಳನ್ನು ಚರ್ಚೆಗೆ ಎತ್ತಿಕೊಳ್ಳಲ್ಲಿದ್ದು, ಅವುಗಳ ವಿವರ ಈ ಕೆಳಕಂಡಂತಿಂದೆ.

- ಸಾಂಸ್ಥಿಕ ಶೋಧನೆಗಳು (Institutional Innovations)
- ಪರಿಸರ ರಕ್ಷಣೆ ಮತ್ತು ನಿರ್ವಹಣೆಗೆ "ದೇಸೀಯ ಶಿಕ್ಷಣ" (Indigenous Learning) ಪದ್ಧತಿಗಳ ಶೋಧನೆ.
- ದೇಸೀಯ ತಂತ್ರಜ್ಞಾನಗಳು ಮತ್ತು ಶೋಧನೆಗಳು.
- ದೇಸೀಯ ಜ್ಞಾನ ಮತ್ತು ಸಂಶೋಧನೆಗಳ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳು
- ನೆಲಮಟ್ಟದ ಜನರ ಶೋಧನೆ ಮತ್ತು ಸೃಷ್ಟಿಕಾರಕ ಪ್ರವೃತ್ತಿಗಳಿಗೆ ಬೆಲೆಕಟ್ಟುವ ರೀತಿಗಳು.

ಆಸಕ್ತರು

Prof. Anil K. Guptha,
Indian Intitute of Management
Vastrapura, Ahmadabad 380015

ಇವರನ್ನು ಸಂಪರ್ಕಿಸಬಹುದು.

ಹಿತ್ತಲಗಿಡದ ಬಳಗಕ್ಕೆ ಸೇರಿ, ನೀವು ಏನು ಕೊಡುಗೆ ನೀಡಬಹುದು ?

1. **ಕೃಷಿ ವಿದ್ಯಾರ್ಥಿಗಳು ಮತ್ತಿತರ ಗ್ರಾಮಾಂತರ ವಿದ್ಯಾರ್ಥಿಗಳು**
ರೈತ ಮೂಲದ ಅನುಶೋಧನೆ, ಅವರೇ ಅನುಸರಿಸುತ್ತಿರುವ ವಿಶಿಷ್ಟ ಆದರೆ ಅತ್ಯಂತ ಪರಿಣಾಮಕಾರಿ ದೇಶೀ ಕೃಷಿವಿಧಾನ, ರೀತಿ ರಿವಾಜುಗಳನ್ನು ಗುರುತಿಸಿ, ಬರೆದು ಕಳಿಸುವುದು.

2. **ಕೃಷಿ ವಿಜ್ಞಾನಿ ಮತ್ತಿತರ ವಿಜ್ಞಾನಿಗಳು**
ಹಿತ್ತಲಗಿಡ ದಾಖಲು ಮಾಡುವ ವಿಚಾರಗಳನ್ನು ಗಮನಿಸಿ, ವಿಶ್ಲೇಷಿಸಿ, ವೈಜ್ಞಾನಿಕ ಸಂಶೋಧನೆಗೆ ಒಳಪಡಿಸಿ ಮತ್ತಷ್ಟು ವ್ಯವಸ್ಥಿತಗೊಳಿಸುವುದರ ಮೂಲಕ ಜನಪರಗೊಳಿಸುವುದು.

3. **ರೈತರು**
ಅ. ತಮ್ಮ ಮತ್ತು ಸುತ್ತಮುತ್ತಲಿನ ಅನ್ವೇಷಣೆ, ನಾಟಿ ಕೃಷಿ ಪದ್ಧತಿ, ತಂತ್ರಜ್ಞಾನ, ಆಚಾರ, ವಿಚಾರಗಳನ್ನು ಹಿತ್ತಲಗಿಡದ ಗಮನಕ್ಕೆ ತರುವುದು. ಆ. ಹಿತ್ತಲಗಿಡದ ವಿಚಾರಗಳನ್ನು ಅಳವಡಿಸಿ, ಪರೀಕ್ಷಿಸಿ, ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳುವುದು.

4. **ಇತರರು**
ಹಿತ್ತಲಗಿಡ ಮತ್ತು ರೈತ ಸಮುದಾಯದ ನಡುವೆ ಕೊಂಡಿ ಏರ್ಪಡಿಸಲು ಸಹಾಯವಾಗುವುದು.

ವಾರ್ಷಿಕ ಚಂದ ವಿವರಗಳು

ರೈತರು ಮತ್ತು ವಿದ್ಯಾರ್ಥಿಗಳು	: 30 ರೂ
ಇತರರು	: 50 ರೂ
ಸಂಸ್ಥೆಗಳು	: 250 ರೂ

ಹಿತ್ತಲಗಿಡ ರೈತ, ವಿಜ್ಞಾನಿ, ವಿದ್ಯಾರ್ಥಿ ಸ್ವಯಂಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ತೆರೆದ ಅಂಚೆ

ಗೆ_ _ _ _ _ _ _ _ _ _ _ _ _

_ _ _ _ _ _ _ _ _ _ _ _ _

_ _ _ _ _ _ _ _ _ _ _ _ _

_ _ _ _ _ _ _ _ _ _ _ _ _

ವಿಳಾಸ
ಟಿ.ಎನ್.ಪ್ರಕಾಶ್ ಕಮ್ಮರಡಿ, ಸಹಾಯಕ ಪ್ರಾಧ್ಯಾಪಕರು
ಗೌರವ ಸಂಪಾದಕರು ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ
ಬೆಂಗಳೂರು - 560 024